(6) ಪ್ರಕಟಣೆಗಳು

ವಿಷಯ:- ಶ್ರೀ ಆರ್.ವಿ. ದೇಶಪಾಂಡೆ ಹಾಗೂ ಇತರರ ರಾಜೀನಾಮೆ ಅಂಗೀಕರಿಸಿರುವುದು.

ಅಧ್ಯಕ್ಷರು:ಈ ದಿನ ಬೆಳಿಗ್ಗೆ 23-6-99ರಂದು ನಡೆದ ವಿಧಾನಸಭೆಯ ಕಾರ್ಯಕಲಾಪಗಳ ಸದನ ಸಮಿತಿ ಸಭೆಯಲ್ಲಿ ಈ ಸಲದ ಅಧಿವೇಶನದ ಅವಧಿಯನ್ನು ದಿನಾಂಕ 9-7-99ರವರೆಗೆ ವಿಸ್ತರಿಸಲು ತೀರ್ಮಾನಿಸಲಾಗಿದೆ. ಈ ಅವಧಿಯಲ್ಲಿ ಅನುದಾನಗಳ ಬೇಡಿಕೆಗಳ ಮೇಲಿನ ಚರ್ಚೆ ಹಾಗೂ ಮತಕ್ಕೆ ಹಾಕುವುದು ಶಾಸನ ರಚನೆ ಪ್ರಶ್ನೋತ್ತರ ವೇಳೆ ಇತರೆ ಚರ್ಚೆ ನಡೆಸಲು ಕಾರ್ಯಕಲಾಪಗಳ ಸದನ ಸಮಿತಿಯಲ್ಲಿ ತೀರ್ಮಾನಿಸಲಾಗಿದೆ. ಸದನ ಇದಕ್ಕೆ ಒಪ್ಪಿಗೆ ನೀಡಿದೆಯೆಂದು ಭಾವಿಸುತ್ತೇನೆ.

10ನೇಯ ವಿಧಾನಸಭೆಗೆ ಸದಸ್ಯರಾಗಿ ಆಯ್ಕೆಯಾಗಿದ್ದ ಶ್ರೀ ಆರ್.ವಿ ದೇಶಪಾಂಡೆಯವರು ತಮ್ಮ ಸದಸ್ಯತ್ವಕ್ಕೆ ರಾಜೀನಾಮೆಯನ್ನು ನೀಡಿದ್ದಾರೆ. ದಿನಾಂಕ2-6-99ಕ್ಕೆ ಜಾರಿಗೆ ಬರುವಂತೆ ಅಂಗೀಕರಿಸಲಾಗಿದೆ. ಅದೇ ರೀತಿ ಪಿ.ಸಿ.ಸಿದ್ದನಗೌಡರ್, ಸಹ ರಾಜೀನಾಮೆ ನೀಡಿರುತ್ತಾರೆ. ದಿನಾಂಕ 21-6-99ರಿಂದ ಜಾರಿಗೆ ಬರುವಂತೆ ಅಂಗೀಕರಿಸಲಾಗಿದೆ. ಬಿ.ಆರ್. ಯಾವಗಲ್‌ರವರೂ ಸಹ ರಾಜೀನಾಮೆಯನ್ನು ನೀಡಿರುತ್ತಾರೆ ದಿನಾಂಕ 21-6-99ರಿಂದ ಜಾರಿಗೆ ಬರುವಂತೆ ಅವರ ರಾಜೀನಾಮೆಯನ್ನು ಅಂಗೀಕರಿಸಲಾಗಿದೆ. ಗುರುಪಾದಪ್ಪ ನಾಗಮಾರಪಲ್ಲಿ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ನೀಡಿರುತ್ತಾರೆ ದಿನಾಂಕ 23-6-99 ರಿಂದ ಜಾರಿಗೆ ಬರುವಂತೆ ಅವರ ರಾಜೀನಾಮೆಯನ್ನು ಅಂಗೀಕರಿಸಲಾಗಿದೆ.

(7) ನಿಲುವಳಿ ಸೂಚನೆ (ಅನುಮತಿ ಕೋರಿಕೆ)

ವಿಷಯ:-ಕರ್ನಾಟಕ ಸಹಕಾರ ಸಂಘಗಳ ಕಾಯಿದೆ (ತಿದ್ದುಪಡಿ) ವಿಧೇಯಕದ ಬಗ್ಗೆ

ಶ್ರೀ ಮಲ್ಲಿಕಾರ್ಜುನ ಖರ್ಗೆ(ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೇ ಒಂದು ಮಹತ್ವದ ವಿಚಾರ ಪ್ರಸ್ತಾಪ ಮಾಡುತ್ತಿದ್ದೇನೆ. ಆದರೆ, ಸದನದಲ್ಲಿ ಸಂಬಂಧಪಟ್ಟ ಮಂತ್ರಿಗಳೇ ಇಲ್ಲ ಸಾರ್, ಶರಣರೇ ಇಲ್ಲವೆಂದರೆ, ಅನುಭವ ಮಂಟಪ ನಡೆಯುವುದು ಹೇಗೆ? ಕರ್ನಾಟಕ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್‌ಗೆ ಮಾನ್ಯಮಂತ್ರಿಗಳು ಒಂದು..

MR.SPEAKER :- Now the understanding is limited. Mr.Kharge,ತಾವು ನಿಲುವಳಿ ಸೂಚನೆಯ ನಿಯಮಗಳಿಗನುಸಾರವಾಗಿ ಇದನ್ನು ಕೊಟ್ಟಿದ್ದೀರಿ. Actually, it doesn 't constitute a matter being raised under Adjournment Motion.

ವಿರೋಧಪಕ್ಷದ ನಾಯಕರಾಗಿ ತಾವು ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದಾಗ the Chair has an obligation to permit you to raise. You can mention this matter in brief. Details not required. We will await the reply of the government. Then, we will decide as to whether we should take it up for a further discussion or to close it. You raise this matter. Let the government give its explanation.. If you are all collectively convinced that it needs further discussion, I am prepared to take up this matter for further discussion also.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಇದು ನಿಲುವಳಿ ಸೂಚನೆಯ ವ್ಯಾಪ್ತಿಗೆ ಬರದೇ ಇದ್ದರೂ ಕೂಡ ತಾವು ಅನುಮತಿ ಕೊಟ್ಟಿದ್ದೀರಿ. ಅದಕ್ಕಾಗಿ ನಾನು ತಮ್ಮನ್ನು ಅಭಿವಂದಿಸುತ್ತೇನೆ. ಆದರೆ, ನಾವು ಈ ರೂಪದಲ್ಲಿ ತರತಕ್ಕ ಅವಶ್ಯಕತೆ ಏಕಿತ್ತು ಎಂದರೆ, ಕೂಡಲೇ ಚರ್ಚೆಗೆ ಬರಲಿ ಎಂದು. ಎರಡನೆಯದು ಸರ್ಕಾರ ಬಹಳ ತರಾತುರಿಯಲ್ಲಿದೆ. 5-6ದಿವಸದಲ್ಲಿ ಸದನವನ್ನು ಮುಗಿಸಿಕೊಂಡು ಹೋಗಬೇಕೆಂಬ ದೃಷ್ಟಿಯಿಂದ ನಮ್ಮ ಅಜೆಂಡಾ ಇತ್ತು. ಆದರೆ ಇವತ್ತು ಕಲಾಪ ಸಲಹಾ ಸಮಿತಿಯ ಸಭೆಯಲ್ಲಿ ನಾವು ಚರ್ಚೆ ಮಾಡಿ, ಜುಲೈ 9ರ ವರೆಗೆ ವಿಸ್ತರಣೆ ಮಾಡಿಸಿದ್ದೇವೆ. ಇನ್ನೂ ಅವಶ್ಯಕತೆ ಬದ್ದರೆ 3-4ದಿವಸ ವಿಸ್ತರಣೆ ಮಾಡಬೇಕೆಂಬ ಅಭಿಪ್ರಾಯ ಕೂಡ ಬಂತು. ಅದಕ್ಕೂ ಕೂಡ ಅವರು ಒಪ್ಪಿಗೆ ಕೊಟ್ಟಿದ್ದಾರೆ. ಪ್ರಮುಖವಾಗಿ ಪ್ರಸ್ತಾಪ ಮಾಡತಕ್ಕ ವಿಷಯವೇ ನೆಂದರೆ ಈ ಒಂದು ಕರ್ನಾಟಕ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್‌ಗೆ ಮಾನ್ಯ ಮಂತ್ರಿಗಳು ಒಂದು ತಿದ್ದುಪಡಿಯನ್ನು ತಂದಿದ್ದಾರೆ. ಇದಕ್ಕೆ ಮೊದಲನೇ ಸಲ ತಂದಂಥ ತಿದ್ದುಪಡಿ 1ನೇ ಜುಲೈ1998. ಆ ತಿದ್ದುಪಡಿಯಲ್ಲಿ ಏನಿತ್ತು ಎಂದರೆ,

"Elected members of the committee shall elect from among themselves the office-bearers of the cooperative Society. The election of the office-bearers shall by secret ballot."

ಆಂದರೆ ಚುನಾಯಿತ ಪ್ರತಿನಿಧಿಗಳು ಮಾತ್ರ, ಅಧ್ಯಕ್ಷರು ಮತ್ತು ಆಫೀಸ್ ಬೇರರ್ಸ್‌ನ್ನು ಚುನಾಯಿಸ ಬೇಕೆಂದು ತಿದ್ದುಪಡಿ ತಂದು, ಇದನ್ನು ಪಾಸ್ ಮಾಡಲಾಯಿತು. ಹಿಂದೆ ಪ್ರಿನ್ಸಿಪಲ್ ಆಕ್ಟ್‌ನಲ್ಲಿ, ಪ್ರಮುಖವಾದ ಕಾನೂನಿನಲ್ಲಿ ಏನಿತ್ತು, ನಾಮಿನೇಟೆಡ್ ಮೆಂಬರ್ಸ್ ಕೂಡ ಓಟನ್ನು ಚಲಾಯಿಸಬಹುದು ಎಂದಿತ್ತು. ಇದನ್ನು ಹಿಂದೆ ಯಾವ ಉದ್ದೇಶದಿಂದ ಮಾಡಿದ್ದರೆಂದರೆ, ಶ್ರೀ ಮಾನ್ ದೇವರಾಜ ಅರಸು ಅವರ ಕಾಲದಲ್ಲಿ ಈ ಸಮಾಜದ ವ್ಯವಸ್ಥೆಯನ್ನು ನೋಡಿಕೊಂಡು ಮತ್ತು ಸೊಸೈಟಿಗಳಲ್ಲಿ, ಬ್ಯಾಂಕುಗಳಲ್ಲಿ ಪಿ ಎಲ್‌ಡಿ. ಬ್ಯಾಂಕುಗಳಲ್ಲಿ ಕನ್‌ಸ್ಯೂಮರ್ಸ್ ಸೊಸೈಟಿಗಳಲ್ಲಿ ಈ ಎಲ್ಲಾ ಕಡೆ ನೋಡಿದಾಗ, ಕೆಲವೇ ಜನರ ಕೈಯಲ್ಲಿ ಕೆಲವೇ ಜನರ ಹಿಡಿತದಲ್ಲಿ ಈ ಸಂಘಸಂಸ್ಥೆಗಳು ಇದ್ದವು. :"Vested interest"- ಅದರದೇ ಒಂದು ಕ್ಲಾಸ್. ಆದಕ್ಕೆ ಯಾವುದೇ ಜಾತಿ, ಕುಲ, ಪಂಥ, ಮತ, ಪಕ್ಷಗಳು ಇಲ್ಲ. ಹೆಚ್ಚುಕಡಿಮೆ ತಮಗೆ ಬೇಕೆಂದಲ್ಲಿ ಮಾಡಿಕೊಂಡು ಹೋಗತಕ್ಕಂಥ, ಅವರಿಗೆ ಯಾರನ್ನು ಅಧ್ಯಕ್ಷರು ಮಾಡಬೇಕೋ ಅದನ್ನು ಮಾಡುತ್ತಿದ್ದರು, ಯಾರಿಗೆ ಬೇಡವೋ ಅವರನ್ನು ಬಿಡುತ್ತಾ ಇದ್ದರು. ಬೇರೆ ಸದಸ್ಯರನ್ನು ಅಥವಾ ಬೇರೆ ಜನರನ್ನು ಇನ್‌ವಾಲ್ವ್ ಮಾಡಿಕೊಂಡು ಅವರಿಗೆ, ಅದರ ಲಾಭವನ್ನು ಕೊಡತಕ್ಕಂಥಾದ್ದು ಅಥವಾ ಆ ಸಂಸ್ಥೆಯ ವತಿಯಿಂದ ಲಾಭ ಸಿಗತಕ್ಕದಂಥಾದ್ದು ಆಗುತ್ತಾ ಇರಲಿಲ್ಲ. ಅದಕ್ಕೆ ಮಾನ್ಯ ರಂಗನಾಥ್‌ರವರು ಸಹಕಾರ ಸಚಿವರಾಗಿದ್ದಾಗ ಶ್ರೀಮಾನ್ ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿದ್ದಾಗ ಎಲ್ಲಾ ಶಾಸಕರ ಕನ್‌ಸೆನ್ಸಸ್, ತೆಗೆದು ಕೊಂಡರು. ಆ ಕನ್‌ಸೆನ್ಸ್‌ಸ್‌ನಲ್ಲಿ ಏನೆಂದರೆ, ಪ್ರತಿಯೊಂದು ಸಂಘಸಂಸ್ಥೆಗಳಲ್ಲಿ ಸರ್ಕಾರದವರೂ ಕೂಡ ಮೂರು ನಾಮಿನೇಷನ್ ಮಾಡಬೇಕು, ಯಾವ ಜನರಿಗೆ ಅದರಲ್ಲಿ ಸಿಕ್ಕಿಲ್ಲ ಅಥವಾ ಯಾರ ಇನ್‌ವಾಲ್ವ್‌ಮೆಂಟ್ ಅದರಲ್ಲಿ ಇಲ್ಲ ಅಂತಹ ವರ್ಗದವರಿಗೆ ಇದನ್ನು ನಾಮಿನೇಟ್ ಮಾಡಿ ಅವರಿಗೂ ಕೂಡ ಇದರಲ್ಲಿ ಇನ್‌ವಾಲ್ವ್ ಮಾಡಬೇಕೆಂಬ ದೃಷ್ಟಿಯಿಂದ ಈ ನಾಮಿನೇಷನ್ ಸೆಕ್ಷನ್. 28 (ಎ)ಸೇರಿಸಿದರು "28 (a) Management of cooperative society vests in the Committee: The management of the cooperative society shall vest in a committee constituted in accordance with this Act, the rules and the bylaws of such society. The Committee shall exercise such powers, discharge such duties and per-

form such functions as may be confirmed or imposed upon it by this Act, the rules and the byelaws."

ಅಂದರೆ, ಈ ಮ್ಯಾನೇಜ್‌ಮೆಂಟ್ ಮಾಡತಕ್ಕಂಥಾದ್ದನ್ನು ಕಮಿಟಿಗೆ ಕೊಟ್ಟರು. ಆ ಕಮಿಟಿ ಎಲೆಕ್ಟೆಡ್ ಆದರೂ ಇರಬಹುದು ಅಥವಾ ಆ ಕಮಿಟಿಯಲ್ಲಿ ನಾಮಿನೇಟೆಡ್ ಮೆಂಬರ್ ಆದರೂ ಇರಬಹದು. ಅವರಿಗೆ ಈ ಅವಕಾಶವನ್ನು ಮಾಡಿಕೊಟ್ಟಿದ್ದರು. ಆದರೆ, ನಾಮಿನೇಟ್‌ಡ್ ಮೆಂಬರುಗಳಿಗೆ ಈ ಹಕ್ಕನ್ನು ಕೊಡಬಾರದು ಏಕೆಂದರೆ ಪ್ರಜಾಪ್ರಭುತ್ವದ ನಿಯಮದ ಪ್ರಕಾರ ತತ್ವದ ಪ್ರಕಾರ ಚುನಾಯಿತರಾದ ಸದಸ್ಯರಿಗೆ ಮಾತ್ರ ಮ್ಯಾನೇಜ್ ಮಾಡತಕ್ಕಂಥಾದ್ದು. ಅಧ್ಯಕ್ಷರಾಗತಕ್ಕಂಥಾದ್ದು ಉಪಧ್ಯಾಕ್ಷರಾಗ ತಕ್ಕಂಥಾದ್ದು ಕೊಡಬೇಕು. ಅದಕ್ಕೆ ಹಿಂದೆ ಮಾಡಿದಂಥ ತಿದ್ದುಪಡಿ ಅದು ಸರಿಯಲ್ಲ ಅದನ್ನು ತಳ್ಳಿಹಾಕಬೇಕೆಂದು ಹೇಳಿ ಬಹಳಷ್ಟು ವಾದ ಮಾಡಿ ಮಾನ್ಯ ಸಹಕಾರಿ ಸಚಿವರು ಈ ತಿದ್ದುಪಡಿಯನ್ನು ತಂದರು. ಯಾವ ತಿದ್ದುಪಡಿ ಎಂದರೆ,28(ಎ) ಗೆ6ನೆ ಪ್ರಾವಿಸೊ ಮಾಡಿದರು.

"The elected members of the committee shall elect from among themselves the office-bearers of the cooperative society, The election of the Office- bearers shall be by secret ballot."

ಅಂದರೆ ಚುನಾಯಿತ ಪ್ರತಿನಿಧಿಗಳು ಮಾತ್ರ ಮತವನ್ನು ಚಲಾಯಿಸಬೇಕು ಬೇರೆಯವರಿಗೆ ಇಲ್ಲ ಎನ್ನತಕ್ಕಂಥಾದ್ದು. ಅಂದರೆ, ಹಿಂದೆ ಮಾಡಿದಂಥಾದ್ದು ಸಾಮಾಜಿಕ ನ್ಯಾಯವನ್ನು ಕೊಡಬೇಕೆಂಬ ದೃಷ್ಟಿಯಿಂದ ನಾಮಿನೇಷನ್ ಮಾಡಿ , ಅವರಿಗೂ ಕೂಡ, ಅದರಲ್ಲಿ ಭಾಗವಹಿಸತಕ್ಕ ಹಕ್ಕು ಕೊಟ್ಟಿತ್ತು. ಆ ಹಕ್ಕು ಸರಿಯಿಲ್ಲ ಎಂಬ ವಾದವನ್ನು ಇಟ್ಟುಕೊಂಡು ಇಲ್ಲಿ ಮಂಡಿಸಿ, ಅದಕ್ಕೆ ಸಾಕಷ್ಟು ತಮ್ಮದೇ ಆದಂಥ ಚರ್ಚೆ, ವಾದ, ವಿವಾದ ಎಲ್ಲಾ ಮಾಡಿದರು. ಮಾಡಿದ ಮೇಲೆ ಈ ತಿದ್ದುಪಡಿ ಇಲ್ಲಿ ಒಂದು, ಪಾಸಾಯಿತು. ಪಾಸಾದ ನಂತರ, ಪುನಃ ತರಾತುರಿಯಲ್ಲಿ ಇವತ್ತು ಆರ್ಡಿನೆನ್ಸ್ ಇಷ್ಯೂ ಮಾಡಿದ್ದಾರೆ.The ordinance to amend the Karnataka cooperative Societies' Act. The Ordinance may be called the Karnataka cooperative socties' ordinance, 1999. It shall come into force on such date as the State government may by notification appoint. The Amendment of Section 28 (a), Which reads thus:

"The Karnataka coperative Societies' Act, 1959 hereinafter referred to as the Principal Act, in sub-section 6 for the words 'elected members of the committee, the words "members of the committee" shall be substituted."

ಅಂದರೆ ಚುನಾಯಿತ ಸದಸ್ಯರು ಎಂದು ಪುನಃ ತೆಗೆದು ಪುನಃ ಮೆಂಬರ್ಸ್ ಆಫ್ ದಿ ಕಮಿಟಿ ಎಂದರೆ ಮೊದಲು ಹೇಗಿತ್ತು ಆ ರೀತಿಯಾಗಿ ಮಾಡತಕ್ಕ ಒಂದು ಆರ್ಡಿನೆನ್ಸ್‌ನ್ನು ತಂದರು. ಸೆಕ್ಷನ್28 (ಎ) ಸೆಕ್ಷನ್ 29 (ಎಫ್) ಈ ಎರಡು ಅಮೆಂಡ್‌ಮೆಂಟ್ ತಂದರು. ಎಲೆಕ್ಟೆಡ್ ಮೆಂಬರ್ಸ್ ಎಂದು ಇದ್ದರಲ್ಲಾ , ಅದಕ್ಕೆ ಅಮೆಂಡ್‌ಮೆಂಟ್ ತಂದು ಪುನಃ ಈ ರೀತೀಯಾಗಿ ಅಮೆಂಡ್‌ಮೆಂಟ್ ಮಾಡಿಕೊಳ್ಳುವುದಕ್ಕೆ ಹೇಳಿದರು. ಅದನ್ನು ಡಿಲೀಟ್ ಮಾಡಿಸಿದೆವು. ಯಾವುದು ಎಲೆಕ್ಟೆಡ್ ಎಂಬುದನ್ನು. ಬರೀ ಕಮಿಟಿ ಎಂದಿತ್ತು. ಕಮಿಟಿ ಎಂದರೆ, ನಾಮಿನೇಟೆಡ್ ಬಂದರು ಮತ್ತು ಎಲೆಕ್ಟೆಡ್ ಕೂಡ ಬಂದರು. ಅವರಿಗೆ ಅಧಿಕಾರ ಕೊಡತಕ್ಕಂತಾದ್ದು. ಸಹಕಾರಿ ರಂಗದಲ್ಲಿ ನಾಮಿನೇಷನ್ ಇರಬಾರದು ಎಂಬ ವಾದವನ್ನು ಇಟ್ಟು, ಸುಮಾರು 2ವರ್ಷ 3ವರ್ಷ ಅವರು ಹೋರಾಟವನ್ನು ಮಾಡಿದರು. ಈಗ

ಯಾವ ಆಧಾರದ ಮೇಲೆ ಪುನಃ ಇವತ್ತು ನಾಮಿನೇಟೆಡ್ ಮೆಂಬರ್ಸ್‌ಗೆ ಎಲೆಕ್ಟ್ ಮಾಡುವ ಅಧಿಕಾರ ಅಷ್ಟೇ ಅಲ್ಲ, ಎಲೆಕ್ಷನ್‌ನಲ್ಲಿ ಎಲೆಕ್ಟ್ ಆಗಿ ಬರತಕ್ಕಂತಾದ್ದು ಕೂಡ, ಅಧಿಕಾರವನ್ನು ಕೊಟ್ಟಿದ್ದೀರಿ. ಸೆಕ್ಷನ್ 28 (ಎ) ಪ್ರಕಾರ ಮತ ಹಾಕತಕ್ಕಂಥಾದ್ದು ಅಂದರೆ, ನೀವು ಹೇಳುವುದೇ ಒಂದು, ನುಡಿಯುವುದೇ ಒಂದು, ನಡೆಯುವುದೇ ಒಂದು. ನನಗನಿಸುತ್ತದೆ, ಅವರು ಇಲ್ಲಿ ಒಂದು ಮಾತು ಹೇಳಿದ್ದರು. ನಾಮಿನೇಷನ್ ಮಾಡತಕ್ಕ ಅಥವಾ ನಾಮಿನೇಟೆಡ್ ಮೆಂಬರ್ಸ್‌ಗೆ ಏನೇ ಹಕ್ಕು ನಮ್ಮ ಸರ್ಕಾರ ಕೊಟ್ಟರೆ, ಒಂದು ಕ್ಷಣವೂ ಕೂಡ ಈ ಸ್ಥಾನದಲ್ಲಿ ಇರುವುದಿಲ್ಲವೆಂಬ ಮಾತನ್ನು ಸಹಕಾರಿ ಸಚಿವರೇ ಹೇಳಿದ್ದರು.

12.50 ಪಿ.ಎಂ.

ಅವರಿಗೆ ಏನಾದರೂ ಆತ್ಮಗೌರವ ಇದ್ದರೆ ರಾಜೀನಾಮೆ ಕೊಡಬೇಕು. ಅವರಿಗೆ ನಿಜವಾಗಿಯೂ ನಾಚಿಕೆ ಇದ್ದರೆ ಅವರು ರಾಜೀನಾಮೆ ಕೊಡಬೇಕು. ಒಂದು ಕಡೆ ತತ್ವ ಹೇಳುವುದು ಇನ್ನೊಂದು ಕಡೆ ನಾಮಿನೇಷನ್ಸ್ ಮಾಡುವುದು. ದೇಶದ ತುಂಬಾ ಹೇಳುವುದಕ್ಕೆ ನಾಮಿನೇಷನ್ಸ್ ಮಾಡಿದರೆ ಯಾರಿಗೆ ಕಾಳಜಿ ಇಲ್ಲ ಅಂತಹ ಜನ ಬರುತ್ತಾರೆಂದು ಹೇಳುವುದು. ಬೇರೆ ಬೇರೆಯವರನ್ನು ಇದರಲ್ಲಿ ಸೇರಿಸಿಕೊಂಡು ಈ ಸಂಸ್ಥೆಗಳನ್ನು ಹಾಳು ಮಾಡುತ್ತಾರೆಂದು ಹೇಳಿದ ಜನ ನೀವು ಒಂದು ವರ್ಷ ಎರಡು ವರ್ಷ ಇದರ ಬಗ್ಗೆ ಕ್ಯಾಬಿನೇಟ್‌ನಲ್ಲಿ ತಕರಾರು ನಡೆಯಿತು. ಈ ಸದನದಲ್ಲಿ ಅನೇಕ ಸಾರಿ ನಾವು ನಿಮಗೆ ಹೇಳಿದ್ದೇವೆ, ಆಗ ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಮಾಡಿದ್ದೇವೆಂದು ಹೇಳಿ ಈಗ ಈ ಸಂಸ್ಥೆಗಳನ್ನು ನಿಮ್ಮ ಕೈಯಲ್ಲಿಟ್ಟುಕೊಳ್ಳಬೇಕೆಂದು ಹೇಳಿ, ನಿಮ್ಮ ಮಕ್ಕಳು ಚುನಾಯಿಸಿ ಬರಬೇಕೆಂದು ಹೇಳಿ, ಇವತ್ತು ಸಹಕಾರಿ ರಂಗದಲ್ಲಿರತಕ್ಕಂಥ ಮಂತ್ರಿಗಳು, ಅವರ ಮಗ ಇವತ್ತು ನಾಲ್ಕು ಸಂಸ್ಥೆಗಳಿಗೆ ಸದಸ್ಯ ಅಥವಾ ಅಧ್ಯಕ್ಷ ಆಗಬಾರದು ಎಂದು ಇಲ್ಲ, ಎಲೆಕ್ಷನ್, ನಾಮಿನೇಷನ್ ಕೂಡ ಇದೆ. ಅವರು ಡೆಮಾಕ್ರಟಿಕ್ ಪದ್ಧತಿಯಲ್ಲಿ ಚುನಾಯಿತರಾಗಿ ಬರುತ್ತಿದ್ದರೆಂದರೆ ನೀವು ಮಾಡಿ ಕೊಳ್ಳಿ ಆದರೆ ನಾವು ನಾಮಿನೇಷನ್ ಮೆಂಬರ್ಸ್‌ಗೆ ಮತ ಚಲಾಯಿಸುವ ಅಧಿಕಾರ ಕೊಡುವುದಿಲ್ಲ ಎಂದು ಹೇಳಿ, ನಾಮಿನೇಷನ್ ಆದಂತಹ ಸದಸ್ಯರು ಅಧ್ಯಕ್ಷ ಆಗುವುದಿಲ್ಲವೆಂದು ಹೇಳಿ, ಪುನಃ ನೀವು ಹೇಗೆ ತಂದಿರಿ? ಅಂದರೆ ಅಧಿಕಾರಕ್ಕೆ ಬಂದವರೆಲ್ಲರೂ ತಮ್ಮ ಮಕ್ಕಳನ್ನು ತರುವುದಕೋಸ್ಕರ ತಮಗೆ ಬೇಕಾದವರನ್ನು ತರುವುದಕೋಸ್ಕರ ಹೀಗೆ ಮಾಡಿದ್ದೀರಿ. ಒಂದೊಂದು ಜಾತಿಯವರೇ10-20 ಜನ ಡೈರೆಕ್ಟರ್ಸ್. ಒಂದೊಂದು ಜಿಲ್ಲೆಗಳಲ್ಲಿ.

ಶ್ರೀ ಸಿ ಎಂ ಉದಾಸಿ:-ನಿಮ್ಮ ಕಾಲದಲ್ಲಿ ನೀವು ಮಾಡಿದ್ದೀರಲ್ಲಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಆಗ ನೀವು ಏನು ಹೇಳಿದಿರಿ? ಇದು ಸರಿಯಲ್ಲ. ಇದು ಪ್ರಜಾಪ್ರಭುತ್ವಕ್ಕೆ ಕೊಡಲಿ ಪೆಟ್ಟು. ಈಗ ಎಲ್ಲಿ ಹೋಯಿತು ನಿಮ್ಮ ಕೊಡಲಿ ಪೆಟ್ಟು? ನಾವು ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿದ್ದು ಮಾಡಿದ್ದು. ನೀವು ಈಗ ನಿಮ್ಮ ಮಕ್ಕಳಿಗೆ ಮಾಡುವುದಕೋಸ್ಕರ ಅಲ್ಲ? ಇವತ್ತಿನದಿವಸ ಸರ್ಕಾರದವರು ಪ್ರತಿಯೊಂದು ಕಡೆ ಹಸ್ತಕ್ಷೇಪ ಮಾಡುತ್ತಿದ್ದಾರೆ.

ಶ್ರೀ ಸಿ ಎಂ ಉದಾಸಿ:- ನೀವು ಈ ಮಾತು ಹೇಳುವುದಕ್ಕೆ ನೈತಿಕವಾಗಿ ಹಕ್ಕು ಇದೆಯೇ ಎನ್ನುವ ಪ್ರಶ್ನೆಬರುತ್ತದೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆ ಯವರು ಸಹ ಸಹಕಾರಿ ಸಚಿವರಾಗಿ ಇದ್ದರು.

ಕರ್ನಾಟಕ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ 18 ವರ್ಷಗಳ ನಂತರ ಚುನಾವಣೆ ನಡೆದಾಗ 18 ಜನ ಚುನಾಯುತರಾಗಿದ್ದರು ಅದಕ್ಕೆ 11 ಜನರನ್ನು ನಾಮಿನೇಷನ್ ಮಾಡಿದಂತಹ ಮಲ್ಲಿಕಾರ್ಜುನ

ಖರ್ಗೆಯವರು ಇವತ್ತು ಈ ನೈತಿಕ ಹಕ್ಕು ಹೇಳುವುದಕ್ಕೆ ಬರುತ್ತದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಹಕ್ಕು ಇದೆ. ಏಕೆಂದರೆ ಆಗ ಕಾನೂನು ಇತ್ತು. ಆ ಕಾನೂನು ಪ್ರಕಾರ ನಾನು ಮಾಡಿದ್ದೇನೆ. ನೀವು ಆ ಕಾನೂನನ್ನು ತಿದ್ದುಪಡಿ ಮಾಡಿದ್ದೀರಲ್ಲಾ.

ಅಧ್ಯಕ್ಷರು:- ನಾವು ಮಾಡಿದ ತಪ್ಪು. ಅವರು ಮಾಡಿದ ತಪ್ಪಿನಿಂದ ಸರಿ ಹೋಗುವುದಿಲ್ಲ. ನಾನು ಏನು ಹೇಳುತ್ತಿದ್ದೇನೆಂದರೆ ನಾವು ಮಾಡಿದ ತಪ್ಪು. ಅವರು ಮಾಡಿರಬಹುದಾದ ತಪ್ಪಿನಿಂದ ಆ ತಪ್ಪು ಸರಿಹೋಗು ವುದಿಲ್ಲ. ನೀವು ಮತ್ತು ನಾನು ಏಕ ಕಾಲಕ್ಕೆ ಹೈಕೋರ್ಟಿನಲ್ಲಿ ಓಡಾಡುತ್ತಿದ್ದೆವು. ಅವರು ಒಂದು ಮಾತು ಹೇಳಿದರು ಕಾನೂನಿನಲ್ಲಿ ಅವಕಾಶ ಇತ್ತು. ನಾನು ಮಾಡಿದ್ದೇನೆಂದು. ಕಾನೂನಿನಲ್ಲಿ ಇಲ್ಲದ್ದನ್ನು ನೀವು ಮಾಡಿದಿರಿ ಎಂದು ನೀವು ಹೇಳಿದಿರಿ. ಅದಕ್ಕೆ ನೀವು ಕೋರ್ಟಿಗೆ ಹೋದಿರಿ. ನಿಮಗೆ ಅನುಕೂಲ ಆಯಿತು. ಆದರೆ ನೀವು ಮಾಡಿದ್ದು ಏನು ಎಂದು ಅವರು ಪ್ರಶ್ನೆ ಮಾಡುತ್ತಿದ್ದಾರೆ. ನಿಮ್ಮ ಉಪ ಮುಖ್ಯಮಂತ್ರಿಗಳನ್ನು ಕೇಳಿ. ಅಂತರಂಗದಲ್ಲಿ. ಅವರು ಏನು ಹೇಳುತ್ತಾರೋ ಎಂದು ಕೇಳಿ ತಿಳಿದುಕೊಳ್ಳಿ. ನಿಮ್ಮ ಕಾನೂನು ಮಂತ್ರಿಗಳನ್ನು ಕೇಳಿ. ಬೇರೆ ಮಂತ್ರಿಗಳನ್ನು ಕೇಳಿ. ಸುಮ್ಮನೆ ಏಕೆ ? ಎಲ್ಲಾ ಹೊಲಸು ಎದ್ದು ಹೋಗಿದೆ. ಏಕೆ ಸಮರ್ಥನೆ ಮಾಡಿಕೊಳ್ಳುವುದಕ್ಕೆ ಹೋಗುತ್ತೀರಿ ? It is a mess.

ನಿಮ್ಮ ಆತ್ಮ ಒಪ್ಪುತ್ತದೆಯೇ ಹೇಳಿ ನಡೆದಿರುವುದೆಲ್ಲಾ ? ಪಾರ್ಟಿ ಪಂಗಡ ಎಲ್ಲಾಬಿಟ್ಟು ಬಿಡಿ. ಅವರು ಎದ್ದು ನಿಂತು ಹೇಳಲಿ. ನನ್ನ ಆತ್ಮ ಇದನ್ನು ಒಪ್ಪಿದೆ ಎಂದು. ಕೊಂದು ಬಿಟ್ಟಿದ್ದೇವೆ ನಮ್ಮನ್ನು ನಾವು ಏನು ಉಳಿಸಿಕೊಂಡಿದ್ದೇವೆ ನಾವು.?

ಶ್ರೀ ಮಲ್ಲಿಕಾರ್ಜುನ ಖರ್ಗೆ :- ತಾವು ಹೇಳಿದಿರಿ ನಾನು ಒಪ್ಪಿಕೊಂಡೆ. ನಾನು ಹೇಳಿದೆ. ಅಂದಿನ ಕಾನೂನು ಪ್ರಕಾರ ಮಾಡಿದ್ದು ತಪ್ಪು ಎಂದು ಹೇಳಿದರು. ಆಯಿತು. ನೀವು ಇದು ಸರಿ ಇಲ್ಲ ಎಂದು ತಿದ್ದುಪಡಿಯನ್ನೇ ತಂದಿರಲ್ಲಾ. ಆ ತಿದ್ದುಪಡಿಯನ್ನು ತಂದು ಇನ್ನೊಂದು ತಿದ್ದುಪಡಿಯನ್ನು ಈಗ ತಂದು ಅಧಿಕಾರವನ್ನು ತೆಗೆದುಕೊಂಡು ಆ ಅಧಿಕಾರದಿಂದ ನಾಮಿನೇಷನ್ಸ್ ಮಾಡುತ್ತಿದ್ದೀರಿ. ಆದರೆ ನ್ಯಾಚುರಲ್ ಕೋರ್ಸ್‌ನಲ್ಲಿ ಯಾರೇ ಆಗಲಿ ಚುನಾವಣೆಯಲ್ಲಿ ಗೆದ್ದು ಬಂದರೆ ಬರಲಿ. ಇದು ಡೆಮಾಕ್ರಟಿಕ್ ಪ್ರೋಸೆಸ್. ಒಂದು, ಎರಡು ಮೂರು, ನಾಲ್ಕು ಎಲ್ಲಾ ಸಂಸ್ಥೆಗಳಲ್ಲಿ ನೀವೇ. ಹೆಚ್ ಕೆ ಪಾಟೀಲ್ ಕೆ ಎಚ್ ಪಾಟೀಲ್ ಅವರ ಉದಾಹರಣೆ ಯನ್ನು ತೆಗೆದುಕೊಂಡು ನೀವು ಹೇಳುತ್ತೀರಾ ?

ನೋಡಿ ನೀವು ಬಂದು ಇಲ್ಲಿ ಹೇಳಿದಿರಿ, ನಾಮಿನೇಷನ್ಸ್ ಏನಾದರು ಆದರೆ ಅಥವಾ ನಾಮಿನೇಷನ್ಸ್ ಮಾಡಿ ಏನಾದರೂ ಒಂದು ಸಂಸ್ಥೆಯನ್ನು ನಡೆಸಬೇಕಾದರೆ ಒಂದು ಕ್ಷಣ ಕೂಡ ನಾವು ಅಧಿಕಾರದಲ್ಲಿ ಇರುವುದಿಲ್ಲ ಎನ್ನುವಂತಹ ಮಾತನ್ನು ಹೇಳಿದಿರೋ ಇಲ್ಲವೋ ಕೇಳಿ?

ಅಧ್ಯಕ್ಷರು:-ಒಂದು ಕ್ಷಣ. ಉದಾಸಿಯವರೇ. ಕೆ ಎಚ್ ಪಾಟೀಲರು ನಮ್ಮ ಎದುರಿಗೆ ಜೀವಂತವಾಗಿಲ್ಲ. ನಾನು ಗದಗ್‌ಗೆ ಹೋಗಿದ್ದೇನೆ. ಹುಲಿಕೋಟೆಗೆ ಹೋಗಿದ್ದೇನೆ. ಆ ಸಂಸ್ಥೆಗಳನ್ನೆಲ್ಲಾ ನೋಡಿ ಬಂದಿದ್ದೇನೆ. ಕೆ ಎಚ್ ಪಾಟೀಲರಂತೆ ಅವರು ಮಾಡಿದ ಕೆಲಸವನ್ನು ಹೆಚ್ ಕೆ ಪಾಟೀಲರು, ಡಿ ಆರ್ ಪಾಟೀಲರು ಮಾಡಿದಂತೆ ಎಲ್ಲಾ ತಂದೆ ಮಕ್ಕಳು ಮಾಡುವುದಾದರೆ ನಿಜವಾಗಿಯೂ ಅಂತಹ ಕುಟುಂಬಗಳು ಜಾಸ್ತಿಯಾಗಲಿ ಎಂದು ನಾನು ಹಾರೈಸುತ್ತೇನೆ. ಆ ತರಹ ಕೆಲಸ ಮಾಡುವಂಥವರನ್ನು ಅಥವಾ ಅಂತಹ ಸಂಸ್ಥೆಗಳನ್ನು ಕಟ್ಟುವಂಥವರನ್ನು ನಾವು ಮೆಚ್ಚಬೇಕು. ಬೇರೆ ಏನಾದರೂ ರಾಜಕಾರಣ ಇರಬಹುದು ಅದು ನನಗೆ ಸಂಬಂಧವಿಲ್ಲ. ಸಹಕಾರಿ ಸಂಸ್ಥೆಗಳ ವಿಚಾರದಲ್ಲಿ ಮಾತ್ರ ನಿಜವಾಗಿಯೂ ಕೂಡ ಅವರಿಗೆ ಕೈ ಎತ್ತಿ ನಮಸ್ಕಾರ ಮಾಡಬೇಕು. They have done an excellent job. No

second opinion about it.

ಎಲ್ಲಾ ತಂದೆ ಮಕ್ಕಳು ಆ ತರಹದ ಕೆಲಸ ಮಾಡುವುದಾದರೆ ನಿಜವಾಗಿಯೂ ಅಂತಹ ತಂದೆ ಮಕ್ಕಳ ಸಂತತಿ ಹೆಚ್ಚಾಗಲಿ ಎಂದು ನಾವೆಲ್ಲಾ ಹಾರೈಸೋಣ.No Party considerations in these matters.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಅಧ್ಯಕ್ಷರೇ ಇವರೆಲ್ಲಾ ಶನಿಸಂತತಿ.

ಅಧ್ಯಕ್ಷರು :- ಅದು ನನಗೆ ಗೊತ್ತಿಲ್ಲ. ಮಾಹಿತಿ ನಿಮ್ಮ ಕಡೆ ಇರಬಹುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಾನು ನಿಮಗೆ ಹೇಳುತ್ತೇನೆ. ಒಂದೇ ಸಮಯದಲ್ಲಿ ಯಾರೋ ಒಬ್ಬರು ಒಂದೋ ಎರಡೋ ಸಂಸ್ಥೆಗಳಲ್ಲಿ ಅದು ಬಿಟ್ಟು 4-5ಸಂಸ್ಥೆಗಳಿಗೆ ಒಬ್ಬರೇ. ಆಮೇಲೆ ಅವರು ಹೇಳುವ ತತ್ವದ ವಿರುದ್ಧ, ಆಮೇಲೆ ರೂಲ್ಸ್, ಆಮೇಲೆ ಆಕ್ಟ್‌ನ್ನು ತಿದ್ದುಪಡಿ ಮಾಡಿಕೊಂಡು ಇವತ್ತಿನದಿವಸ ಇದನ್ನು ಮಾಡಬೇಕಾದರೆ ಅವರ ಆತ್ಮಸಾಕ್ಷಿ ಎಲ್ಲಿ ಹೋಯಿತು ? ಅವರಿಗೆ ನಾಚಿಕೆ ಬರುವುದಿಲ್ಲವೇ?ಇದೆಯೋ ಇಲ್ಲವೋ?ಎಲ್ಲಿ ಹೋಯಿತು ನಾವು ಯಾವ ಭಾಷೆಯಲ್ಲಿ ಅವರಿಗೆ ಹೇಳಬೇಕು. ಇವರು ನುಡಿಯತಕ್ಕಂಥಾದ್ದೇ ಒಂದು ನಡೆಯತಕ್ಕಂಥಾದ್ದೇ ಒಂದು. ಇವತ್ತು ಏನಾಗಿದೆ ಅಂದರೆ ಸಹಕಾರಸಂಸ್ಥೆಗಳು ಒಂದು ಎರಡು ಅಲ್ಲ ಸಾವಿರಾರು ಸಂಸ್ಥೆಗಳು. ನಾನು ನಿಮಗೆ ಉದಾಹರಣೆಗೆ ಹೇಳುತ್ತೇನೆ. ಅಗ್ರಿಕಲ್ಚರ್ ಕೋ ಆಪರೇಟಿವ್ ಸೊಸೈಟೀಸ್ 4321.ನಾನ್‌ಕ್ರೆಡಿಟ್ ಕೋ ಆಪರೇಟಿವ್ ಸೊಸೈಟೀಸ್. ಇವುಗಳಿಗೆ ನಾಮಿನೇಷನ್ಸ್ ಮಾಡುವುದಕ್ಕೆ ಬರುವುದಿಲ್ಲ. ಆಮೇಲೆ ರೆಗ್ಯುಲೇಟೆಡ್ ಮಾರ್ಕೆಟ್ಸ್

ಅರ್ಬನ್ ಕೋ ಆಪರೇಟೀವ್ ಬ್ಯಾಂಕ್ಸ್ 236. ಪಿ ಎಲ್ ಡಿ ಬ್ಯಾಂಕ್ಸ್177. ಕ್ರೆಡಿಟ್ ಕೋ ಆಪರೇಟಿವ್ ಸೊಸೈಟೀಸ್ 6652. ಹೌಸಿಂಗ್ ಸೊಸೈಟೀಸ್ 1590. ಮಿಲ್ಕ್ ಕೋ ಆಪರೇಟ್ ಸೊಸೈಟೀಸ್-7650. ಬೇರೆ ಸಹಕಾರಿ ಸಂಸ್ಥೆಗಳು-7378. ಲಿಕ್ವಿಡೇಟ್ ಆದವು ಬಿಡಿ, ಅವುಗಳು ಸಾಕಷ್ಟು ಇವೆ ಅವುಗಳ ಬಗ್ಗೆ ನಾನು ಹೇಳುವುದಿಲ್ಲ. ನೂರಾರು ಸೊಸೈಟಿಗಳು ಎಲ್ಲಾ ತಮ್ಮ ಕೈಯಲ್ಲಿ ತೆಗೆದುಕೊಳ್ಳುವುದಕೋಸ್ಕರ ಮತ್ತು ಲಿಮಿಟೆಡ್ ಕೋ ಆಪರೇಟೀವ್ ಸೊಸೈಟಿಗಳಿಗೆ ಅವಕಾಶ ಮಾಡಿ ಕೊಡುವುದಿಲ್ಲ. ಆ ಸೊಸೈಟಿಗಳಿಂದ ಅವರಿಗೆ ಮತ ಹಾಕುವುದಕ್ಕೆ ಬೇಕಲ್ಲಾ ಆದ್ದರಿಂದ ಯಾವ್ಯಾವುದು ಬೇಕು. ಅದನ್ನು ಸರಿ ಮಾಡುವುದು, ಯಾವ್ಯಾವುದು ಬೇಡ ಅದನ್ನು ಡಿ ಫಾಲ್ಟರ್ ಆಗಿ ಮಾಡುವುದು. ಇದನ್ನು ಮಾಡಿ ಇವತ್ತು ಎಲ್ಲಾ ಸಂಸ್ಥೆಗಳನ್ನು ತಮ್ಮ ಕೈಯಲ್ಲಿ ಇಟ್ಟುಕೊಳ್ಳುವುದು ನಡೆಯುತ್ತಾ ಇದೆ. ಏಕೆಂದರೆ ಯಾವಾಗ ಮನಿ ಪವರ್ ಕೈಯಲ್ಲಿ ಬರುತ್ತದೆಯೋ ಆಗ ರಾಜಕೀಯ ಪವರ್ ಅನ್ನೂ ಕೂಡ ಉಪಯೋಗ ಮಾಡುತ್ತಾರೆ, ಈಗ ಏನಾಗಿದೆ ಅಂದರೆ ಪೊಲಿಟಿಕಲ್ ಪವರ್ ಹಾಗೂ ಮನಿ ಪವರ್ ಎರಡೂ ಅವರ ಹತ್ತಿರ ಇದೆ. ವಿಶೇಷವಾಗಿ ಆ ಭಾಗದಲ್ಲಿ ಯಾವುದೇ ಒಂದು ತತ್ವದ ವಿರುದ್ಧ ಹೋರಾಟ ಮಾಡಿಕೊಂಡು ಬಂದಂತಹ ಜನರಿಗೂ ಕೂಡ ತುಳಿಯತಕ್ಕಂಥ ಒಂದು ಸಂಚೂ ಕೂಡ ಹೌದು. ನಾನು ಇದರಲ್ಲಿ ಒಂದೆರಡು ಎಕ್ಸೆಪ್ಷನ್ ಎಂದು ಹೇಳುತ್ತಿಲ್ಲ. ಇದರಲ್ಲಿ ಒಂದು ಕ್ಲಾಸ್ ಇದೆ. ಆದರೆ ಈ ಕ್ಲಾಸ್ ಇದ್ದಾಗ ನಾವು ಅನೇಕ ಸಾರಿ ಖಂಡನೆ ಮಾಡಿದ್ದೇವೆ. ಮತ್ತು ಆ ಕ್ಲಾಸ್‌ಗೆ ಅನುಕೂಲವಾಗಬಾರದು ಎನ್ನತಕ್ಕಂಥ ದೃಷ್ಟಿಯನ್ನು ಇಟ್ಟುಕೊಂಡೇ ನಾವು ಹಿಂದೆ ಅನೇಕ ಸಾರಿ ತಿದ್ದುಪಡಿಗಳನ್ನು ತಂದಿದ್ದೇವೆ. ಅದರ ಉಪಯೋಗವಾಯಿತು. ದುರುಪಯೋಗವಾಯಿತು ಒಂದು. ಆದರೆ ಇಲ್ಲಿ ನೇರವಾಗಿ ನೀವು ದುರುಪಯೋಗ ಮಾಡುವುದಕೋಸ್ಕರವೇ ತಿದ್ದುಪಡಿಯನ್ನು

ತಂದಿರುವುದು. ಅದಕ್ಕಾಗಿ ನಾನು ಸ್ಪಷ್ಟವಾಗಿ ಹೇಳುತ್ತೇನೆ, ಇಂತಹ ಮಂತ್ರಿಗಳನ್ನು ನಾನು ನೋಡಲೇ ಇಲ್ಲ. ಪ್ರತಿಯೊಂದು ಕಡೆಯೂ ಎಲ್ಲಿ ಮೂರು ಜನ ನಾಮಿನೇಷನ್ಸ್ ಮಾಡಬೇಕು ಅಲ್ಲಿ 5-6 ಜನರನ್ನು ಮಾಡುವುದು ಅವರಿಗೆ ಎಲ್ಲಿಯವರೆಗು ಆ ಸಂಸ್ಥೆ ತಮ್ಮ ಕೈಯಲ್ಲಿ ಸಿಗುವುದಿಲ್ಲ ಅಲ್ಲಿಯವರೆಗೂ ಅವರು ನಾಮಿನೇಟ್ ಮಾಡುತ್ತಾರೆ. ಅಧಿಕಾರಿಗಳಿಗೆ ನೇರವಾಗಿ ಫೋನ್ ಮಾಡಿ ಹೇಳುತ್ತಾರೆ, ಯಾವುದೇ ಒಂದು ಸೊಸೈಟಿ ಅವರ ಕೈಯಲ್ಲಿ ಬರುವುದಿಲ್ಲವೆಂದರೆ ಅಲ್ಲಿ ಜಗಳ ಮಾಡಿಸಿ ಪೋಸ್ಟ್ ಪೋನ್ ಮಾಡಿಸುತ್ತಾರೆ.

ಎಲೆಕ್ಟೆಡ್ ಮೆಂಬರ್ಸ್ ಜಾಸ್ತಿ ಬಂದಿದ್ದರೆ ನಾಮಿನೇಟ್ ಮಾಡಿದರೂ ಅವರು ಕೈಗೆ ಸಿಗುವುದಿಲ್ಲ ಎಂದು ಗೊತ್ತಾದರೆ, ಫೈರಿಂಗ್ ಮಾಡಿಸಿ ಅಥವಾ ಗಲಾಟೆ ಮಾಡಿಸಿ ಏನಾದರೂ ಒಂದು ನೆಪ ಹೇಳಿ, ಪೋಲೀಸರಿಗೆ ಹೇಳಿ ಲಾ ಅಂಡ್ ಆರ್ಡ್‌ರ್ ಸಮಸ್ಯೆ ಎಂದು ಹೇಳಿಕೊಂಡು ಪೋಸ್ಟ್‌ಪೋನ್ ಮಾಡುತ್ತಾರೆ. ಹೀಗೆ ಆಳಂದ್ ನಲ್ಲಿ, ಚಿಂತಾಮಣಿಯಲ್ಲಿ ಬಿಜಾಪುರದಲ್ಲಿ ಮುಂತಾಗಿ ಅನೇಕ ಕಡೆಗಳಲ್ಲಿ ಹೀಗೆ ಮಾಡಿದ್ದಾರೆ, ನೀವು ನ್ಯಾಯವಾಗಿ ನಡೆದುಕೊಳ್ಳಬೇಕೆಂದು ಹೇಳುವುದಾದರೆ ಮೊದಲು ನೀವೇ ನಿಷ್ಪಕ್ಷಪಾತವಾಗಿ ನಡೆದುಕೊಳ್ಳಬೇಕು. ಆದರೆ ಅದು ನಿಮಗೆ ಬೇಕಾಗಿಲ್ಲ. ಜನರಿಗೆ ತೋರಿಸುವುದಕ್ಕೋಸ್ಕರವಾಗಿ ಮತ್ತು ನಾವು ಬಹಳ ನಿಷ್ಠೆಯಿಂದ ಇದ್ದೇವೆ ಎಂಬ ವಿಚಾರವನ್ನು ತೋರಿಸಲು ಮಾನ್ಯ ಸಚಿವರು ಬಸವಣ್ಣನವರ ವಚನಗಳನ್ನು ಹೇಳುತ್ತಾರೆ. ಆದರೆ ವಚನಗಳ ಪ್ರಕಾರ ಅವರು ನಡೆದುಕೊಳ್ಳುವುದಿಲ್ಲ. ಬಸವಣ್ಣನವರು ಹೇಳಿದ ಹಾಗೆ ನಡೆದುಕೊಂಡಿದ್ದರೆ ಅದು ಬೇರೆಯಾಗಿರುತ್ತಾಇತ್ತು. ಅವರು ಪಿಎಲ್‌ಡಿ ಬ್ಯಾಂಕ್‌ನ ತಾಲ್ಲೂಕು ಮಟ್ಟದ ಚೇರ್ಮನ್ ಆಗಿದ್ದರು. ಅದು 1970 ಅವಧಿಯಲ್ಲಿರಬೇಕು. ಬಹುಶಃ ಇಲ್ಲಿಯವರೆಗೂ ಅವರು ಅಧಿಕಾರದಲ್ಲಿದ್ದರು. ಹೀಗೆ ಅವರು ತತ್ವಗಳನ್ನು ಹೇಳುತ್ತಾರೆ ಅದರ ಪ್ರಕಾರ ನಡೆದುಕೊಳ್ಳುವುದಿಲ್ಲ. ಬಸವಣ್ಣನವರು ಸಮಾನತೆಯನ್ನು ತರಬೇಕೆಂದು ಸಾಕಷ್ಟು ಪ್ರಯತ್ನ ಪಟ್ಟು ತನ್ನನ್ನು ತಾನೇ ಸಮರ್ಪಣೆ ಮಾಡಿಕೊಂಡರು. ತಮ್ಮ ಬಲಿದಾನವನ್ನು ಮಾಡಿಕೊಂಡರು. ಆದರೆ ಇವರು ಅವರ ತತ್ವಗಳನ್ನು ಹೇಳುತ್ತಾರೆ. ಇವರು ಬೇರೆ ಸಮಾಜಗಳನ್ನು ಸಮಾಧಿ ಮಾಡಲು ಈ ತಿದ್ದುಪಡಿಗಳನ್ನು ತಂದು ಅದರ ಉಪಯೋಗವನ್ನು ಮಾಡಿಕೊಳ್ಳುತ್ತಿದ್ದಾರೆ. ಇದರ ಹೆಚ್ಚಿನ ದುರುಪಯೋಗವು ನಮ್ಮ ಬಾಂಬೆ ಕರ್ನಾಟಕ ಪ್ರದೇಶದಲ್ಲಿ ಆಗುತ್ತಿದೆ. ಆ ಭಾಗದಲ್ಲಿ ಎಷ್ಟು ಡಿಸಿಸಿ ಬ್ಯಾಂಕ್‌ಗಳಲ್ಲಿ ಇದು ಆಗಿದೆ ಎಂಬುದನ್ನು ತಾವುಗಳು ಪಟ್ಟಿ ತರಿಸಿ ಬೇಕಾದರೆ ನೋಡಿ. ಧಾರವಾಡ ಡಿಸಿಸಿ ಬ್ಯಾಂಕ್‌ನಲ್ಲಿ ಹೇಗೆ ಆಗಿದೆ?ಒಬ್ಬೊಬ್ಬರು ಬಂದಾಗ ಅವರವರ ಕಮ್ಯುನಿಟಿಯವರು ಡೈರೆಕ್ಟರ್ಸ್ ಆಗಬೇಕೆಂದು ಇದೆಯೇ?ನಿಮಗೆ ಸಾಮಾಜಿಕ ನ್ಯಾಯವನ್ನು ಕೊಡುವ ಬಗ್ಗೆ ಚಿಂತನೆ ಇಲ್ಲವೆ?ಈ ಪದ್ಧತಿಯಲ್ಲಿ ಸಮಾಜದಲ್ಲಿ ಯಾರು ದುರ್ಬಲರು ಇರುತ್ತಾರೋ ಅವರಿಗೆ ಈ ಮೂಲಕ ಸಪೋರ್ಟ್ ಮಾಡತಕ್ಕಂಥಾದ್ದು ನಿಮ್ಮ ಕರ್ತವ್ಯ. ನಿಮ್ಮ ಪಕ್ಕದಲ್ಲಿದ್ದವರನ್ನು ಹಾಗೆ ಮಾಡುವುದಾದಲ್ಲಿಯೂ ಕೂಡ ನಿಮ್ಮಲ್ಲಿನ ದುರ್ಬಲರನ್ನು ಗುರುತಿಸಿ ಮುಂದೆ ತರಬೇಕಾಗುತ್ತದೆ. ನೀವು ಹಾಗೆ ಮಾಡದಿದ್ದರೆ ನಾವು ಈ ಎಕಾನಮಿಕಲ್ ಈಕ್ವಾಲಿಟಿ ಅಥವಾ ಇಂಥ ಒಂದು ದೊಡ್ಡ ವಿಚಾರದಲ್ಲಿ ಸಹಕಾರ ಮಾಡುವುದಕ್ಕೆ ಆಗುವುದಿಲ್ಲ. ಈ ಕಾನೂನಿನಲ್ಲಿ ಸಂಪೂರ್ಣವಾಗಿ ದುರುಪಯೋಗವನ್ನು ಮಾಡಿದ್ದಾರೆ. ಹಾಗೆಯೇ ಈ ಎಲ್ಲಾ ಸೊಸೈಟಿಗಳನ್ನು ಮತ್ತು ಸಂಸ್ಥೆಗಳನ್ನು ಸರಕಾರವು ತನ್ನ ಕೈಯಲ್ಲಿಟ್ಟುಕೊಳ್ಳ ಬೇಕೆಂದು ನಾಮಿನೇಷನ್ ಮಾಡಿಕೊಂಡು ಈ ನೀತಿಯನ್ನು ಅನುಸರಿಸಿ, ಪ್ರಜಾಪ್ರಭುತ್ವದ ಕೊಲೆಯನ್ನು ಮಾಡಿದ್ದಾರೆ.

ಬಾಯಿಯಲ್ಲಿ ಪ್ರಜಾಪ್ರಭುತ್ವದ ನೀತಿಯ ಪ್ರಕಾರವೇ ನಾವು ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಇವರೇ ಅದರ ಕೊಲೆಯನ್ನು ಮಾಡಿ ತತ್ವವನ್ನು ಹೇಳುತ್ತಿದ್ದಾರೆ. ಆದುದರಿಂದ ಮಾನ್ಯ ಎಸ್.ಎಸ್.ಪಾಟೀಲ್ ರವರಿಗೆ ಈ ಸಚಿವ ಸ್ಥಾನದಲ್ಲಿ ಮುಂದುವರಿಯುವ ಯಾವುದೇ ನೈತಿಕ ಹಕ್ಕು ಇಲ್ಲ. ಅವರು ರಾಜಿನಾಮೆಯನ್ನು ಕೊಡಬೇಕು. ಅವರು ಅದಕ್ಕೆ ಒಪ್ಪಲಿಲ್ಲ ಅಂದರೆ ನಾವು ಮುಂದಿನ ದಾರಿ ಏನು ಮಾಡಬೇಕೋ ಅದನ್ನು ಮಾಡುತ್ತೇವೆ. Either he should withdraw this or he should apologise before this House.

ಇದೆಲ್ಲಾ ತಪ್ಪು ಆಗಿದೆ, ಕ್ಷಮಿಸಬೇಕು ಎಂದು ಜನತೆಯನ್ನು ಅವರು ಈ ಸದನದ ಮುಖಾಂತರ ಕೇಳಿಕೊಳ್ಳಬೇಕು. ಹಾಗೂ ಅವರು ರಾಜಿನಾಮೆಯನ್ನು ಕೊಡಬೇಕು. ಇಷ್ಟನ್ನು ಹೇಳಿ ತಾವು ಇದಕ್ಕೆ ಅವಕಾಶ ಮಾಡಿಕೊಡುತ್ತೀರಿ ಎಂದು ತಮ್ಮನ್ನು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ :- ಮಾನ್ಯ ಅಧ್ಯಕ್ಷರೇ, ಸದನದ ಹಿರಿಯ ಸದಸ್ಯರಾದಂಥ ಮಾನ್ಯ ಶ್ರೀ ವಾಟಾಳ್ ನಾಗರಾಜ್‌ರವರನ್ನು ಪೋಲೀಸರು ಬಂಧಿಸಿ ಕಬ್ಬನ್‌ಪಾರ್ಕ್ ಪೋಲೀಸ್ ಸ್ಟೇಷನ್‌ನಲ್ಲಿ ಇಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಆ ಬಗ್ಗೆ ತಾವುಗಳು ತಿಳಿಸ ಬೇಕು.

ಅಧ್ಯಕ್ಷರು:-ಆ ಕುರಿತು ಮಾಹಿತಿಗಳು ಅಧಿಕೃತವಾಗಿ ಬಂದ ತರ್ತ್‌ಕ್ಷಣ ತಿಳಿಸುತ್ತೇನೆ. ಕಾನೂನು ಪ್ರಕಾರ ಪೋಲೀಸರು ಆ ತರಹ ಮಾಡಿದ ತತ್‌ಕ್ಷಣ ನಮ್ಮ ಕಾರ್ಯಾಲಯಕ್ಕೆ ಇನ್‌ಫಾರ್ಮೇಷನ್ ಕೊಡುತ್ತಾರೆ. ಹಾಗೆ ಕೊಟ್ಟಾಗ ಸೆಷನ್ ಇಲ್ಲದೇ ಇರುವಾಗ ಆದರೆ ನಾವು ಬುಲೆಟಿನ್ ಕಳುಹಿಸುತ್ತೇವೆ. ಸೆಷನ್ ಇರುವಾಗ ಇಲ್ಲಿಯೇ ಹೇಳುತ್ತೇವೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ :- ಅವರಿಗೆ ಮಾನಸಿಕ ಕಿರುಕುಳ ಕೊಡುತ್ತಾ ಇದ್ದಾರೆ ಎಂದು ತಿಳಿದು ಬರುತ್ತದೆ.

ಅಧ್ಯಕ್ಷರು :- ಅಧಿಕೃತ ವರ್ತಮಾನ ಬಂದ ಕೂಡಲೆ ತಿಳಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ(ಸಾಗರ) :- ಮಾನ್ಯ ಅಧ್ಯಕ್ಷರೇ ಮಾನ್ಯ ವಿರೋಧಪಕ್ಷದ ನಾಯಕರು ವಿಷಯವನ್ನು ವಿವರವಾಗಿ ಚರ್ಚೆ ಮಾಡಿದ್ದಾರೆ, ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಒಂದು ದುಃಖದ ಸಂಗತಿ ಏನೆಂದರೆ ಈಗಿನ ಸಹಕಾರ ಸಚಿವರೇ ಈ ಸದನದಲ್ಲಿ ಒಂದು ತಿದ್ದುಪಡಿ ವಿಧೇಯಕವನ್ನು ಮಂಡಿಸಿದ್ದಾರೆ. ಈ ನಾಮ ನಿರ್ದೇಶನ ಮಾಡತಕ್ಕಂಥ ಮತ್ತು ಸಾಮಾಜಿಕ ನ್ಯಾಯವನ್ನು ಮಾಡತಕ್ಕಂಥ ವಿಚಾರದಲ್ಲಿ ಈ ಸದನದಲ್ಲಿ ವಿಪುಲವಾದಂಥ ಚರ್ಚೆಯಾಗಿದೆ. ಘರ್ಷಣೆಯಾಗಿದೆ, ಮಾತಿಗೆ ಮಾತು ಆಗಿದೆ. ಆ ಒಂದು ಹಿನ್ನಲೆಯಲ್ಲಿ ತಮ್ಮ ಕೊಠಡಿಯಲ್ಲಿ ಗೃಹಸಚಿವರು, ಕಾನೂನು ಸಚಿವರು ಮತ್ತು ನಮ್ಮನ್ನೆಲ್ಲಾ ಕರೆಸಿಕೊಂಡು ಚರ್ಚೆ ಮಾಡಿ ಒಂದು ಒಮ್ಮತದ ತೀರ್ಮಾನಕ್ಕೆ ಬಂದಿದ್ದೇವೆ.

ಅದರ ಪ್ರಕಾರ ಒಬ್ಬ ಹರಿಜನ ಗಿರಿಜನರು, ಒಬ್ಬ ಮಹಿಳೆಯನ್ನು ನಾಮ ನಿರ್ದೇಶನ ಮಾಡುವ ಒಪ್ಪಂದಕ್ಕೆ ಬಂದಿದ್ದೆವು. ಈ ರೀತಿಯಾಗಿ ಅಷ್ಟಕ್ಕೆ ಸೀಮಿತವಾಗಿ ನಾಮನಿರ್ದೇಶನ ಮಾಡುವುದಕ್ಕೆ ಆ ವಿದೇಯಕಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದರು. ಆ ಪ್ರಕಾರ ಇವೊತ್ತು ಅವರು ನಡೆದುಕೊಂಡಿದ್ದರೆ, ಈಗ ಈ ಪ್ರಶ್ನೆಯನ್ನು ಎತ್ತುವಂಥ ಪ್ರಶ್ನೆಯು ಬರುತ್ತಿರಲಿಲ್ಲ. ಆ ಒಂದು ಒಪ್ಪಂದವು ಆಗಿ ಒಂದು ವರ್ಷ ಕೂಡ ಆಗಿಲ್ಲ ನಾವೆಲ್ಲರೂ ಇಲ್ಲೆ ಸಾಕ್ಷೀಭೂತರಾಗಿ ಕುಳಿತಿದ್ದೇವೆ. ಮಾಡಿದ ಅಡುಗೆಯು ಇನ್ನೂ ತಣ್ಣಗಾಗಿಲ್ಲ. ಇಷ್ಟು ಬೇಗ ನೀವು ತರಾತುರಿಯಲ್ಲಿ ಒಂದು ಸುಗ್ರೀವಾಜ್ಞೆಯನ್ನು ತಂದು ಇಡೀ ಸದನದ ಒಟ್ಟಾರೆ ಅಭಿಪ್ರಾಯವನ್ನು ಸಂಪೂರ್ಣವಾಗಿ ನಾಶ ಮಾಡಿ ಹೊಸ ತಿದ್ದುಪಡಿಯನ್ನು

ತಂದಿದ್ದೀರಿ. ಅದರ ಪ್ರಕಾರ ನಾಮನಿರ್ದೇಶನವನ್ನು ಮಾಡಲು ಹೊರಟಿದ್ದೀರಿ. ಇದು ಯಾವ ರಾಜಕೀಯ ? ಇದರ ಮೂಲಕ ಏನು ಸಾಧನೆ ಮಾಡುತ್ತೀರಿ?ನಿಮ್ಮ ಸ್ವಾರ್ಥ ಸಾಧನೆಗೆ ಒಂದು ಇತಿಮಿತಿ ಇರಬೇಡವೇ?ಇದರಿಂದಲೇ ನೀವು ರಾಜಕೀಯ ಮಾಡಿ ನಾಳೆ ಗೆದ್ದು ಬಿಡುತ್ತೀರಾ? ಈ ಸದನದಲ್ಲಿ ಸಚಿವನಾಗಿ ನಾನೇ ವಿಧೇಯಕವನ್ನು ಮಂಡಿಸಿ ಚರ್ಚೆ ಮಾಡಿ, ಎಲ್ಲಾ ಸದನದ ಅಭಿಪ್ರಾಯಕ್ಕೆ ಮಣಿದು, ಮಾನ್ಯ ಅಧ್ಯಕ್ಷರ ಕೊಠಡಿಯಲ್ಲಿ ಚರ್ಚೆ ಮಾಡಿ, ಒಪ್ಪಿದಂಥ ಒಂದು ವಿಧೇಯಕವನ್ನು ಇಲ್ಲಿ ಮಂಡಿಸಿ ಸರ್ವಾನುಮತದಿಂದ ಪಾಸ್ ಮಾಡಿರತಕ್ಕಂಥ ಒಂದು ಸನ್ನಿವೇಶದಲ್ಲಿ ಅದನ್ನೆಲ್ಲಾ ಮರೆತು, ಮತ್ತೆ ಅದಕ್ಕೆ ತಿದ್ದುಪಡಿ ತಂದು, ಈಗ ಏನು ಮಾಡಿದ್ದೀರಲ್ಲಾ ಇದಕ್ಕಿಂತ ಭ್ರಷ್ಟರಾಜಕಾರಣ ಮತ್ತೊಂದು ಇರುವುದಕ್ಕೆ ಸಾಧ್ಯವಿಲ್ಲ. ಬಹುಶಃ ಮಾನ್ಯ ಮಂತ್ರಿಗಳಿಗೇನಾದರೂ ಗೌರವ ಎಂಬುದು ಇದ್ದರೆ ಅವರು ಈ ಸ್ಥಾನದಲ್ಲಿ ಇರಬಾರದು. ಅವರು ಕೊಟ್ಟಂಥ ಮಾತಿಗೆ ಅವರು ಅಂಟಿಕೊಳ್ಳಲೇ ಬೇಕಾಗುತ್ತದೆ. ಆಗಿನ ಚರ್ಚೆಯಲ್ಲಿ ನಾವೆಲ್ಲರೂ ಚರ್ಚೆಯಲ್ಲಿ ಭಾಗಿಗಳಾಗಿದ್ದೆವು. ನಮ್ಮೆದುರು ಒಪ್ಪಂದವಾಗಿ, ಆ ಪ್ರಕಾರವಾಗಿ ವಿಧೇಯಕ ತಂದು, ಅದು ಒಪ್ಪಿ ಪಾಸ್ ಆಗಿ, ಜಾರಿಗೆ ಕೊಟ್ಟು, ಅದರ ಪ್ರಕಾರ ನಡೆದುಕೊಂಡಿದ್ದರೆ ತಮಗೆ ಗೌರವ ಬರುತ್ತಿತ್ತು. ಅದನ್ನು ಬಿಟ್ಟು ಹೀಗೆ ಮಾಡಿದ್ದರಿಂದ ಇವರಿಗೆ ಯಾವ ಶೋಭೆ ಮತ್ತು ಕೀರ್ತಿಗಳು ಬರುತ್ತವೆ? ನಿಮ್ಮನ್ನು ಜನರು ಶಪಿಸುವುದಿಲ್ಲವೇ ? ನಾನು ಮೊನ್ನೆ ಹಾಸನದ ಹೇಮಾವತಿ ಶುಗರ್ ಕಂಪನಿಗೆ ಹೋಗಿದ್ದೆ. ನಮ್ಮ ಕಡೆಯವರು ಒಂಭತ್ತು ಗೆದ್ದಿದ್ದಾರೆ. ಆ ಕಡೆಯವರು 8ಜನರು ಗೆದ್ದಿದ್ದಾರೆ. ಇವರು ಐದಾರು ಜನರನ್ನು ನಾಮಿನೇಷನ್ ಮಾಡಿಕೊಂಡು ಏನೇನೋ ಮಾಡಿದ್ದಾರೆ. ಇದನ್ನು ಯಾವ ತರಹ ಮಾಡಿದ್ದೀರಿ?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ :- ಒಟ್ಟಾರೆ ಇದು ಯಾವ ಪಾಪದ ಕೂಸು?

ಶ್ರೀ ಎಚ್.ಶಿವಪ್ಪ :- ಇದನ್ನು ನೀವೇ ಹಿಂದೆ ಮಾಡಿದ್ದು

ಶ್ರೀ ಕಾಗೋಡು ತಿಮ್ಮಪ್ಪ :- ಹಾಗಾದರೆ ನಾವು ಮಾಡಿದ್ದನ್ನು ಬದಲಾವಣೆ ಮಾಡಲು ಇವರೇ ಒಪ್ಪಿಕೊಂಡರು ? ಈ ಸದನದಲ್ಲಿ ಒಪ್ಪಿಕೊಂಡಿಲ್ಲವೇ? ಆ ಸಂದರ್ಭದಲ್ಲಿ ಶಿವಪ್ಪನವರು ಮಂತ್ರಿಯಾಗಿರಲಿಲ್ಲ.

ಅವೊತ್ತು ಪ್ರಾಮಾಣಿಕವಾಗಿ ಈ ಸದನದಲ್ಲಿ ಎಲ್ಲರೂ ಒಂದು ಅಭಿಪ್ರಾಯಕ್ಕೆ ಬಂದರು. ಎಲ್ಲಾ ವಿರೋಧಪಕ್ಷದವರನ್ನು ಕರೆದು ಕುಳಿತುಕೊಂಡು ಮಾತನಾಡಿ, ಒಮ್ಮತದ ತೀರ್ಮಾನಕ್ಕೆ ಬಂದು, ವಿಧೇಯಕಕ್ಕೆ ಬದಲಾವಣೆ ಮಾಡಿ ಅದು ಸರ್ವಾನುಮತದಿಂದ ಅಂಗೀಕಾರವಾಗಿತ್ತು. ಈಗ ಹಿಂದುಗಡೆಯಿಂದ ಚಾಕು ಹಾಕತಕ್ಕಂಥ ಕೆಲಸವನ್ನು ಮಾಡುತ್ತಿದ್ದೀರಾ ? ಹಾಗಾದರೆ ನಿಮಗೆ ಆತ್ಮಸಾಕ್ಷಿ ಇಲ್ಲವೇ ? ನೀವು ಹೇಳಿದ ಮಾತಿಗೆ ನೀವೇ ಬೆಲೆಕೊಡುವುದಿಲ್ಲವೇ ? ನೀವು ಹೇಗೆ ನಡೆದು ಕೊಳ್ಳುತ್ತಿದ್ದೀರಿ ಎಂಬುದನ್ನು ಆಲೋಚನೆ ಮಾಡುವುದು ಬೇಡವೆ? ಇಷ್ಟೊಂದು ಮೂರ್ಖತನದಿಂದ ನೀವು ನಡೆದುಕೊಳ್ಳುತ್ತಿದ್ದೀರಿ ಅಂದರೆ, ನಮಗೆ ಬೇಸರ ಮತ್ತು ಆಶ್ಚರ್ಯವಾಗುತ್ತದೆ. ಹಾಗೆಂದಾದರೆ ನಾವುಗಳು ಸರ್ವಾನುಮತದಿಂದ ಶಾಸನಗಳನ್ನು ಏತಕ್ಕಾಗಿ ಮಾಡಬೇಕು ?

ಆದ್ದರಿಂದ, ಅಧ್ಯಕ್ಷರೇ, ಅವರು ರಾಜೀನಾಮೆ ಕೊಡಬೇಕು. ಇಲ್ಲದಿದ್ದರೆ ನಾನು ನೇರವಾಗಿ ಹೇಳುತ್ತೇನೆ : ಅವರು ಬಂಧುವರ್ಗವನ್ನು ರಕ್ಷಣೆ ಮಾಡಿಕೊಳ್ಳುವುದಕ್ಕೆ ಸ್ವಜನಪಕ್ಷಪಾತ ಮಾಡಿದ್ದಾರೆ, ಬೇಕಾದರೆ ಈ ವಿಚಾರವಾಗಿ ಅವರು ನ್ಯಾಯಾಂಗ ತನಿಖೆ ನೇಮಕ ಮಾಡಲಿ, ಆಗ ಅವರು ಮಾಡಿರುವುದು ಹೊರಗೆ ಬರುತ್ತದೆ. ಆಗ ಅದಕ್ಕೆ ಬೆಲೆ ಅವರು ಕೊಡಬೇಕಾಗುತ್ತದೆ. ಆದ್ದರಿಂದ ದಯವಿಟ್ಟು ಈ

ಸುಗ್ರೀವಾಜ್ಞೆಯನ್ನು ವಾಪಸ್ ತೆಗೆದುಕೊಳ್ಳಬೇಕು ಮತ್ತು ಮಾನ್ಯ ಸಚಿವರು ಈ ಸದನಕ್ಕೆ ಏನು ಮಾತು ಕೊಟ್ಟಿದ್ದರೋ ಅದರ ಪ್ರಕಾರ ನಡೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು) :-ಅಧ್ಯಕರೇ ಅತ್ಯಂತ ಗಂಭೀರವಾದ ವಿಚಾರ ಪ್ರಸ್ತಾಪವಾಗಿದೆ. ಸಹಕಾರಿ ತತ್ವಕ್ಕೆ ಮಹತ್ವ ಬರಬೇಕೆಂಬ ಹಿನ್ನೆಲೆಯಲ್ಲಿ ವಿಧಾನಸಭೆಯೊಳಗಿರುವ ಎಲ್ಲಾ ಸದಸ್ಯರೂ ಒಮ್ಮತದ ತೀರ್ಮಾನ ಮಾಡಿದ ವ್ಯವಸ್ಥೆ ಬಹುಶಃ ಸದನದ ಇತಿಹಾಸದಲ್ಲಿ ಪ್ರದರ್ಶನವಾಗಿತ್ತು. ಈ ಸದನದಲ್ಲಿ ಈ ರೀತಿ ಒಂದು ವ್ಯವಸ್ಥೆಗೆ ಈ ಸರ್ಕಾರ ಭಾರಿ ಪ್ರೋತ್ಸಾಹ ಕೊಟ್ಟಿದೆ ಎಂಬ ಸಂತೋಷದ ವಾತಾವರಣದಲ್ಲಿ ಇಡೀ ರಾಜ್ಯದಲ್ಲಿರುವ ಸಹಕಾರಿ ಸಂಘದ ಎಲ್ಲ ಸದಸ್ಯರೂ ಹಾಗೂ ಪ್ರತಿನಿಧಿಗಳೂ ಆಲೋಚನೆ ಮಾಡಿದ್ದರು. ಒಂದು ವಿಚಾರವನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡಲು ಇಚ್ಛೆಪಡುತ್ತೇನೆ:ಪ್ರಾಯಶಃ ಸದನದಲ್ಲಿ ಆ ತಿದ್ದುಪಡಿ ಮಂಡನೆಯಾಗಬೇಕೆಂದು ತೀರ್ಮಾನವಾದಾಗ ಅಲ್ಲಲ್ಲೇ ಸ್ವಲ್ಪ ಭಿನ್ನಾಭಿಪ್ರಾಯಗಳು ಗೊಂದಲಮಯ ವಾತಾವರಣವೂ ಸೃಷ್ಟಿಯಾಗಿತ್ತು. ನಾನೇ ಪ್ರತ್ಯಕ್ಷವಾಗಿ ಸನ್ಮಾನ್ಯ ಪಾಟಿಲರ ಜೊತೆ ಮಾತನಾಡಿದೆ. ಏಕೆ ತಿದ್ದುಪಡಿಯನ್ನುನೀವು ಮಂಡನೆ ಮಾಡುತ್ತಿಲ್ಲವೆಂದು ಕೇಳಿದಾಗ ನಮ್ಮಲ್ಲೇ ಸ್ವಲ್ಪ ಗೊಂದಲವಿದೆ ಎರಡು ಮೂರು ಬಾರಿ ಸದನದ ಮುಂದೆ ಬರಬೇಕೆಂದು ಆದಾಗಲೂ ಕೂಡ ಅದಕ್ಕೆ ಅವಕಾಶ ಕೊಡುತ್ತಿಲ್ಲವೆಂದು ಹೇಳಿದರು, ಕೊನೆಗೆ ನಾನೇ ಅದನ್ನು ಶೂನ್ಯವೇಳೆಯಲ್ಲಿ ಎತ್ತಬೇಕೆಂದೂ ಹೇಳಿದರು. ನಾನೇ ಪ್ರಸ್ತಾಪ ಮಾಡಿದೆ. ಈ ರೀತಿಯ ತಿದ್ದುಪಡಿಯನ್ನು ನಮ್ಮ ಅಜೆಂಡಾದಲ್ಲಿ ಕೊಟ್ಟದ್ದೀರಿ ಆದರೆ ಅದನ್ನು ಮಂಡನೆ ಮಾಡುತ್ತಿಲ್ಲ ಚರ್ಚೆಗೆ ಬರುತ್ತಿಲ್ಲವೆಂದೂ ಹೇಳಿದೆ. ಅನಂತರ ಒಮ್ಮತದ ಅಭಿಪ್ರಾಯವಾಯಿತು. ಎಲ್ಲಾ ಸಹಕಾರಿ ವಿಚಾರಗಳಿಗೆ ಪೂರಕವಾಗುವಂತಹ ತೀರ್ಮಾನವಾಗುವಂತಹ ಸಂದರ್ಭ ಸದನದಲ್ಲಿ ಬಂತು. ನಮಗೆ ಭಾರಿ ಬೇಸರವಾಗುತ್ತದೆ. ಆ ಸಂದರ್ಭದಲ್ಲಿ ಮಾನ್ಯ ಸಹಕಾರ ಸಚಿವರನ್ನು ನಾನು ಮನಸಾರೆ ಅಭಿನಂದಿಸಿದೆ. ಮತ್ತು ಈರೀತಿ ಸಹಕಾರಿ ತತ್ವದಲ್ಲಿ ವಿಶ್ವಾಸ ಇರುವ ಸಚಿವರು ನಮ್ಮ ಸರ್ಕಾರದಲ್ಲಿ ಇರುವುದು ನಮ್ಮ ಪುಣ್ಯ ಅಂತಲೂ ಹೇಳಿದ್ದೆ. ಆದರೆ ಸ್ವಾರ್ಥ ರಾಜಕಾರಣಕ್ಕಾಗಿ ಎಷ್ಟು ಬೇಗ ಆ ಮನಸ್ಸು ಬದಲಾವಾವಣೆ ಯಾಗುತ್ತದೆ, ಇಂತಹ ಮನೋಭಾವ ಪಾಟೀಲರಲ್ಲಿ ಬಂದದ್ದು ಬೇಸರ ತರುವಂಥದು. ಬಹುಶಃ ಒತ್ತಡಕ್ಕೆ ಮಣಿದಿರಬೇಕು ಅಥವಾ ಏನಾದರೂ ಮಾಡಿ ಇನ್ನಷ್ಟು ದಿವಸ ಮಂತ್ರಿ ಪದವಿ ಉಳಿಯಬೇಕು ಎಂದು ಆದರೆ ಪಾರ್ಟಿಯವರ ಒತ್ತಡದಲ್ಲಿ ನಾನು ಕೂತುಕೊಳ್ಳಬೇಕು ಎಂಬ ಭಾವನೆ ಉಂಟಾಯಿತೋ ಏನೋ ಎಂಬುದು ನನಗೆ ಗೊತ್ತಾಗುತ್ತಿಲ್ಲ. ಇದು ಅತ್ಯಂತ ಬೇಸರದ ಸಂಗತಿ. ಇಡೀ ಸಹಕಾರಿ ತತ್ವಕ್ಕೆ ಮಾರಕವಾದ ವಿಚಾರವನ್ನು ಮಾಡಿದ್ದಾರೆ. ನಮಗೆ ಗೊತ್ತಿದೆ : ಹಿಂದೆ ಒಂದು ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಜನತಾ ಬಜಾರ್‌ನಲ್ಲಿ ಕೇವಲ ಇಬ್ಬರು ಸದಸ್ಯರು ಆಯ್ಕೆಯಾಗಿದ್ದರು. ಎದುರು ಕಡೆಯಿಂದ 9ಸದಸ್ಯರು ಆಯ್ಕೆಯಾಗಿ ಬಂದಿದ್ದರು. ಆಗ 10 ಸದಸ್ಯರನ್ನು ನಾಮಿನೇಟ್ ಮಾಡಿ ಅಲ್ಲಿ ಅಧಿಕಾರದ ಗದ್ದುಗೆ ಹಿಡಿದದ್ದನ್ನು ನಾವು ನೋಡಿದ್ದೇವೆ. ಏತಕ್ಕೆ ಇದನ್ನು ನಾನು ಹೇಳುತ್ತೇನೆ ಅಂದರೆ ಕೆಲವರು ನನ್ನನ್ನು ಅಧಿಕಾರದಲ್ಲಿರಲು ಬಿಡುತ್ತಿಲ್ಲ. ನೀವೆಲ್ಲಾ ಒತ್ತಡ ತಂದು ಅದು ಮಂಡನೆಯಾಗುವಂತೆ ನೋಡಿಕೊಳ್ಳಬೇಕೆಂದು ಪ್ರಯತ್ನಮಾಡಿದ ಪಾಟೀಲರೇ ಇದನ್ನೆಲ್ಲಾ ಗಾಳಿಯಲ್ಲಿ ತೂರಿ ಅವರ ಮಾತಿಗೆ ಅವರೇ ಗೌರವವಿಟ್ಟುಕೊಳ್ಳದಂತೆ ಈರೀತಿ ಮಾಡುವುದು ಯಾವುದೇ ರಾಜಕಾರಣಿಗೆ ಶೋಭೆ ತರುವಂಥದಲ್ಲ. ಮತ್ತು ಈ ರೀತಿ ಸುಗ್ರೀವಾಜ್ಞೆ ತರುವ ಮೂಲಕ ಇಡೀ ಸಹಕಾರಿ ತತ್ವಕ್ಕೆ ಮಾರಕ ಹೊಡೆತವಾಗಿದೆ.

ಯಾರೂ ಇದನ್ನು ತಡೆಯುವಂತಿಲ್ಲ. ಇವತ್ತು ಎಲ್ಲಿಯವರೆಗೂ ಹೋಗಿದೆ ಅಂದರೆ ಕೇವಲ ನಾಮಿನೇಟೆಡ್ ಸದಸ್ಯರೇ ಅಧ್ಯಕ್ಷರಾಗುವಂತಹ ಸಂದರ್ಭ ನಿರ್ಮಾಣವಾಗಿದೆ. ಇದನ್ನು ನಾವು ಆಲೋಚನೆ ಮಾಡಬೇಕಾಗಿದೆ. ಕೇವಲ ಅಧಿಕಾರಕ್ಕಾಗಿ ಸಹಕಾರಿ ತತ್ವವನ್ನು ಕೈಲಿಟ್ಟುಕೊಳ್ಳುವ ವ್ಯವಸ್ಥೆ ಆಗಿದೆ. ಕೇವಲ ಎರಡೂ ಮೂರು ತಿಂಗಳ ಹಿಂದೆ ತಿದ್ದುಪಡಿ ಮೂಲಕ ಬಂದ ವ್ಯವಸ್ಥೆ ಮತ್ತೆ ಜನರಿಗೆ ಪ್ರಹಾರ ಕೊಡುವ ಸಂಗತಿಯಾಗಿದೆ. ಇದು ಖಂಡಿತವಾಗಿ ಒಳ್ಳೆಯ ಲಕ್ಷಣವಲ್ಲ. ಇದರಿಂದ ಸಹಕಾರಿ ರಂಗ ಉಳಿಯವಂತಹ ಪ್ರಯತ್ನವಿಲ್ಲ ಯಾರ್‍ಯಾರು ಅವರ ಮನೆಯವರಿಗೆ ಮಕ್ಕಳಿಗೆ ಬೇಕು ಎಂದು ಪ್ರಯತ್ನ ಮಾಡುವಂತಹ ಸ್ವಾರ್ಥ ರಾಜಕಾರಣದ ವ್ಯವಸ್ಥೆ ಬಂದಿದೆ. ಈ ಸುಗ್ರೀವಾಜ್ಞೆಯನ್ನು ಹಿಂತೆಗೆದುಕೊಳ್ಳುವುದು ಅತಿ ಅವಶ್ಯಕತೆ ಇದೆ. ಒಂದು ವೇಳೆ ಅವರಿಗೆ ಆಗುವುದೇ ಇಲ್ಲವೆಂದರೆ ಇನ್ನೊಂದೆರಡುಮೂರು ತಿಂಗಳಿರುವುದು, ಅಷ್ಟರೊಳಗೆ ಮರ್ಯಾದೆಯಾಗಿ, ನಾವು ತರುವ ಒತ್ತಡಕ್ಕೆ ಅವರು ಮಣಿಯಲೇಬೆಕು ಇಲ್ಲದಿದ್ದರೆ ಸಹಕಾರಿ ತತ್ವಕ್ಕೆ ತಿಲಾಂಜಲಿ ಕೊಟ್ಟಂತಾಗುತ್ತದೆ. ನಿಮ್ಮ ಪಾಪದಕೂಪ ನಮ್ಮ ಮೇಲೆ ಬರುವುದು ಬೇಡ . ಆದಕಾರಣ ಮಂತ್ರಿಗಳು ಇದನ್ನು ಕೂಲಂಕಷವಾಗಿ ನೋಡಬೇಕು. ತಕ್ಷಣ ಸುಗ್ರೀವಾಜ್ಞೆಯನ್ನು ಹಿಂತೆಗೆದುಕೊಳ್ಳಬೇಕು. ಮತ್ತೆ ನಾಮಿನೇಟೆಡ್ ಸದಸ್ಯರಿಗೆ ಅಧಿಕಾರ ಕೊಡುವ ಸ್ವಾರ್ಥ ರಾಜಕಾರಣ ಮಾಡಬಾರದು ಎಂಬ ಒತ್ತಡವನ್ನು ಸದನದ ಮೂಲಕ ಅವರಿಗೆ ತರಲು ಇಚ್ಛೆಮಾಡುತ್ತಿದ್ದೇನೆ. ಮತ್ತು ಮುಂದೆ ಕೂಡ ಸಹಕಾರಿ ತತ್ವ ಅನುಷ್ಠಾನ ಮಾಡುವಾಗ ಹಿಂದಿನ ವ್ಯವಸ್ಥೆ ಮುಂದುವರೆಯಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವಿ ಮುನಿಯಪ್ಪ (ಶಿಡ್ಲಘಟ್ಟ) :- ಮಾನ್ಯ ಉಪಾಧ್ಯಕರೇ, ಈ ಸರ್ಕಾರದ ತಂದಿರುವ ಸುಗ್ರೀವಾಜ್ಞೆ ಬಗ್ಗೆ ನಮ್ಮ ಪಕ್ಷದಿಂದ ತಂದಿರುವ ನಿಲುವಳಿ ಸೂಚನೆ ಬಗ್ಗೆ ನಮ್ಮ ನಾಯಕರು ಈಗಾಗಲೇ ಪ್ರಸ್ತಾಪಿಸಿದ್ದಾರೆ. ಈ ಸರ್ಕಾರ ತಂದ ಶಾಸನವನ್ನು ಅನುಷ್ಠಾನಗೊಳಿಸದೇನೇ ತಿದ್ದುಪಡಿಯ ಪ್ರತಿಫಲವನ್ನು ನಿರೀಕ್ಷೆ ಮಾಡದೆ ತತ್‌ಕ್ಷಣ ಅದನ್ನು ವಿರೂಪಗೋಳಿಸಿದ ಕೀರ್ತಿ ಜನತಾದಳದ ಸರ್ಕಾರಕ್ಕೆ ಸಲ್ಲುತ್ತದೆ. ಅವರು ತಿದ್ದುಪಡಿ ತಂದಾಗ ನಾವೆಲ್ಲಾ ಅಂದುಕೊಂಡೆವು:ದಿವಂಗತ ಕೆ. ಎಚ್ ಪಾಟೀಲರ ನೇತೃತ್ವದಲ್ಲಿ ಎಲ್ಲಾ ಸಹಕಾರ ಸಂಸ್ಥೆಗಳಲ್ಲಿ ಚುನಾಯಿತ ಪ್ರತಿನಿಧಿಗಳೇ ಇರುತ್ತಾರೆ. ಪ್ರಜಾಪ್ರಭುತ್ವ ರೀತಿ ಅವರು ಕೆಲಸ ಮಾಡಬೇಕು, ಈ ನಾಮಿನೇಷನ್ ಪದ್ಧತಿಯಿಂದ ಪ್ರತಿನಿಧಿಗಳ ಹಕ್ಕಿಗೆ ಚ್ಯುತಿ ಬರುತ್ತದೆಂಬ ವಿಚಾರ ಇಟ್ಟು ಅದನ್ನು ತೆಗೆಯಬೇಕು ಎಂದು ಅವರ ಸಂಸ್ಥೆಯಿಂದ ಒಂದು ವರದಿ ಕೊಟ್ಟಿದ್ದರು. ಅ ವರದಿ ಆಧಾರದಲ್ಲಿ ಸರ್ಕಾರ ಇಲ್ಲಿ ಒಂದು ನಿರ್ಣಯ ಮಾಡಿತ್ತು. ಶಾಸನಸಭೆಯಲ್ಲಿ ಅದರ ಬಗ್ಗೆ ಕೂಲಂಕಷ ಚರ್ಚೆಯೂ ಆಯಿತು. ಆದರೆ ದುರಾದೃಷ್ಟ ಇಲ್ಲಿ ಅಂಗೀಕಾರವಾದ ತಿದ್ದುಪಡಿಯನ್ನು ವಿರೂಪಗೊಳಿಸಿ ಅದೇ ಸರ್ಕಾರ ಸುಗ್ರೀವಾಜ್ಞೆ ತರುವುದು ಬಹಳ ಅನ್ಯಾಯ. ಅದೂ, ಸಹಕಾರ ಸಂಘಗಳ ಚುನಾವಣಾ ಫಲಿತಾಂಶ ನೋಡಿದ ನಂತರ, ಬಹಳ ಕಡೆ ಅವರು ಅಧಿಕಾರ ಕಳೆದುಕೊಂಡಿರುವುದನ್ನು ನೋಡಿ ಸುಗ್ರೀವಾಜ್ಞೆ ತರುವ ಮೂಲಕ ಸಹಕಾರ ಸಂಘಗಳನ್ನು ವಶಕ್ಕೆ ತೆಗೆದುಕೊಳ್ಳುವ ಪ್ರಯತ್ನ ಮಾಡಿರುವುದು ಸ್ವಾರ್ಥದ ಪರಮಾವಧಿ. ಸಹಕಾರಿ ಸಂಘಗಳೆಲ್ಲಾ ಸರ್ಕಾರದ ಕೈಬಿಟ್ಟುಹೋಗುತ್ತವೆಂದುಕೊಂಡು ಸುಗ್ರೀವಾಜ್ಞೆ ತಂದು ಸರ್ಕಾರದ ಅಧಿಕಾರದ ದುರುಪಯೋಗ ಮಾಡಿದ್ದಾರೆಂಬ ಮಾತನ್ನು ಹೇಳಿತ್ತಿದ್ದೇನೆ. ಆದ್ದರಿಂದ ಈ ತಕ್ಷಣ ಸುಗ್ರೀವಾಜ್ಞೆಯನ್ನು ವಾಪಸ್ ಪಡೆಯಬೇಕು, ಈ ಶಾಸನಸಭೆ ಏನು ತಿದ್ದುಪಡಿಗೆ ಮನ್ನಣೆ ಕೊಟ್ಟಿದೆ ಅದನ್ನುಅವರು ಗೌರವಿಸಬೇಕು. ಸಹಕಾರ ಸಚಿವರು ಸಾರ್ವಜನಿಕ ಸಭೆಗಳಲ್ಲೆಲ್ಲಾ ಈ ನಾಮಿನೇಷನ್ ಪದ್ಧತಿಯನ್ನು

ವಿರೋಧ ಮಾಡಿದ್ದಾರೆ. ದುರಾದೃಷ್ಟ ಈಗ ಅವರೇ ಸುಗ್ರೀವಾಜ್ಞೆ ತಂದಿರುವುದು ಸ್ವಾರ್ಥದ ಪರಮಾವಧಿ. ಇದನ್ನು ಅವರು ಒಪ್ಪಿಕೊಂಡು ರಾಜೀನಾಮೆ ಕೊಡಬೇಕೆಂದು ಸರ್ಕಾರವನ್ನು ನಾನು ಕೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ) :- ಅಧ್ಯಕ್ಷರೇ ನಮ್ಮ ನಾಯಕರು ಈ ನಿಲುವಳಿ ಸೂಚನೆ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಮೊದಲಿಂದಲೂ ನಮ್ಮ ರಾಜಕೀಯ ಸಹಕಾರ ಸಂಘಗಳಿಂದ ಬಹಳ ದೂರ. ರಾಜಕೀಯಕ್ಕೂ ಸಹಕಾರಿ ವ್ಯವಸ್ಥೆಗೂ ನಾನು ಯಾವಾಗಲೂ ಲಿಂಕ್ ಇಟ್ಟುಕೊಂಡೇ ಇಲ್ಲ. ನನ್ನ ಕ್ಷೇತ್ರದಲ್ಲಿ ಕೂಡ

ಶ್ರೀ ಎಸ್. ಸುರೇಶಕುಮಾರ್ : ನೀವು ಹೇಳುವುದು ಬಹಳ ಕರೆಕ್ಟಾಗಿದೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ರಾಜಕೀಯದಲ್ಲಿ ಸಹಕಾರ ಇಲ್ಲ, ಸಹಕಾರ ಕ್ಷೇತ್ರದಲ್ಲಿ ರಾಜಕೀಯ ಜಾಸ್ತಿ ಇದೆ.There is no cooperation in Politics. There is more politics in cooperation.

ಶ್ರೀ ಎಂ. ವೀರಪ್ಪ ಮೊಯ್ಲಿ : ಅಧ್ಯಕ್ಷರೇ ಇದರಲ್ಲಿ ರಾಜಕೀಯ ಲಾಭವಿದೆಯಂದು ನಾವು ಅನೇಕರು ತಿಳಿದುಕೊಂಡಿದ್ದೇವೆ. ನಾವು ಮಂತ್ರಿಗಳಾಗಿದ್ದಾಗ ನಮ್ಮವರೂ ಕೂಡ ತಿಳಿದುಕೊಂಡಿದ್ದೇವೆ. ಏನೂಂದರೆ ಸಹಕಾರ ಸಂಸ್ಥೆಗಳನ್ನು ಹಿಡಿದುಬಿಟ್ಟರೆ ಇಡೀ ಕ್ಷೇತ್ರ ಇಡೀ ರಾಜ್ಯವನ್ನು ಹಿಡಿದುಬಿಡುತ್ತೇವೆ ಅಂತ. ಇದು ತರ್ಕಕ್ಕೆ ನಿಲುಕುವುದೇ ಇಲ್ಲ. ಆದರೆ ಇತ್ತೀಚೆಗೆ ಈ ಹವ್ಯಾಸ ಜಾಸ್ತಿಯಾಗಿದೆ. ನಮ್ಮ ಮೊಯಿದೀನ್ ಇದ್ದಾರೆ, ಪ್ರಾಮಾಣಿಕವಾಗಿ ಹೇಳುವುದ್ದರೆ ಅವರೂ ನಾವೂ ಸಹಕಾರ ಸಂಘಗಳಿಂದ ಯಾವಾಗಲೂ ಹೊರಗಡೆಯೇ. ರಾಜಕೀಯ ಮತ್ತು ಸಹಕಾರಿ ಸಂಘಗಳ ನಡುವೆ ಅಂತರವಿದೆ. ಯಾಕೆಂದರೆ ಆ ಚಳುವಳಿ ತನ್ನುಷ್ಟಕ್ಕೇ ಬೆಳೆಯಲಿ ಆಗ ಶಕ್ತಿಯಿರುತ್ತದೆ ಇಲ್ಲದಿದ್ದರೆ ಇಲ್ಲದಿದ್ದರೆ ಅದರಲ್ಲಿ ನಾವು ರಾಜಕೀಯ ಬೆರೆಸಿ ಬಹಳ ದುರ್ಬಲ ಗೊಳಿಸುತ್ತೇವೆ. ನಾವು ರಾಜಕಾರಣಿಗಳೂ ದುರ್ಬಲರಾಗುತ್ತೇವೆ. ಅಧ್ಯಕ್ಷರೇ ಯಾವುದೇ ಹಿಸ್ಟರಿ ತೆಗೆದುಕೊಳ್ಳಿ, ಯಾರ್ಯಾರು ಈ ಸಹಕಾರ ಕ್ಷೇತ್ರದಲ್ಲಿ ಹಸ್ತಕ್ಷೇಪ ಮಾಡಿದ್ದಾರೆ ಅವರು ಎಲೆಕ್ಟ್ ಆಗಲಿಲ್ಲ ಮುಂದೆ, ಎಲೆಕ್ಟ್ ಆಗುವುದಿಲ್ಲ. ಅವರ ಮೇಲೆ ಸಾಕ್ಟು ಅಪಪ್ರಚಾರ ಬಂದು ಆ ಸಹಕಾರಿ ವ್ಯವಸ್ಥೆಯ ಸುಳಿಯಲ್ಲೇ ಮುಳುಗಿಹೋಗುತ್ತಾರೆ ಇದನ್ನು ನಾನು ಕಂಡಿದ್ದೇನೆ.

1.20 ಪಿ.ಎಂ.

ಶ್ರೀ ಎಂ. ವೀರಪ್ಪ ಮೊಯ್ಲಿ :- ಇವತ್ತು ನಮ್ಮ ಟ್ರೆಜರಿ ಬೆಂಚ್‌ನವರು ಅಥವಾ ಯಾರೇ ಆಗಿರಲಿ, ಇವತ್ತು ಈ ಸಹಕಾರಿ ವ್ಯವಸ್ಥೆಯಲ್ಲಿ ಹಸ್ತಕ್ಷೇಪ ಎಲ್ಲಿಯವರೆಗೆ ಆಗಿದೆ ಎಂದರೆ ಇವತ್ತು ನಾನು ಒಂದು ವಿಚಾರವನ್ನು ಕೇಳುತ್ತಿದ್ದೇನೆ. ಏಕೆಂದರೆ ಅನೇಕ ಸಮಯದಿಂದ ಒಂದು ರೀತಿ ಸಾರ್ವಜನಿಕ ಅಭಿಪ್ರಾಯ. It is a concensus in the State. - ಏನೆಂದರೆ ನಾಮಿನೇಷನ್ ಇರಬಾರದು. ನಾಮಿನೇಷನ್ ಇದ್ದರೂ ಕೂಡ ನಾಮಿನೇಷನ್ ಮೆಂಬರ್ಸ್‌ಗೆ ಅಧಿಕಾರವನ್ನು ಕೊಡಬಾರದು ಎಂದು ಮಾಡಬೇಕು ಹಾಗೂ ಅವರಿಗೆ ಓಟು ಮಾಡುವ ಹಕ್ಕು ಕೊಡಬಾರದು. ನನ್ನ ಸರ್ಕಾರ ಇರುವಾಗಲೂ ಕೂಡ ನಮ್ಮ ಖರ್ಗೆಯವರು ಸಹಕಾರಿ ಮಂತ್ರಿಯಾಗಿದ್ದರು. ಕೆ. ಹೆಚ್. ಪಾಟೀಲರು ಕೊಟ್ಟ ವರದಿ ಮೇಲೆ ಒಂದು ಕಾಂಪ್ರೆಹೆನ್ಸೀವ್ ಬಿಲ್ಲನ್ನು ನಾವು ತಯಾರು ಮಾಡಿ ಅದನ್ನು ವಿಧಾನಸಭೆಗೆ ಕೂಡ ಹಾಕಬೇಕು ಎಂದು ಎಲ್ಲಾ ಪ್ರಿಂಟ್ ಆಗಿ ರೆಡಿ ಇತ್ತು. ಈ ಕೋ- ಆಪರೇಟಿವ್ ಲಾಬಿ ಇದು ಪಕ್ಷಾತೀತ;

ಜಾತ್ಯಾತೀತ. ಈ ಕೋ- ಆಪರೇಟಿವ್ ಲಾಬಿ ಏನಿದೆ, ಇದೊಂದು ರೀತಿಯಲ್ಲಿ ಪಕ್ಷಾತೀತ. ಅವರೇ ಒಂದು a class by itself. They are the party by themselves. ಈ ರೀತಿಯು ಒತ್ತಡ, ಅವರ ಒತ್ತಡ ಒಂದು ವೇಳೆ ಜನತಾದಳದವರದು ಇದ್ದರೆ, ಕಾಂಗ್ರೆಸ್‌ನವರದ್ದು ಇದ್ದರೆ ಅದರ ಮಟ್ಟಿಗೆ ಅವರು ಒಗ್ಗಟ್ಟಾಗುತ್ತಾರೆ. ಸಿದ್ದರಾಮಯ್ಯನವರೇ, ಬಹುಶಃ ನಿಮಗೂ ಅನುಭವ ಇರಬಹುದು. ಒಂದು ವೇಳೆ ನಿಜವಾದ ಸೆಕ್ಯುಲರಿಸಂ ಇದ್ದರೆ ಅದು ಕೋ- ಆಪರೇಟಿವ್‌ನಲ್ಲಿ, ಅಷ್ಟು ಒಗ್ಗಟ್ಟಾಗಿ ಬಿಡುತ್ತಾರೆ. ಅವರಿಗೆ ಪಾರ್ಟಿ ಇಲ್ಲ. ಏನೂ ಇಲ್ಲ, ನಮ್ಮಲ್ಲಿ ಕೂಡ ಕೆಲವೊಬ್ಬರು ಇರುತ್ತಾರೆ. ಅವರು ಕಾಂಗ್ರೆಸ್‌ನವರು ಎಂದು ಹೇಳಿಕೊಳ್ಳುತ್ತಾರೆ. ಇಲ್ಲಿಗೆ ಬಂದರೆ ಜನತಾದಳವಾಗಿ ಬಿಡುತ್ತಾರೆ.

ಶ್ರೀ ಹೆಚ್. ಶಿವಪ್ಪ :- ಆದರೆ ನಮ್ಮ ವಿರೋಧಪಕ್ಷದ ನಾಯಕರು ವೆಸ್ಟೆಡ್ ಇಂಟರೆಸ್ಟ್ ಎಂದು ಹೇಳುತ್ತಾರೆ. ನೀವು ಹೇಳಿದ್ದು ಕರೆಕ್ಟ್.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಂತ್ರಿಗಳಾಗಿ ಹಾಗೆಯೇ ಷುಗರ್ ಫ್ಯಾಕ್ಟರಿಗೆ ಛೇರ್ಮನ್‌ಗಳಾಗಿ ಬಿಡುತ್ತಾರೆ. ಇದು ಯಾವ ನ್ಯಾಯ ? ನಿಮಗೇನೂ ಲೀಡರ್ ಸಿಗುವುದಿಲ್ಲವೇ ? ನಿಮ್ಮ ವರ್ಕರ್ಸ್ ಇಲ್ಲವೇ ? ಬೇರೆಯವರಿಗೆ ಮಾಡಿ. ಅಲ್ಲಿ ಷುಗರ್ ಫ್ಯಾಕ್ಟರಿಗೆ ಛೇರ್ಮನ್‌ಗಳೂ ಇವರೆ, ಇಲ್ಲಿ ಮಂತ್ರಿಗಳೂ ಕೂಡ ಇವರೇ. ಇದೊಂದು ಷೇರಿಂಗ್ ಆಫ್ ಪವರ್.

ಶ್ರೀ ಎಂ. ವೀರಪ್ಪಮೊಯಿಲಿ :- ಆದರೆ ರಾಜಕೀಯಕ್ಕೆ ಕೋ-ಆಪರೇಟಿವ್ ಮೂವ್‌ಮೆಂಟ್, ಸ್ಟೆಪ್ಪಿಂಗ್ ಸ್ಟೋನ್ ಅಥವಾ ಏಣಿ ಎಂದು ಹೇಳುತ್ತಾರೆ. ಅದು ಏಣಿಯಲ್ಲ. ಅದೊಂದು ರೀತಿಯಲ್ಲಿ ನೇಣು. ಇದನ್ನು ತಿಳಿದುಕೊಂಡಿದ್ದರೆ ಬಹುಶಃ ಅದಕ್ಕೆ ಯಾರೂ ಇವತ್ತು ಕೈಹಾಕುವ ಪ್ರಶ್ನೆ ಇಲ್ಲ. ಇದರಲ್ಲಿ ಯಾವ ಒಂದು ಕಾನ್‌ಸೆನ್ಸಸ್ ಈ ರಾಜ್ಯದಲ್ಲಿ ಇದೆ, ಸಹಕಾರಿ ಆಂದೋಳನದ ಬಗ್ಗೆ, ಆ ಕಾನ್‌ಸೆನ್ಸ್‌ಗೆ ಒಂದು ರೀತಿಯ ಕೊಡಲಿಯೇಟು ನೀವು ಇವತ್ತು ಹಾಕಿದ್ದೀರಿ. ಇದು ಸಣ್ಣ ಕೆಲಸ ಎಂದು ಹೇಳಿ ತಿಳಿದುಕೊಳ್ಳಬೇಡಿ. ಒಂದು ಒಡಮೂಡಿ ಬಂದಿತ್ತು ನಾಮಿನೇಷನ್‌ನವರಿಗೆ ಹಕ್ಕನ್ನು ಕೊಡಬಾರದು ಎಂದು ಅಥವಾ ವೋಟು ಕೊಡುವ ಹಕ್ಕು ಕೊಡಬಾರದು ಎಂದು. ಇದು ಪಕ್ಷಾತೀತವಾಗಿ ಒಂದು ರೀತಿಯಲ್ಲಿ ಸದನದಲ್ಲಿ ಒಡಮೂಡಿ ಬಂದಂಥ ಅಭಿಪ್ರಾಯ. ಅಥವಾ ಈ ರಾಜ್ಯದಲ್ಲೆ ಒಡಮೂಡಿಕೊಂಡು ಬಂದಂಥ ಯಾವ ಒಂದು ಸಮನ್ವಯತೆ, ಒಂದು ನ್ಯಾಯವಾದಂಥ ಅಥವಾ ಒಂದು ಕೋ-ಆಪರೇಟಿವ್ ಮೂವ್‌ಮೆಂಟಿಗೆ ಒಂದು ಶಕ್ತಿಯನ್ನು ಕೊಡತಕ್ಕಂಥ ಏನು ಒಂದು ವಾತಾವರಣ ಬಂದಿತ್ತು, ಆ ವಾತಾವರಣಕ್ಕೆ ದೊಡ್ಡ ಕೊಡಲಿಯೇಟು ಹಾಕಿದ್ದೀರಿ. ಏಕೆಂದರೆ ಇದು ಬಹಳ ಸಮಯವಾಗಲಿಲ್ಲ ಈ ನಾಮಿನೇಟೆಡ್ ಮೆಂಬರ್ಸ್‌ಗೆ ವೋಟಿನ ಹಕ್ಕು ಕೊಡಬಾರದು ಎಂದು ಒಂದನೇ ತಾರೀಖು ಜುಲೈ 1998ರಂದು ಈಬಿಲ್ ಗೆ ರಾಜ್ಯಪಾಲರ ಒಪ್ಪಿಗೆ ದೊರಕಿದೆ.

ಎಷ್ಟು ಸಮಯವಾಯಿತು ಎಂಟು ತಿಂಗಳುಕೂಡ ಆಗಲಿಲ್ಲ ಸ್ಟೇಟ್‌ಮೆಂಟ್‌ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್ ಇದು ಈ ಸದನದಲ್ಲಿ ಮಂಡನೆಯಾದದ್ದು ಈ ಒಂದು ಮಸೂದೆಗೆ ಒಪ್ಪಿಗೆ ಏಕೆ ಕೊಟ್ಟಿದ್ದೇವೆ. ಈ ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್ ಅನ್ನು ಕಂಡು ಮನವರಿಕೆಯಾಗಿ ಈ ಸದನ ಒಪ್ಪಿಗೆಯನ್ನು ಕೊಟ್ಟಿದೆ ಅದು 10 ಮತ್ತು 11 to provide for nomination of only three persons in the committee of administered society. ಅದು ಈಗ ಹೊರಟುಹೋಗಿದೆ. To. remove the powers of the government u- s 30 (a) for appointment of special officer, (13) To do away with the government nomination of 1/3 of

the total strength of the committee under section 3(A) (13) To prohibit such nominated members to contest in the election of president, Vice-President and other office-bearers of the committee.

ಹೀಗೆ ಸೆಕ್ಷನ್11ರಲ್ಲಿ ಹೇಳುತ್ತೀರಿ ಇದನ್ನು ಮಾಡಿದ್ದೀರಿ ಈ ಸದನದಲ್ಲಿ ಯಾವುದನ್ನು ಮಾಡಬಾರದು ಎಂದು ಹೇಳಿ ನಾವು ನಿಷೇಧ ಮಾಡಿದ್ದೇವೆ, ಈ ಸದನದಲ್ಲಿ ಒಂದು ಅಭಿಪ್ರಾಯ ಮೂಡಿದ್ದು ಇದಕ್ಕೆ ಯಾರು ಆ ದಿವಸ ವಿರೋಧ ಮಾಡಲಿಲ್ಲ. ಆ ಕಡೆಯಿಂದಲೂ ಮಾಡಲಿಲ್ಲ. ಈ ಕಡೆಯಿಂದಲಾ ಮಾಡಲಿಲ್ಲ. ಇದೊಂದು ವಿವಾದಾಸ್ಪದವಾದ ತಿದ್ದುಪಡಿಯಲ್ಲ. ಎಲ್ಲರೂ ಕೂಡ ಒಪ್ಪಿಕೊಂಡು ಬಂದ ಒಂದು ತಿದ್ದುಪಡಿ. ಇದು ಪ್ರಗತಿಪರವಾದದ್ದು. ಈಗ ಮಾಡಿರುವುದು ಏನು? Most retrograde step you have done ಅಷ್ಟು ಮಾತ್ರವಲ್ಲ. ಈ ಸದನದ ಸಾರ್ವಭೌಮತ್ವಕ್ಕೆ ಕೊಟ್ಟಂಥ ಏಟು. ಏಕೆಂದರೆ ಸುಗ್ರೀವಾಜ್ಞೆ ತರುತ್ತೀರಿ. ಯಾವಾಗ ಎಂದರೆ ಏನಾದರೂ ಒಂದು ಸಾರ್ವಜನಿಕ ಹಿತಾಸಕ್ತಿಯಿಂದ ನಾವು ತರುತ್ತೇವೆ. ಇದರಲ್ಲಿ ಒಂದು public interest should be involved. ನಾವು ರಾಜ್ಯಪಾಲರ ಮೇಲೆ ಆಪಾದನೆ ಮಾಡಲಿಕ್ಕೆ ಈ ಸದನವನ್ನು ಉಪಯೋಗ ಮಾಡುತ್ತಿಲ್ಲ. ಆದರೆ you have misled the Governor ಕಾನ್ಸ್‌ಟಿಟ್ಯೂಷನಲ್ ಅಥಾರಿಟಿಯನ್ನು ನೀವು ಮಿಸ್‌ಲೀಡ್ ಮಾಡಿದ್ದೀರಿ. ಇದು ಯಾವ ಒಂದು ಈ ಸದನದ ಸೌರ್ವಭೌಮತ್ವದ ಒಂದು ಒಟ್ಟು ಒಮ್ಮತದ ಒಂದು ಅಭಿಪ್ರಾಯದಿಂದ ಯಾವ ಒಂದು ತಿದ್ದುಪಡಿಯನ್ನು ತಂದಿದ್ದೇವೆ, ಅದಕ್ಕೆ ಈಗ ಹಿಂದಿನ ಬಾಗಿಲಿನಿಂದ you have hijacked this very noble sanctified doctrine and the principle of a cooperative movement.

ಆದರೆ ಈಗ ಇದು It has taken a reverse gear.

ಕೋ-ಆಪರೇಟಿವ್ ಮೂವ್‌ಮೆಂಟ್ ಪ್ರಗತಿಪರವಾಗಿ ಇವತ್ತು ನಿರ್ಮಂಚನೆಯಿಂದ ಇವತ್ತು ಒಂದು ರೀತಿಯ ಟ್ರಾನ್ಸ್‌ಫರ್‌ನ್ಸಿಯಲ್ಲಿ ಮುಂದೆ ಹೋಗುವ ಒಂದು ಕೋ-ಆಪರೇಟಿವ್‌ಮೂವ್‌ಮೆಂಟನ್ನು ನೀವು ಗಟಾರಕ್ಕೆ ತಳ್ಳಿಬಿಟ್ಟದ್ದೀರಿ. ಇದಕ್ಕಿಂತ ದುಷ್ಟಕೆಲಸ ಮತ್ತೊಂದು ಇಲ್ಲ. ಹಾಗಾದರೆ ಏನು ಪಾವಿತ್ರ್ಯತೆ ಇದೆ? ಈ ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಷನ್ ಅಂಡ್ ರೀಸನ್ಸ್‌ಗೆ ಏನು ಪಾವಿತ್ರ್ಯತೆ ಇದೆ ? ಯಾವ ಕಾರಣದಿಂದ ಸುಗ್ರೀವಾಜ್ಞೆ ತಂದಿರಿ? ಏನು ಪಬ್ಲಿಕ್ ಇಂಟರೆಸ್ಟ್ ಇದರಲ್ಲಿ ಇನ್‌ವಾಲ್ವ್ ಆಗಿದೆ ? Practice of nepotism ಬರೀ ಸ್ವಜನಪಕ್ಷಪಾತ. ತನ್ನ ಮಕ್ಕಳಿಗಾಗಿ ತನ್ನ ಗುಂಪಿನವರಿಗಾಗಿ ತನ್ನು ಸ್ನೇಹದ ಬಳಗದವರಿಗಾಗಿ ಇಂಥ ಸುಗ್ರೀವಾಜ್ಞೆಯನ್ನು ತಂದು ದುರುಪಯೋಗ ಮಾಡಿ ಕೊಂಡಿರುವುದು. ಇದಕ್ಕಿಂತ ದೊಡ್ಡ ಸ್ವಜನಪಕ್ಷಪಾತ ಬೇರೊಂದು ಇಲ್ಲ. ಮುಂದೆ ಏನಾದರೂ ಎನ್‌ಕ್ವೈರ್ ಆಗುವುದು ಇದ್ದರೆ I think the Minister concerned or whoever is concerned, will be positively held guilty under an act of nepotism.

ಇದು ಖಂಡಿತವಾಗಿ ಆಗಲಿಕ್ಕೆ ಸಾಧ್ಯ ಇದೆ. ಏಕೆಂದರೆ ಏನು ನಾಮಿನೇಷನ್‌ಗಳು ಬಂದಿವೆ ಅದನ್ನು ಪಟ್ಟಿ ಮಾಡಿ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಯಾರು ಆಗಿದ್ದಾರೆ, ಹೇಗೆ ಆಗಿದ್ದಾರೆ? ಸಿದ್ದರಾಮಯ್ಯನವರೇ ತಾವು ಪ್ರಮುಖವಾದ ಒಂದು ಪಕ್ಷದ ಅಧ್ಯಕ್ಷರಾಗಿದ್ದೀರಿ. ಇದರಲ್ಲಿ ಏನು ಕಾಣುತ್ತದೆ. we find lot of diffidence in your own team. ಅದಕ್ಕೆ ನೀವು ಹೇಳುತ್ತೀರಿ ನಾವು ಗೆಲ್ಲುತ್ತೇವೆ, ನಾವು ಸ್ವತಃಗೆಲ್ಲುತ್ತೇವೆ. ಅದಕ್ಕೆ ನಮ್ಮ ಮೆಚ್ಚುಗೆ. ಏಕೆಂದರೆ you must have that grit. you must have that political will. I appreciate your statement.

ನಿಮ್ಮವರು ಏನು ಮಾಡುತ್ತಿದ್ದಾರೆ, ನಾವು ಮುಂದೆ ಅಧ್ಯಕ್ಷರಾಗಿ ಬರುವುದಿಲ್ಲ. ಆದರೆ ಎಲ್ಲಾದರೂ ಈ ಕೋ-ಅಪರೇಟಿವ್ ಮೂವ್‌ಮೆಂಟಿನ ಅಧ್ಯಕ್ಷರಾಗಿ ನಮ್ಮ ಸ್ಥಾನವನ್ನು ನಾವು ಖಾಯಂ ಮಾಡಿಕೊಳ್ಳೋಣ ಎಂದು ಹೇಳಿ ಇದಕ್ಕೆ ಒಂದು ಅನುವು ಮಾಡಿಕೊಳ್ಳಲಿಕ್ಕೆ ಇವತ್ತು ಇಂಥ ಸುಗ್ರೀವಾಜ್ಞೆಯನ್ನು ತಾವು ಮಾಡುವುದು ಇದ್ದರೆ ದುರಾದೃಷ್ಟವಶಾತ್ ತಮಗೇ ಏಟಾಗುತ್ತದೆ. Some sabotage behind you and against you and you are leading the party.

Sri Siddaramaiah :- It is their commitment to the co-operative movement.

ಶ್ರೀ ಎಂ. ವೀರಪ್ಪ ಮೊಯಿಲಿ:-ಶ್ರೀಮತಿ ಲೀಲಾದೇವಿ ಪ್ರಸಾದರವರು ಮಂತ್ರಿಗಳು, ಅವರು ಅಧ್ಯಕ್ಷರಾಗಿದ್ದಾರೆ. ಅದು ಪ್ರತ್ಯೇಕ. ಅದು ಆಗಿದೆ. I think there is a total sabotage, before you enter.......

ನೀವು ಚುನಾವಣೆಯ ಕಣಕ್ಕೆ ಪ್ರವೇಶ ಮಾಡುವ ಮೊದಲೇ ನಿಮ್ಮ ಪಕ್ಷವನ್ನು ತಮ್ಮ ನಾಯಕತ್ವವನ್ನು ಒಡೆಯತಕ್ಕಂಥ ಒಂದು ಪ್ರಯತ್ನ ಇಲ್ಲಿ ಬಹಳ ಸುಸೂತ್ರವಾಗಿ ಆಗಿದೆ . It is a systematic sabotage of your leadership, systematic sabotage of your political party, which we do not know.

ನಿಮಗೂ ಶಕ್ತಿ ಬರಬೇಕು. ನಮಗೂ ಶಕ್ತಿ ಬರಬೇಕು. ನಾವಿಬ್ಬರೂ ಕೂಡಿ ನಮ್ಮ ಹತ್ತಿರ ಗೇಣಿಕಾರರು ಇದ್ದಾರಲ್ಲಾ, ಅವರನ್ನು ಸದೆಬಡಿಯುವ ಒಂದು ಕಾರ್ಯಕ್ರಮವನ್ನು ನಾವು ಕೈಗೊಳ್ಳುವಾಗ ನೀವು ಏಕೆ ವೀಕ್ ಆಗುತ್ತೀರಿ? Don't become weak. Becoming weak is not good for us.

Sri Siddaramaiah:- Our party is very, very strong. I am also quite strong.

ಶ್ರೀ ಎಂ. ವೀರಪ್ಪ ಮೊಯಿಲಿ :- ಆದರೆ ಇವತ್ತು ಒಂದೊಂದೇ ವಿಕೆಟ್‌ಬೀಳುತ್ತಾ ಇದೆ. ಉದಾಸಿಯವರ ವಿಕೆಟ್ ಬಿದ್ದಾಯಿತು.

SIR SIDDARAMAIAH : I am physically strong, mentally strong. As President also, I am strong.

ಶ್ರೀ ಆರಗ ಜ್ಞಾನೇಂದ್ರ :- ಬರುವ ಚುನಾವಣೆಯಲ್ಲಿ, ಮೈತ್ರಿ ಕೂಟ, ಇಬ್ಬರೂ ಸೇರಿ ಸಜ್ಜಾಗಿದ್ದೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ :- ನೀವು ಮಾಡಿದಂತಹ ಮೈತ್ರಿ ಕೂಟ ನಾವು ಜನ್ಮ ಜನ್ಮಾಂತರದಲ್ಲಿ ಮಾಡುವುದಿಲ್ಲ. ಆದ್ದರಿಂದ ಆ ವಿಚಾರ ಬಿಡಿ. I don't want you to be weak .

ಇದೊಂದು ತಾತ್ಕಾಲಿಕವಾದುದು. ಲಾಂಗ್ ರೇಂಜ್ ಸಕ್ಸಸ್‌ಗೆ ಟಾರ್ಗೆಟ್ ಇಡುವುದರ ಬದಲು ಈ ಶಾರ್ಟ್ ರೇಂಜ್ ಟಾರ್ಗೆಟ್‌ಗೆ ಕೈಹಾಕಿ, ಇವತ್ತು ನೀವು ಹುತ್ತಕ್ಕೆ ಕೈ ಹಾಕಿದ ಹಾಗೆ ಮಾಡಿದ್ದೀರಿ. You have lost lot of goodwill, not only among the people, but also among the co-operators.

ಆದ್ದರಿಂದ ನಿಮ್ಮ ಹಿತದೃಷ್ಟಿಯಿಂದ, ಮಾಡಿಲ್ಲ ಸಾರ್ವಜನಿಕ ಹಿತದೃಷ್ಟಿಯನ್ನು ಒಂದುರೀತಿಯಲ್ಲಿ ಸದೆ ಬಡಿದು ಆಯಿತು. ನಿಮ್ಮ ಹಿತದೃಷ್ಟಿಯಿಂದ ಇದನ್ನು ಹಿಂತೆಗೆದುಕೊಳ್ಳುವುದು ಒಳ್ಳೆಯದು. ಏಕೆಂದರೆ ಚುನಾವಣೆ ಆಗಿ ಹೋಗಿದೆ. ಈಗ ನಿಮ್ಮ ಪರ್ಪಸ್‌ಏನು ? ಒಂದು ತಾತ್ಕಾಲಿಕ ವಾದಂತಹ ಪ್ರೆಸಿಡೆಂಟ್ಸ್, ವೈಸ್‌ಪ್ರೆಸಿಡೆಂಟ್ ಹುದ್ದೆಗಳನ್ನು ಪಡೆದುಕೊಳ್ಳಲು ಈ ಅಧಿಕಾರದ ಲಾಲಸೆಯಿಂದ

ಒಂದು ಸ್ವಜನ ಪಕ್ಷಪಾತದ ಒಂದು ಅತ್ಯಂತ ಹೀನ, ಒಂದು ಕ್ರಿಮಿನಲ್ ಚಾನಲ್‌ನ್ನು ತಾವು ಹಿಡಿದಿದ್ದೀರಿ ಇದನ್ನು ಖಂಡಿತವಾಗಿಯೂ ಖಂಡಿಸಬೇಕುಗುತ್ತದೆ. ಅದೂ ಕೂಡ ಶ್ರೀ ಎಸ್. ಎಸ್. ಪಾಟೀಲ್ ಅವರು ನಮ್ಮ ಕಡೆ ಸಹ ಭಾಷಣ ಮಾಡಿದರು. ಏನು ಬಸವಣ್ಣ ನವರ ವಚನ ಹೇಳಿ ಭಾಷಣ ಮಾಡುತ್ತಾರೆ, ನಾವು ತಲೆದೂಗಬೇಕು. ಏನಪ್ಪ ಇದೊಂದು ಬಸವಣ್ಣನವರ ದೊಡ್ಡ ಅವತಾರವೇ ಇವತ್ತು ನಮ್ಮ ಎಸ್. ಎಸ್. ಪಾಟೀಲ್ ಅವರಲ್ಲಿ ಮೂರ್ತೀಭವಿಸಿ ಬಂದಿದೆ ಎಂದು ಒಂದು ರೀತಿಯ ಅಭಿಪ್ರಾಯ ಬರುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಮ್ಮ ಕಡೆ ಒಂದು ಮಾತು ಹೇಳುತ್ತಾರೆ. "ಮುಖ್ ಮೇ ರಾಮ್, ಬಗಲ್ ಮೇ ಚೂರಿ"ಎಂದು ಹೇಳುತ್ತಾರೆ. ನಿಮಗೆ ಗೊತ್ತಲ್ಲಾ. ನೀವು ಏಕೋ ನಗುತ್ತಿಲ್ಲ. ಅಂದರೆ ಹೇಳುವುದು ಬಸವಣ್ಣನವರ ತತ್ವ.ಹಾಕುವುದು ಚೂರಿ. ಇಲ್ಲಿ ಆ ಪ್ರಶ್ನೆ ಬಂದಿಲ್ಲ. ನೀವೇ ತಿದ್ದುಪಡಿ ತಂದು ಪುನಃ ಇನ್ನೊಂದು ತಿದ್ದುಪಡಿ ಇದೇ ಸದನದಲ್ಲಿ ಎಂಟು ತಿಂಗಳಲ್ಲಿ ತಂದಿದ್ದೀರಿ. ನೀವೇ ಮಾಡಿಕೊಳ್ಳಿ ಎನ್ನತಕ್ಕದ್ದು ಅಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಎಂಟು ತಿಂಗಳಲ್ಲಿ ಸಾರ್ವಜನಿಕ ಹಿತಾಸಕ್ತಿ ಅಂಶದಲ್ಲಿ ಬದಲಾವಣೆ ಏನು ಆಗಿದೆ ಅಥವಾ ಏನು progessive component which you would like to introduce ?

ಏಕೆಂದರೆ ನಾನು ಆರ್ಡಿನೆನ್ಸ್ ಕೂಡ ನೋಡಿದ್ದೇನೆ. ಒಂದು ಪ್ರಿಯಾಂಬಲ್ ಕೂಡ ಇಲ್ಲದೇ ಇವತ್ತು ಈ ರೀತಿಯ ಒಂದು ಸಗ್ರೀವಾಜ್ಞೆಯನ್ನು ತಂದು ಸುಗ್ರೀವಾಜ್ಞೆಯ ಅಧಿಕಾರವನ್ನೇ grossly violated, flagrant violation of the power of the issuance of ordinance. It is to subserve the interest of the nepotism.

ನಮ್ಮ ಬಂಧುಗಳನ್ನು, ನಮ್ಮವರನ್ನು, ನಮ್ಮ ಮಕ್ಕಳನ್ನು ಅಧಿಕಾರಕ್ಕೆ ಏರಿಸತಕ್ಕಂಥ ಅಧಿಕಾರದ ಒಂದು ದುರುಪಯೋಗ ಇಲ್ಲಿ ನಡೆದಿದೆ. ಇಂತಹ ಒಂದು ನಾಚಿಕೆಗೇಡಿತನ ಬಹುಶಃ ರಾಜ್ಯದಲ್ಲಿ ಇತಿಹಾಸದಲ್ಲಿ ನಡೆಯಲಿಲ್ಲ. ಅಷ್ಟು ಓಪನ್ ಆಗಿ ಅಷ್ಟು ಒಂದು ರೀತಿಯ ಸಂಕುಚಿತ ಭಾವನೆಯಿಂದ ಇದು ಆಗಿದೆ. ಬಹುಶಃ ಆ ಕಡೆಯವರಿಗೂ ಇದರಿಂದ ಮೆಚ್ಚಿಗೆ ಆಗಲಿಲ್ಲ. ಈ ಕಡೆಯವರಿಗೂ ಮೆಚ್ಚಿಗೆ ಆಗಲಿಲ್ಲ. ಆದರೆ ಕೆಲವರಿಗೆ ಮೆಚ್ಚಿಗೆ ಆಗಿದೆ. ಇದು ಖಂಡಿತವಾಗಿಯೂ ಕೂಡ ನಿಮಗೆ ಶೋಭೆ ತರುವುದು ಅಲ್ಲ. ಬಹುಶಃ ನಮ್ಮ ಸಹಕಾರಿ ಆಂದೋಳನಕ್ಕೆ ವಿಶೇಷವಾದಂತಹ ಕ್ಷೋಭೆಯನ್ನು ಹಾಗೂ ಅಪಚಾರವನ್ನು ಮಾಡತಕ್ಕಂಥ, ಒಂದು ದೊಡ್ಡ ಪಾಪದ ಕೆಲಸವನ್ನು ತಾವು ಖಂಡಿತವಾಗಿ ಮಾಡಿದ್ದೀರಿ. ಅದನ್ನು ತಾವು ಮುಂದುವರಿಸತಕ್ಕ ಅಥವಾ ಜಸ್ಟಿಫೈ ಮಾಡತಕ್ಕ ಕೆಲಸಕ್ಕೆ ಹೋಗದೆ ಹಿಂತೆಗೆದುಕೊಂಡು ಸಹಕಾರಿ ಆಂದೋಳನದ ಸತ್ವ, ಸಹಕಾರಿ ಆಂದೋಳನದ ಸಾತ್ವಿಕತೆ, ಸಹಕಾರಿ ಆಂದೋಲನದ ಈ ಒಂದು ಉನ್ನತವಾದಂತಹ ಧ್ಯೇಯವನ್ನು ಸಾಧನೆ ಮಾಡಲಿಕ್ಕೆ ಪ್ರಯತ್ನ ಮಾಡಬೇಕೆಂದು ತಮ್ಮ ಮುಖೇನ ಸರ್ಕಾರವನ್ನು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಮಂಜುನಾಥ ಸಿ.ಕುನ್ನೂರ್ :- ಮಾನ್ಯ ಉಪಾಧ್ಯಕ್ಷರೆ, ಈ ಸಹಕಾರ ಸಂಘಗಳ ಕಾಯಿದೆ ತಿದ್ದುಪಡಿ ತಂದಿರುವ ಬಗ್ಗೆ ನಮ್ಮ ಮಾನ್ಯ ನಾಯಕರು ಈಗಾಗಲೇ ವಿವರವಾಗಿ ಹೇಳಿದ್ದಾರೆ. ಈ ಒಂದು ತಿದ್ದುಪಡಿಯನ್ನು ನೋಡಿದಾಗ ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ವೀರಪ್ಪ ಮೊಯಿಲಿಯವರು ಕೂಡ ಹಾಗೆ ಯಾವುದೇ ಒಂದು ಪ್ರಿಯಾಂಬಲ್ ಇಲ್ಲದಂತೆ ಈ ಒಂದು

ತಿದ್ದುಪಡಿಯನ್ನು ತಂದಿದ್ದಾರೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಬಹಳ ಬುದ್ಧಿವಂತಿಕೆಯಿಂದ ಈ amendment of section 28 (A) ಗೆ ತಂದಿದ್ದಾರೆ. ಇದರಲ್ಲಿ ಏನು ಇದೆ ಅಂದರೆ " For the words ' elected members of the committee' , the words 'members of the committee' shall be substituted."

ಈ ತಿದ್ದುಪಡಿಯೊಳಗೆ ಎಲೆಕ್ಟೆಡ್ ಮೆಂಬರ್ಸ್ ಎನ್ನುವಂತಹ ಒಂದು ಶಬ್ದವನ್ನು ತೆಗೆದು ತಮಗೆ ಅನುಕೂಲ ವಾಗಿ ಇರತಕ್ಕಂಥ ಕಾನೂನಿನಲ್ಲಿ ಇದ್ದಂತಹ ಶಬ್ದಗಳನ್ನು ಬಿಟ್ಟು ಹೆಚ್ಚಿಗೆ ಏನನ್ನೂ ಇದರಲ್ಲಿ ಸೇರಿಸದೆ ಏನೊಂದು ತಿದ್ದುಪಡಿ ಮಾಡಿದ್ದಾರೆ, ಇದೊಂದು ರಾಜಕೀಯ ಉದ್ದೇಶದಿಂದ ತಿದ್ದುಪಡಿ ಮಾಡುವುದು ಇದೆ ಎಂದು ಇವತ್ತು ಸ್ಪಷ್ಟವಾಗಿ ತಿಳಿಯುತ್ತಿದೆ. ಈ ರಾಜ್ಯದಲ್ಲಿ ಸುಮಾರು 26,27 ಸಾವಿರ ಸಹಕಾರ ಸಂಘಗಳು ಇದ್ದಾವೆ. ಆ ಎಲ್ಲಾ ಸಹಕಾರ ಸಂಘಗಳಲ್ಲಿ ಈ ಒಂದು ತಿದ್ದುಪಡಿ ಕಾನೂನಿನಲ್ಲಿ ಅಧಿಕಾರವನ್ನು ಐದು ವರ್ಷಗಳ ಅವಧಿ ಕೊಟ್ಟಿತ್ತು, ಮತ್ತು ಅಲ್ಲಿ ಅಧ್ಯಕ್ಷರಾಗತಕ್ಕವರಿಗೆ ಎರಡೂವರೆ ವರ್ಷಕಾಲ ಅವಧಿಯನ್ನು ಮುಂದುವರಿಸಿದ್ದಾರೆ. ಆದರೆ ಇಂತಹ ಪರಿಸ್ಥಿತಿಯಲ್ಲಿ ಈ ಐದು ವರ್ಷಗಳ ಅವಧಿ ಇರತಕ್ಕಂಥದ್ದು, ಮೊದಲು ಮೂರು ವರ್ಷ ಇತ್ತು. ಐದು ವರ್ಷಗಳವರೆಗೆ ಅಧಿಕಾರದ ಅವಧಿಯನ್ನು ಈ ಆಡಳಿತ ಮಂಡಳಿಗೆ ವಿಸ್ತರಿಸಿ ಈ ಸಂದರ್ಭದಲ್ಲಿ ಈ ನಾಮಕರಣ ಮಾಡಿದ್ದು ಏನಾಗಿದೆ ಎಂದರೆ ಆ ಚುನಾಯಿತ ಪ್ರತಿನಿಧಿಗಳ ಅಧಿಕಾರವನ್ನು ಮೊಟಕುಗೊಳಿಸುವುದು ಅಂದರೆ ಇದೊಂದು ಪ್ರಜಾಪ್ರಭುತ್ವಕ್ಕೆ ಕೊಡಲಿ ಪೆಟ್ಟು ಬಿದ್ದ ಹಾಗಿದೆ ಎನ್ನತಕ್ಕದ್ದನ್ನು ನಾವು ಇವತ್ತು ಸ್ಪಷ್ಟವಾಗಿ ಹೇಳಬೇಕಾಗಿದೆ. ಆ ಕಾರಣದಿಂದ ಇವತ್ತು ಬೇಗನೆ ಈ ಒಂದು ಆರ್ಡಿನೆನ್ಸನ್ನು ವಾಪಸ್ ತೆಗೆದುಕೊಳ್ಳಬೇಕು. ಮತ್ತು ನಮ್ಮ ಮಾನ್ಯ ಸಹಕಾರ ಸಚಿವರು ಧಾರವಾಡ ಜಿಲ್ಲೆಯವರು ಅವರು ಬಸವಣ್ಣನವರ ವಚನವನ್ನು ಹೇಳದೆ ಎಲ್ಲಿಯೂ ಭಾಷಣ ಮಾಡುವುದಿಲ್ಲ. ಅವರು ಅನೇಕ ಬಾರಿ ಹೇಳಿದ್ದಾರೆ, ಸದನದ ಹೊರಗಡೆಯೂ ಹೇಳಿದ್ದಾರೆ. ಏನಾದರೂ ತಿದ್ದುಪಡಿಯನ್ನು ಮಾಡಿದರೆ ನಾನು ಒಂದು ಕ್ಷಣವೂ ಅಧಿಕಾರದಲ್ಲಿ ಇರುವುದಿಲ್ಲ ಎಂದು ಹೇಳಿದ್ದಾರೆ. ಆ ಕಾರಣದಿಂದ ಅವರು ಈ ಕ್ಷಣವೇ ರಾಜೀನಾಮೆಯನ್ನು ಕೊಟ್ಟರೆ ಒಳ್ಳೆಯದು ಆಗುತ್ತದೆ. ಮತ್ತು ಅದನ್ನು ಮಾಡದೇ ಹೋದರೆ ನಮ್ಮ ಮಾನ್ಯ ನಾಯಕರು ಏನು ತೀರ್ಮಾನ ತೆಗೆದುಕೊಳ್ಳುತ್ತಾರೆ, ಅದಕ್ಕೆ ನಾವು ಬದ್ಧರಾಗಿ ಅದರ ವಿರುದ್ಧ ಪ್ರತಿಭಟನೆ ಮಾಡಬೇಕು ಎನ್ನತಕ್ಕ ಮಾತನ್ನು ಹೇಳುತ್ತೇನೆ. ಬಸವಣ್ಣನವರ ವಚನ " ಕಳಬೇಡ ಕೊಲಬೇಡ, ಇವನಾರವಾ, ಇವನಾರವ" ಎನ್ನತಕ್ಕದ್ದೇ ಹೇಳುವುದು. ಆದರೆ ಅವರೇನು ಮಾಡಿದ್ದಾರೆ ಎಂದರೆ ನಡೆ ಮತ್ತು ನುಡಿ, ಏನು ನುಡಿದಿದ್ದಾರೆ. ಆಗಸ್ಟ್ 98 ಒಳಗೆ ಸಮಗ್ರವಾಗಿ ಕಾನೂನನ್ನೇ ತಿದ್ದುಪಡಿ ಮಾಡಿದ್ದಾರೆ. 40 ವರ್ಷಗಳ ನಂತರ ಸಹಕಾರಿ ಕಾನೂನನ್ನು ತಿದ್ದುಪಡಿ ಮಾಡಿ ಉಭಯ ಸದನದಲ್ಲಿ ಅದಕ್ಕೆ ಮಾನ್ಯತೆ ನೀಡಿ ಅಂತಹ ಒಂದು ಕಾನೂನನ್ನು ಎಂಟು ತಿಂಗಳ ನಂತರ, ಎಂಟೇ ತಿಂಗಳ ಒಳಗಾಗಿ ಮತ್ತೆ ತಿದ್ದುಪಡಿ ಮಾಡಿ ಈ ಅಧಿಕಾರ ಹಾಕಿದ್ದಾರೆ ಎಂದರೆ ಆ ಬಸವಣ್ಣನವರ ತತ್ವಕ್ಕೆ, ಮಾನ್ಯ ಸಚಿವರು ಮಾಡಿದಂತೆ ನಡೆದಿಲ್ಲ. ಅದಕ್ಕೆ ತದ್ವಿರುದ್ಧವಾಗಿ ಇವತ್ತು ಅನೈತಿಕವಾದಂತಹ ಕಾನೂನನ್ನು ತಂದಿದ್ದಾರೆ. ಆ ಕಾರಣದಿಂದ ಇಂತಹ ಒಂದು ತಿದ್ದುಪಡಿಯನ್ನು ವಾಪಸ್ ತೆಗೆದುಕೊಳ್ಳಬೇಕು. ಮತ್ತು ಮಾನ್ಯ ಸಚಿವರು ರಾಜೀನಾಮೆಯನ್ನು ಕೊಡಬೇಕು ಎನ್ನತಕ್ಕದ್ದನ್ನು ಕೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಉಪಾಧ್ಯಕ್ಷರೆ, ನಾವೆಲ್ಲ ಸದಸ್ಯರು ಕೆಲವರು ಸಹಕಾರಿ ರಂಗ, ಸಂಘದಲ್ಲಿ ಎಲ್ಲಾ ದುಡಿದು ಈ ಹಂತಕ್ಕೆ ಬಂದಿರತಕ್ಕವರು. ಮಾನ್ಯ ಮೊಯಿಲಿ ಅವರು ಹೇಳಿದ ಹಾಗೆ ನಾವು ರಾಜಕಾರಣಕ್ಕಿಂತ ಮೊದಲು ಸಹಕಾರಿ ರಂಗದಲ್ಲಿ ದುಡಿದಿರತಕ್ಕವರು. ನಾವು ಈ ಶಾಸನಸಭೆಯಲ್ಲಿ ಕುಳಿತಾಗ ಆ ಸಹಾಕಾರಿ ರಂಗದಲ್ಲಿ ಕೆಲಸ ಮಾಡುತ್ತಿದ್ದಂತಹ ಸಂದರ್ಭದಲ್ಲಿ ಈ ಕಾಯಿದೆಯಲ್ಲಿ ಏನು ನ್ಯೂನತೆ ಇತ್ತು ಅದನ್ನು ಪರಿಹಾರ ಮಾಡಬೇಕು. ಅದನ್ನು ಬದಲಾವಣೆ ಮಾಡಬೇಕು ಎನ್ನುವಂತಹ ತುಡಿತ ನಮ್ಮ ಹತ್ತಿರ ಇತ್ತು. ಅದಕ್ಕೆ ಒಂದು ಸರಿಯಾದಂತಹ ಸ್ವರೂಪವನ್ನು ಕಳೆದ ಅಧಿವೇಶನದಲ್ಲಿ ಮಾನ್ಯ ಸಹಕಾರ ಸಚಿವರಾದಂತಹ ಶ್ರೀ ಎಸ್.ಎಸ್.ಪಾಟೀಲ್ ಅವರು ಕೊಟ್ಟರು ಎನ್ನುವಂತಹ ಒಂದು ಸಂತೋಷ ನಮ್ಮೆಲ್ಲರಿಗೂ ಆಗಿತ್ತು. ಅವರು ಆ ಕಾಯಿದೆಗೆ ತಿದ್ದುಪಡಿಯನ್ನು ತರುವಂತಹ ಅವಕಾಶದಿಂದ ವಂಚಿತ ರಾದಂತಹ ಸಂದರ್ಭದಲ್ಲಿ ನಾವೇ ಹೋಗಿ ಒತ್ತಡವನ್ನು ಅವರ ಮೇಲೆ ತಂದೆವು. ಪಾಟೀಲ್ ಅವರೇ ದಯವಿಟ್ಟು ಇದನ್ನು ಧೈರ್ಯ ಮಾಡಿ ತನ್ನಿ, ನಾವೆಲ್ಲಾ ಇದರಲ್ಲಿ ಸಹಕಾರ ಕೊಡುತ್ತೇವೆ. ಇದರಲ್ಲಿ ಪಕ್ಷ, ಪಂಗಡಗಳ ವ್ಯತ್ಯಾಸ ಬೇರೆ ಮಾಡಲಿಕ್ಕೆ ಸಾಧ್ಯವಿಲ್ಲ. ಇದು ಆಗಬೇಕಾದಂತಹ ವಿಚಾರ ಎಂದು ಹೇಳಿದೆವು. ಬಹುಶಃ ಆವತ್ತು ಕಾಯಿದೆ ಸರಿಯಾದಂತಹ ರೀತಿಯಲ್ಲಿ ಚರ್ಚೆ ಆಗಬೇಕಾಗಿತ್ತು. ಸುಮಾರು ಎರಡು ದಿನವಾದರೂ ಚರ್ಚೆ ಆಗಬೇಕಾಗಿತ್ತು. ಆದರೆ ಹರಿಬರಿನಲ್ಲಿ ಕೊನೆಯ ಸಂದರ್ಭದಲ್ಲಿ ಕಾಯಿದೆ ತಂದರು. ಆದರೂ ಕೂಡ ಎಲ್ಲಾ ಮಾನ್ಯ ವಿರೋಧ ಪಕ್ಷದ ನಾಯಕರಾದಿಯಾಗಿ ನಾವೆಲ್ಲ ಅವರಿಗೆ ಹೇಳಿ ಒತ್ತಡ ತಂದು ಖಂಡಿತವಾಗಿ ಇದನ್ನು ಪಾಸ್ ಆನ್ ಮಾಡೋಣ ಎಂದು ಹೇಳಿದೆವು. ಇದನ್ನು ಯಾವುದೇ ರೀತಿಯಲ್ಲಿ ತಡೆಹಿಡಿಯತಕ್ಕದ್ದು ಆಗಲಿ ಅಥವಾ ಮುಂದಕ್ಕೆ ತೆಗೆದುಕೊಂಡು ಹೋಗುವಂತಹ ಅವಶ್ಯಕತೆ ಇಲ್ಲ. ಬಹಳ ವರ್ಷ ಸಹಕಾರಿ ರಂಗದಲ್ಲಿ ದುಡಿಯುತ್ತಿರತಕ್ಕ ಎಲ್ಲರ ಅಭಿಪ್ರಾಯ ಇದು ಎಂದು ನಾವು ಹೇಳಿದೆವು. ಆ ಸಂದರ್ಭದಲ್ಲಿ ಸರ್ವಾನುಮತದಿಂದ ಒಪ್ಪಿಗೆಯನ್ನು ಕೊಟ್ಟೆವು. ಮಾನ್ಯ ಪಾಟೀಲ್ ಅವರಿಗೆ ಏನಾದರೂ ಒಂದು ನೈತಿಕವಾಗಿರತಕ್ಕ ಸ್ಥೈರ್ಯ, ಧೈರ್ಯ ಇದ್ದರೆ ಅವರು ಆ ಸಂದರ್ಭದಲ್ಲಿ ಮಾಡಿರತಕ್ಕ ಭಾಷಣ, ಅವರು ಮಾಡಿರತಕ್ಕ, ಆಡಿರತಕ್ಕ ಮಾತುಗಳನ್ನು ಕಡತದಲ್ಲಿ ತೆಗೆದು ಅವರು ನೋಡಲಿ ಏನೇನು ಹೇಳಿದ್ದಾರೆಂದು ನೋಡಲಿ. ಯಾರು ಪಟ್ಟಭದ್ರ ಹಿತಾಸಕ್ತಿಗಳ ಕೈಯಲ್ಲಿ, ಕೈ ಚೀಲದಲ್ಲಿ ಸೀಲನ್ನು ಹಿಡಿದುಕೊಂಡು ಯಾವುದೋ ಕಾರ್ಯದರ್ಶಿ ಅದನ್ನು ಹೊತ್ತುಕೊಂಡು ಬಂದು ತಾವು ಅಧಿಕಾರವನ್ನು ಪಡೆಯುತ್ತಿದ್ದರೋ ಅಂತಹದನ್ನು ನಾನು ಪ್ರಥಮ ಬಾರಿಗೆ ತಡೆಹಾಕುತ್ತಿದ್ದೇನೆ, ಇಲ್ಲಿ ಸಹಾಕರಿ ರಂಗದಲ್ಲಿ ಯಾರೆಲ್ಲ ಬೆನಿಫಿಟ್ ಅನ್ನು ಪಡೆದುಕೊಳ್ಳಬೇಕಾಗಿದೆ ಸಾಮಾನ್ಯ ಜನ ಆರ್ಥಿಕವಾಗಿ ದುರ್ಬಲವರ್ಗದವರು ಇದ್ದಾರೆ ಆರ್ಥಿಕವಾಗಿ ಶೋಷಣೆ ಒಳಾಗಗಿ ಇರತಕ್ಕವರು ಇದ್ದಾರೆ. ಸಾಮಾಜಿಕವಾಗಿ ಶೋಷಣೆಗೆ ಒಳಗಾಗಿರತಕ್ಕವರು ಇದ್ದಾರೆ. ಅಂತಹವರ ಸಾಮಾಜಿಕ ಉನ್ನತಿಗೋಸ್ಕರ ಇದನ್ನು ತರುತ್ತಿದ್ದೇನೆ ಎನ್ನುವಂತಹ ಮಾತನ್ನು ಹೇಳಿದರು. ಇಂತಹ ಒಂದು ಕ್ರಾಂತಿಕಾರವಾದಂತಹ ಬದಲಾವಣೆಯನ್ನು ನಾನು ತಂದಿದ್ದೇನೆ ಎಂದು ಏನು ಹೇಳಿದರು. ಬಹುಶಃ ಭಾರೀ ದೊಡ್ಡ ಪ್ರಚಾರವೇ ಸಿಕ್ಕಿತು. ಉತ್ತರ ಕರ್ನಾಟಕ ಬೇರೆ ಬೇರೆ ಭಾಗಗಳಲ್ಲಿನ ಸಹಕಾರಿ ರಂಗದಲ್ಲಿ ಬಹಳ ಚೆನ್ನಾಗಿ ದುಡಿದಿರತಕ್ಕಂಥ ಧುರೀಣರು ಹೇಳಿದರು. ಬಸವಣ್ಣನವರು ಏನೊಂದು ಕ್ರಾಂತಿಕಾರಕವಾದ ಸುಧಾರಣೆಯನ್ನು ಈ ಸಮಾಜಕ್ಕೆ ತಂದರು ಹಾಗೆಯೆ ಸಹಕಾರಿ ರಂಗದಲ್ಲೂ ಇಂತಹ ಒಂದು ಕ್ರಾಂತಿಕಾರಕವಾದ ಬದಲಾವಣೆಯನ್ನು ನಾನು ತಂದಿದ್ದೇನೆ ಎಂದು ಮಾನ್ಯ ಎಸ್.

ಎಸ್. ಪಾಟೀಲರು ಡಂಗೂರ ಸಾರಿಸುತ್ತಾ ಹೋದರು. ಅವರು ಆಡಿರುವ ಮಾತನ್ನು ಗಮನಿಸಿದರೆ ನನಗೆ ಇವೊತ್ತಿನವರೆವಿಗೂ ಕೂಡ ಎಸ್.ಎಸ್.ಪಾಟೀಲರು ಅದನ್ನು ಹೃದಯಪೂರ್ವಕವಾಗಿ ಮಾಡಿದ್ದಾರೆಂದು ನನಗನ್ನಿಸುವುದಿಲ್ಲ. ನಿಮ್ಮ ಸರ್ಕಾರದ ಕಳೆದ ನಾಲ್ಕೂವರೆ ವರ್ಷಗಳ ಕಾರ್ಯ ವೈಖರಿ ನಿಮ್ಮ ದ್ವಂದ್ವ ನಿಮ್ಮ ಜಗಳಗಳಿಂದಾಗಿ ನೀವು ಜನತೆಯ ವಿಶ್ವಾಸ ಕಳೆದುಕೊಂಡಿದ್ದೀರಿ. ಇದರ ಪರಿಣಾಮ ಮೊನ್ನೆ ದಿವಸ ಜರುಗಿದ ಪ್ರಾಥಮಿಕ ಸಹಕಾರಿ ಸಂಘದ ಚುನಾವಣೆಯಲ್ಲಿ ಜನರು ನಿಮಗೆ ದೋಕಾ ಕೊಟ್ಟರು. ಪ್ರಾಥಮಿಕ ಸಹಕಾರ ಸಂಘದಲ್ಲೂ ಕೂಡ ನಿಮ್ಮ ಪಕ್ಷದ ಒಬ್ಬ ಕಾರ್ಯಕರ್ತರು ಕೂಡ ನಿರ್ದೇಶಕರಾಗಿ ಆಯ್ಕೆಯಾಗುವುದಕ್ಕೆ ಸಾಧ್ಯವಾಗಲಿಲ್ಲ. ಇಷ್ಟರಮಟ್ಟಿಗೆ ನೀವು ಕರ್ನಾಟಕ ರಾಜ್ಯದ ಜನರ ವಿಶ್ವಾಸ ಕಳೆದುಕೊಂಡಿದ್ದೀರಿ. ಇದರ ಬಗ್ಗೆ ನೀವು ಆತ್ಮ ವಿಮರ್ಶೆ ಮಾಡಿಕೊಳ್ಳುವ ಬದಲಾಗಿ ಏನು ಮಾಡಿದಿರೆಂದರೆ ಇಂತಹ ಒಂದು ಮಹತ್ತರವಾದ ತಿದ್ದುಪಡಿಯನ್ನು ಸುಗ್ರೀವಾಜ್ಞೆ ಮೂಲಕ ಬದಲಾಯಿಸುವುದಕ್ಕೆ ಈ ಶಾಸನ ಸಭೆಗೆ ತಂದಿದ್ದೀರಿ. ಅದನ್ನು ನೀವು ಒಂದೆ ವಾಕ್ಯದಲ್ಲಿ ಬದಲಾಯಿಸಿದ್ದೀರಿ. ಚುನಾಯಿತ ಪ್ರತಿನಿಧಿಗಳು ಮಾತ್ರ ಆಯ್ಕೆ ಮಾಡಬಹುದು, ಮಾತದಾನದ ಹಕ್ಕು ಕೊಡಬಹುದೆಂದು ಹೇಳಿ ಆ ಹಕ್ಕನ್ನೆ ಮೊಟಕುಗೊಳಿಸಿ ಅದನ್ನು ನಾಮ ನಿರ್ದೇಶನ ಹೊಂದಿದ ನಿರ್ದೇಶಕರಿಗೂ ಕೂಡ ಕೊಡಲಾಗಿದೆ. ಮೊನ್ನೆ ದಿವಸ ಶಿವಮೊಗ್ಗ ಡೈರಿಗೆ ನಡೆದ ಚುನಾವಣೆಯಲ್ಲಿ ನಿಮ್ಮ ಪಕ್ಷದ ಎಷ್ಟು ಜನರು ಗೆದ್ದಿದ್ದಾರೆ ? ರಾತ್ರೋರಾತ್ರಿ ನೀವು ನಾಮಿನೇಶನ್ ಕಳುಹಿಸಿ ಇಂತಹವರಿಗೆ ವೋಟ್ ಕೂಡ ಬೇಕೆಂದು ಅಧಿಕಾರಿಗಳಿಗೆ, ಸಹಕಾರ ಸಂಘದ ಡೆಪ್ಯೂಟಿ ರಿಜಿಸ್ಟಾರ್, ಆನಿಮಲ್ ಹಸ್ಬೆಂಡರಿಯ ಡೆಪ್ಯೂಟಿ ಡೈರೆಕ್ಟರ್ ಅವರಿಗೆ ಸೂಚನೆ ಕೊಟ್ಟಿದ್ದೀರಿ. ನಿಮಗೇನಾದರೂ ನೈತಿಕ ಮೌಲ್ಯಗಳಿವೆಯೇ ? ಪ್ರಜಾಪ್ರಭುತ್ವದಲ್ಲಿ ದೊಡ್ಡ ದೊಡ್ಡ ಭಾಷಣಗಳನ್ನು ಮಾಡುವ ನಿಮಗೆ ಏನಾಗಿದೆ ? ಅತ್ಯಂತ ಅಲ್ಪಸಂಖ್ಯಾತರಾಗಿರುವ ನಿಮ್ಮ ಒಬ್ಬ ನಿರ್ದೇಶಕರು ಅಧ್ಯಕ್ಷರಾಗಬೇಕು, ಹೆಚ್ಚು ಸಂಖ್ಯೆಯಲ್ಲಿ ಆಯ್ಕೆಯಾದ ನಾವುಗಳು ಅವರೆದುರಿಗೆ ಕುಳಿತುಕೊಳ್ಳಬೇಕು! ನಿಮ್ಮದು ಯಾವ ಪ್ರಜಾಪ್ರಭುತ್ವ ಮೌಲ್ಯ ? ಇವೊತ್ತು ಸಹಕಾರಿ ಸಕ್ಕರೆ ಕಾರ್ಖಾನೆ ಬೇರೆಯಾಯಿತು ತಿದ್ದುಪಡಿಗೆ ಸುಗ್ರೀವಾಜ್ಞೆ ತರುವುದರ ಮೂಲಕ ಇಡೀ ಊರುಗಳಲ್ಲಿ ಶಾಂತಿ ಕದಡಿದ್ದೀರಿ ಎಂಬುದನ್ನು ನೀವು ಮರೆಯಬಾರದು. ಇವೊತ್ತು ನಾವು ಅಧಿಕಾರದಲ್ಲಿ ಎಷ್ಟು ದಿವಸ ಇರುತ್ತೇವೆ ಎಂಬುದು ಮುಖ್ಯವಲ್ಲ. ಇವೊತ್ತಿಗೂ ಕೂಡ ಅಧಿಕಾರದಿಂದ ಇಳಿದು ಹೋಗಿರುವ, ರಾಜೀನಾಮೆ ಕೊಟ್ಟಿರುವ ಅನೇಕರ ಹೆಸರುಗಳನ್ನು ಈ ಸದನದಲ್ಲಿ ನಾವು ಆಗಿಂದಾಗ್ಗೆ ಉಲ್ಲೇಖಿಸುತ್ತಿರುತ್ತೇವೆ. ಏಕೆಂದರೆ ಅವರುಗಳು ನಮ್ಮ ಮನಸ್ಸಿನಲ್ಲಿ ಖಾಯಂ ಆಗಿ ತಮ್ಮ ಬಿಂಬವನ್ನು ಅಚ್ಚೊತ್ತಿದ್ದಾರೆ. ಅಂತಹ ಕೆಲಸವನ್ನು ಇವೊತ್ತು ಎಸ್.ಎಸ್. ಪಾಟೀಲರು ಮಾಡಬೇಕಾಗುತ್ತದೆ. ಅವರ ಮೇಲೆ ಸರ್ಕಾರದ ಪಕ್ಷದ ಒತ್ತಡವಿದ್ದರೆ, ತತ್ವದ ಬದ್ಧತೆ ಏನಾದರೂ ಇದ್ದರೆ, ಸಹಕಾರಿ ರಂಗ ಉನ್ನತಿಗೆ ಬರಬೇಕೆಂಬ ಕನಸನ್ನು ಕಟ್ಟಿ ಹೃದಯ ಪೂರ್ವಕವಾಗಿ ಅವೊತ್ತೆ ಒಂದು ಅಮೆಂಡ್‌ಮೆಂಟ್‌ಅನ್ನು ತಂದಿದ್ದರೆ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಕೆಳಗಿಳಿದು ಹೋಗಬೇಕಾಗುತ್ತದೆ. ಇಂತಹ ಒಬ್ಬ ವ್ಯಕ್ತಿ ಮೌಲ್ಯಕ್ಕೋಸ್ಕರ ತತ್ವಕ್ಕೋಸ್ಕರ ರಾಜೀನಾಮೆ ಕೊಟ್ಟಿದ್ದಾರೆಂದು ಅವರ ಹೆಸರು ಖಂಡಿತವಾಗಿಯೂ ಸದಾಕಾಲ ಅಜರಾಮರವಾಗಿ ನೆನಪಿನಲ್ಲಿರುತ್ತದೆ. ನೀವು ಈ ಕೆಲಸ ಮಾಡಬಾರದಾಗಿತ್ತು. ನೀವು ಅತ್ಯಂತ ನಾಚಿಕೆಗೇಡಿನ ಕೆಲಸ ಮಾಡಿದ್ದೀರಿ,. ಈ ಸದನಕ್ಕೆ ದೊಡ್ಡ ಅವಮಾನ ಮಾಡಿದ್ದೀರಿ. ಇದನ್ನು ತಾವು ದಯವಿಟ್ಟು ವಾಪಸ್ಸು ಪಡೆಯಬೇಕು. ಇವೊತ್ತು ಮಾನ್ಯ ಸಹಕಾರ ಸಚಿವರು ಮತ್ತು

ನಾಣಯ್ಯನಂತಹವರು ಸಹಕಾರಿ ರಂಗದಿಂದಲೇ ಬಂದಂಥವರು. ವಿಧಾನ ಪರಿಷತ್ತಿನ ಮೂಲಕ, ಇಲ್ಲವೇ ಎಲ್ಲೆಲ್ಲಿ ನೇರವಾದ ಚುನಾವಣೆಗಳಲ್ಲಿ ಗೆಲ್ಲುವುದಕ್ಕೆ ಸಾಧ್ಯವಾಗಲಿಲ್ಲವೋ, ಅಂತಹ ಕಡೆಗಳಿಂದ ಇಲ್ಲಿಗೆ ಬಂದಿರುವ ಅನೇಕರಿದ್ದೀರಿ. ಹಿರಿಯರಾಗಿರುವ ಬಗ್ಗೆ ನಾನು ಬೇರೇನೂ ಹೇಳುವುದಿಲ್ಲ.

ಶ್ರೀ ಎಂ.ಸಿ.ನಾಣಯ್ಯ : ಬೇರಾವುದೋ ಕಡೆಯಿಂದ ಬಂದಿದದ್ದಾರೆಂದು ತಾವು ಹೇಳಿದ್ದಿರಲ್ಲಾ ನೇರವಾದ ಚುನಾವಣೆ ಯಾವುದೆಂದು ಹೇಳಿ ? ನೇರವಾದ ಚುನಾವಣೆಯೆಂದು ಯಾವುದಕ್ಕೆ ಹೇಳಿದಿರಿ ? ನಾಣಯ್ಯ ನೇರವಾದ ಚುನಾವಣೆಗೆ ನಿಂತಿದ್ದರು, ನೇರವಾದ ಚುನಾವಣೆಯಲ್ಲಿ ಗೆದ್ದಿದ್ದಾರೆ ಮತ್ತು ನೇರವಾದ ಚುನಾವಣೆ ಯಲ್ಲೂ ಸೋತಿದ್ದಾರೆ. ನಿಮ್ಮ ಮಿತ್ರರು ಹೇಗೆ ಮೇಲ್ಮನೆಯಲ್ಲಿ ಎಂ.ಎಲ್.ಸಿಗಳಾಗಿದ್ದಾರೋ ಅವರಂತೆಯೇ ನಾನೂ ಎಂ.ಎಲ್.ಸಿಯಾಗಿದ್ದೇನೆ. ನೇರವಾದ ಚುನಾವಣೆ ಎನ್ನುವುದರ ಅರ್ಥವೇನು ?

ಶ್ರೀ ಅರಗ ಜ್ಞಾನೇಂದ್ರ : ಸಹಕಾರಿ ರಂಗದ ಚುನಾವಣೆಗಳಲ್ಲಿ ಭಾರೀ ಕೆಲಸ ಮಾಡಿರತಕ್ಕಂತಹ ಹಿರಿಯರು ನೀವಾಗಿದ್ದೀರಿ.

ಶ್ರೀ ಎಂ.ಸಿ.ನಾಣಯ್ಯ : ಇವರಿಗೆ ತತ್ವಗಳು ಬೇಕಿಲ್ಲ. ಗುಜರಾತ್‌ನಲ್ಲಿ ಇವರ ತತ್ವಗಳು ಏನಾಯಿತು? ಅಲ್ಲಿನ 'ಅಮುಲ್' ನಲ್ಲಿ ಕುರಿಯನ್‌ರವರು ಅಧ್ಯಕ್ಷರಾಗಿದ್ದರು.

ಗುಜರಾತ್‌ನಲ್ಲಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತಹ ಕುರಿಯನ್ ಅವರನ್ನು ಕಿತ್ತು ಹಾಕುವುದಕ್ಕೆ ಪ್ರಯತ್ನ ಮಾಡಿದರು. ನಾಮಿನೇಷನ್ ಮಾಡಿ ಇರುವವರನ್ನೆಲ್ಲಾ ಕಿತ್ತು ಹಾಕಿದರು. ಇದಕ್ಕೆ ಕಾರಣ ಹೇಳುತ್ತೇನೆ. ಸರ್ಕಾರದವರಾದ ನಮಗೆ ಮೂರು ಜನರನ್ನು ನಾಮಕರಣ ಮಾಡುವುದಕ್ಕೆ ಈ ಸದನವೇ ಒಪ್ಪಿಗೆ ಕೊಟ್ಟಿದೆ. ನಾಮಕರಣ ಮಾಡಿರುವ ಸದಸ್ಯರು ಸಮಿತಿಯ ಆಡಳಿತ ಮಂಡಳಿಯ ಸದಸ್ಯರಾಗಿರುತ್ತಾರೆ. ಸದಸ್ಯರಾದ ಬಳಿಕ ಅವರಿಗೆ ಮತದಾನದ ಹಕ್ಕು ನೀಡಲು ತೀರ್ಮಾನ ಮಾಡಿದ್ದೇವೆ. ಇದರಲ್ಲಿ ತಪ್ಪೇನೂ ಇಲ್ಲ. ಕಾಂಗ್ರೆಸ್‌ನವರೂ ಸಹ ಮಾಡಿದ್ದಾರೆ . 6-7 ಜನರನ್ನು ನಾಮಕರಣ ಮಾಡುವುದಕ್ಕೆ ಅಧಿಕಾರವಿದ್ದರೂ ಸಹ ಈ ಸಂದರ್ಭದಲ್ಲಿ ಮೂರು ಜನರನ್ನಷ್ಟೇ ನಾಮಕರಣ ಮಾಡುವುದಕ್ಕೆ ಅಧಿಕಾರ ಕೊಟ್ಟಿರುವುದರಿಂದ ತಪ್ಪೇನು ?

ಶ್ರೀ ಅರಗ ಜ್ಞಾನೇಂದ್ರ : ರಾಜ್ಯಪಾಲರಿಂದ ವಾಪಸ್ಸು ಬರುವುದರೊಳಗೆ ನೀವು ಸುಗ್ರೀವಾಜ್ಞೆ ಮಾಡಿರುತ್ತೀರಿ. ಈ ರೀತಿ ಮಾಡುವುದಕ್ಕೆ ನಿಮಗೆ ಯಾವ ಹಕ್ಕಿದೆ? ನೀವು ಸಹಕಾರಿ ರಂಗದಲ್ಲಿ ದುಡಿದಿರತಕ್ಕಂಥವರು.

(ಗೊಂದಲ)

ಶ್ರೀ ಎಂ.ಸಿ.ನಾಣಯ್ಯ : ಸಹಕಾರಿ ಸಂಘದ ಚುನಾವಣೆಯಲ್ಲಿ ನೀವು ಯಾವ ರೀತಿ ಮಾಡಿತ್ತಿದ್ದೀರೆಂದು ನಮುಗೂ ಗೊತ್ತಿದೆ. ನಮಗೇನೂ ಅದರ ಬಗ್ಗೆ ಹೇಳಬೇಕಾಗಿಲ್ಲ. ಇತಿಹಾಸ ಹೇಳಬೇಕಾದರೆ ಮೊದಲು ನಿಮ್ಮ ಇತಿಹಾಸ ಓದಿದ ಬಳಿಕ ನಮ್ಮ ಇತಿಹಾಸ ಹೇಳಿ. ಇವೊತ್ತು ಏನಾಗುತ್ತಿದೆಯೆಂದು ನಾವೂ ನೋಡಿದ್ದೇವೆ, ನೀವೂ ನೋಡಿದ್ದೀರಿ.

ಶ್ರೀ **ಅರಗ ಜ್ಞಾನೇಂದ್ರ :** ಆವೊತ್ತು ಶಾಸನ ಮಾಡುವಂಥ ಸಂದರ್ಭದಲ್ಲಿ ನೀವು ಇದನ್ನು ಉಲ್ಲೇಖ ಮಾಡುವುದರ ಮೂಲಕ ಸಮರ್ಥಿಸಿಕೊಳ್ಳಬೇಕಾಗಿತ್ತು. ಆದರೆ , ಆವೊತ್ತು ನೀವು ಆ ಮಾತನ್ನು ಹೇಳಲಿಲ್ಲ.

ಶ್ರೀ ಎಂ.ಸಿ. ನಾಣಯ್ಯ : ಉಲ್ಲೇಖವಾಗಿದೆ. ಇಲ್ಲವೆಂದು ಹೇಳಬೇಡಿ.

ಶ್ರೀ ಆರಗ ಜ್ಞಾನೇಂದ್ರ : ನಿಮ್ಮ ಪಕ್ಷ ಸಹಕಾರ ಸಂಘದ ಚುನಾವಣೆಗಳಲ್ಲಿ ಸೋಲುತ್ತಾ ಬಂದಾಗ ನಿಮ್ಮ ಕಣ್ಣು ತೆರೆದಿರುತ್ತದೆ. ಐದು ವರ್ಷಗಳ ಕಾಲ ನಿಮ್ಮ ಕಾರ್ಯಕರ್ತರು ಅಲ್ಲಿಯೇ ಕೂರಲಿ, ಅಧ್ಯಕ್ಷ ಸ್ಥಾನ ನಿರ್ವಹಿಸಲಿ, ಅನಂತರ ಚುನಾವಣೆಯಲ್ಲಿ ಮತ್ತೆ ಗೆದ್ದು ಬರಬೇಕೆಂದು ಯೋಚನೆ ಮಾಡಿದ್ದೀರೋ ? ಬಹುಶಃ ಈ ಒಂದು ಸುಗ್ರಿವಾಜ್ಞೆ ಏನಿದೆ, ಇದರ ಅತ್ಯಂತ ಕೆಟ್ಟ ಪರಿಣಾಮ ನಿಮ್ಮ ಮೇಲೆ ಬೀರುತ್ತದೆ. ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರಾದ ನಿಮ್ಮಂಥ ಹಿರಿಯರು ಎಸ್.ಎಸ್.ಪಾಟೀಲರ್ ರವರಿಗೆ ಸರಿಯಾಗಿ ಹೇಳಬೇಕಾಗಿತ್ತು. ಬದಲಿಗೆ ಅವರನ್ನು ತಪ್ಪು ದಾರಿಗಿಳಿಸುವಂಥ ಪ್ರಯತ್ನ ಮಾಡಬಾರದಾಗಿತ್ತು. ಏಕೆಂದರೆ, ಇಲ್ಲಿರುವವರೆಲ್ಲರಿಗೂ ನಾನು ಹೇಳುವುದಕ್ಕಾಗುವುದಿಲ್ಲ. ನಾಣಯ್ಯನವರು ಆಪೆಕ್ಸ್ ಬ್ಯಾಂಕಿನ ಅಧ್ಯಕ್ಷರಾಗಿದ್ದಂಥವರು, ಇವೊತ್ತಿನ ಸಹಕಾರಿ ರಂಗದ ಅತ್ಯಂತ ಹಿರಿಯ ಧುರೀಣರಲ್ಲಿ ಅವರೂ ಒಬ್ಬರಾಗಿದ್ದಾರೆಂದರೆ ಅದರಲ್ಲಿ ವಿವಾದವಿಲ್ಲ. ಮಾನ್ಯ ಬಿ.ಎಸ್.ವಿಶ್ವನಾಥನ್ ಅಂತಹವರನ್ನು ನೀವು ಕಿತ್ತು ಹಾಕುವಂಥ ಕೆಲಸ ಮಾಡಿದಾಗ ಒಂದು ಘೋರ ಪಾಪದ ಫಲವನ್ನು ನೀವು ಉಣ್ಣಬೇಕಾಗುತ್ತದೆಂದು ನಾವು ಅವೊತ್ತೆ ಹೇಳಿದೆವು. ಇವೊತ್ತು ಮತ್ತೊಂದು ದೊಡ್ಡ ಕೊಡಲಿ ಪ್ರಹಾರವನ್ನು ನೀವು ಮಾಡಿದ್ದೀರಿ. ಇವೊತ್ತಿನ ಸಹಕಾರಿ ರಂಗದಲ್ಲಿ ದೊಡ್ಡ ರಾಜಕಾರಣ ಮಾಡುವುದಕ್ಕೆ ನೀವು ಕೈ ಹಾಕುತ್ತಿದ್ದೀರಿ. ಅತ್ಯಂತ ನಿಸ್ಪೃಹತೆಯಿಂದ ಕಾರ್ಯ ನಿರ್ವಹಿಸುತ್ತಿದ್ದ ರಂಗವನ್ನು ಕೆಡಿಸುವ ಪ್ರಯತ್ನ ನೀವೇನು ಮಾಡಿದ್ದೀರಿ, ಇದರ ಪಾಪದ ಫಲ ನೀವು ಉಣ್ಣುತ್ತೀರಿ. ಈಗಲಾದರೂ ಕೂಡ ಇದನ್ನು ತಿದ್ದಿಕೊಳ್ಳುವಂಥ ಪ್ರಯತ್ನ ನಿಮ್ಮ ಕಡೆಯಿಂದ ಆಗಲೆಂದು ಹೇಳುತ್ತಿದ್ದೇನೆ ಮತ್ತು ಸಹಕಾರ ಸಚಿವರಾದ ಎಸ್.ಎಸ್. ಪಾಟಿಲ್‌ರವರೂ ಕೂಡ ಈ ಬಿಲ್ ಅನ್ನು ವಾಪಸ್ಸು ಪಡೆದುಕೊಳ್ಳಬೇಕು ಇಲ್ಲವೇ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೋಗಬೇಕೆಂದು ಅವರ ಮೇಲೆ ಈ ಸಂದರ್ಭದಲ್ಲಿ ಒತ್ತಾಯ ಹೇರುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ಸದನವನ್ನು ಭೋಜನ ವಿರಾಮಕ್ಕಾಗಿ ಮುಂದೂಡುತ್ತಿದ್ದೇನೆ. ಸದನವು ಪುನಃ ಮಧ್ಯಾಹ್ನ ಮೂರು ಗಂಟೆಗೆ ಸಭೆ ಸೇರುವುದು.

(ಸದನವು ಮಧ್ಯಾಹ್ನ 1.47 ಗಂಟೆಗೆ ಮುಂದೂಡಲ್ಪಟ್ಟು ಮತ್ತೆ ಮೂರು ಘಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು 3 ಗಂಟೆಗೆ 19 ನಿಮಿಷಕ್ಕೆ ಸಮಾವೇಶಗೊಂಡಿತು)

(ಉಪಾಧ್ಯಕ್ಷರು ಶ್ರೀ ಚಂದ್ರಶೇಖರ ರೆಡ್ಡಿ ದೇಶಮುಖ್ ಮದನಾ) ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು

ಶ್ರೀ ಮಲ್ಲಿಕಾರ್ಜುನ ಖರ್ಗೆ : ಯಾರಿಗೆ ಮಾತನಾಡಬೇಕು; ಸೀರಿಯಸ್‌ನೆಸ್ ಇಲ್ಲ, ಕಾಲಹರಣ ಮಾಡುತ್ತಾರೆ ಎಂದು ಹೇಳುವುದು ಆದರೆ ಅವರೇ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ಮೊದಲನೇ ದಿವಸ ಇಷ್ಟೊಂದು ಪ್ರೇತ ಕಳೆ ಬಂದರೆ ಹೇಗೆ ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಹೇಳಿದರೂ ಕೇಳುವುದಿಲ್ಲ, ಅವರಿಗೆ ನಾಚಿಕೆಯೂ ಇಲ್ಲ. ಈ 52 ಜನ ಮಂತ್ರಿಗಳು ಏಕೆ ಬೇಕು?

ಉಪಾಧ್ಯಾಕ್ಷರು : ಕೆಳಮನೆಯಲ್ಲಿ ಉತ್ತರ ಈಗ ಮುಗಿದಿದೆ, ಬರುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಿಮಗೂ ಗೌರವ ಕೊಡುವುದಿಲ್ಲ, ಸದನಕ್ಕೂ ಗೌರವ ಕೊಡುವುದಿಲ್ಲ.

Is this the way? They are treating this House so lightly

ಇದೇನು ಪಂಚಾಯತ್ ಎಂದು ತಿಳಿದುಕೊಂಡಿದ್ದಾರೋ ಅಥವಾ ಮುನ್ಸಿಪಾಲಿಟಿ ಎಂದು ತಿಳಿದುಕೊಂಡಿದ್ದಾರೋ ?

(ಗೊಂದಲ)

ಶ್ರೀ ಕೆ. ವಸಂತ ಬಂಗೇರ : ಮಾನ್ಯ ಉಪಾಧ್ಯಕ್ಷರೇ , ಕೌನ್ಸಿಲ್‌ನಲ್ಲಿ ಅವರು ಉತ್ತರ ಕೊಡುತ್ತಿದ್ದುದ್ದು ಮುಗಿದಿದೆ. ಈಗ ಊಟ ಮಾಡುತ್ತಿದ್ದಾರೆ. ಬರುತ್ತಾರೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರು ಅಲ್ಲಿ ಇರಲಿಲ್ಲವೆಂದರೆ ನಿಮ್ಮ ಮೇಲೆ ಪ್ರಿವಿಲೇಜ್ ಹಾಕಬೇಕು.

ಶ್ರೀ ಕೆ.ವಸಂತ ಬಂಗೇರ: ಆಯಿತು.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದು ಬರಿಯಲ್ ಗ್ರೌಂಡ್ ತರಹ ಆಗಿದೆ.

ಶ್ರೀ ಕೆ.ವಸಂತ ಬಂಗೇರ : ಮಾನ್ಯ ಮಂತ್ರಿಗಳು ಅಲ್ಲೆ ಉತ್ತರ ಮುಗಿಸಿ ಈಗ ಊಟ ಮಾಡುತ್ತಿದ್ದಾರೆ. ಬರುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಬರೀ ಊಟ ಮುಗಿಸುತ್ತಾರೆ, ಮಲಗುತ್ತಾರೆ...

ಶ್ರೀ ವಾಟಾಳ್ ನಾಗರಾಜ್ : ಸಭೆಯಲ್ಲಿ ಏಕೆ ಮಂತ್ರಿಗಳು ಬರಲಿಲ್ಲವೆಂದರೆ ಊಟ ಮಾಡುತ್ತಾರೆ ಎಂದರೆ ಇದೇನು ಅಯ್ಯಪ್ಪನ ಚಾವಡಿ ಕೆಟ್ಟುಹೋಯಿತಾ ? ಯಾವಾಗ ಬೇಕಾದರೂ ಊಟ ಮಾಡಿಕೊಂಡು ಬರ ಬಹುದು, ಯಾವಾಗ ಬೇಕಾದರೂ ಮಲಗಬಹುದು, ಯಾವಾಗ ಬೇಕಾದರೂ ಎದ್ದು ಬರಬಹುದು. ಈ ಸದನಕ್ಕೆ ಗೌರವ ಬೇಡವೇ ? ಇದು ಗೌರವದ ಪ್ರಶ್ನೆ . ಇದು ಮೊದಲನೆ ದಿವಸ ಸಭೆ ಸೇರುತ್ತಿರುವುದು. ಇಲ್ಲಿ 10 ಜನ ಮಂತ್ರಿಗಳು 5 ಜನ ಶಾಸಕರು, ಇದು ಗೌರವ ತರುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು : ಎಲ್ಲಾ ಕುಳಿತುಕೊಳ್ಳಿ, ಅವರು ಏನು ಹೇಳುತ್ತಾರೆ ಕೇಳಿ.

ಶ್ರೀ ವಿ. ಮುನಿಯಪ್ಪ: ಈಗ ಸದನವನ್ನು ಅಡ್ಜರ್ನ್ ಮಾಡಿ.

ಶ್ರೀ ಜಿ.ವಿ. ಶ್ರೀ ರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೇ ಸಹಕಾರ ಸಂಘದ ಆರ್ಡಿನೆನ್ಸ್ ಬಗ್ಗೆ ಇಲ್ಲಿ ಚರ್ಚೆಯಾಗಿದೆ. ಮಾನ್ಯ ಸಹಕಾರ ಸಚಿವರೆ ಉತ್ತರ ಕೊಡಬೇಕು ಎಂದು ಹೇಳಿದ್ದೇವೆ. ಮಾನ್ಯ ನಾಣಯ್ಯನವರು ಉತ್ತರ ಕೊಟ್ಟರೆ ನಾವು ಕೇಳುವುದಕ್ಕೆ ತಯಾರಿಲ್ಲ.

ಶ್ರೀ ಎಂ.ಸಿ.ನಾಣಯ್ಯ : ಮಾನ್ಯ ಮಂತ್ರಿಗಳೇ ಉತ್ತರ ಹೇಳುತ್ತಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ಈಗ ಸಭೆಯನ್ನು ಅರ್ಧ ಗಂಟೆ ಮುಂದೂಡಿ. ಏನೂ ತೊಂದರೆಯಿಲ್ಲ. ಅವರು ಊಟ ಮಾಡಿ ಮಲಗಿಕೊಂಡು ಯಾವಾಗ ಬೇಕಾದರೂ ಇದ್ದು ಬರಲಿ. ಇದು ಸದನ ಎಂದು ಅವರು ತಿಳಿದುಕೊಂಡಿಲ್ಲ. ಇಷ್ಟೊಂದು ಲಘುವಾಗಿ ಈ ಸದನವನ್ನು

ತೆಗೆದುಕೊಂಡಿದ್ದಾರೆ. ಇದನ್ನು ವಿರೋಧ ಮಾಡಿ ನೀವೆಲ್ಲಾ ಮಂತ್ರಿಗಳು ರಾಜೀನಾಮೆ ಕೊಡಬೇಕಾಗಿತ್ತು. ಮಾನ್ಯ ಸಂಸದೀಯ ಸಚಿವರೇ, ಈ ಪರಿಸ್ಥಿತಿ ಸರಿಯಿಲ್ಲ. ನಾನು ನಿಮ್ಮ ರಾಜೀನಾಮೆ ಕೇಳುತ್ತಾ ಇಲ್ಲ. ಆದರೆ ನೀವು ಕೊಟ್ಟಿದ್ದರೆ ಬಹಳ ಎತ್ತರಕ್ಕೆ ಹೋಗುತ್ತಿದ್ದಿರಿ.

ಶ್ರೀ ಜಿ.ವಿ. ಶ್ರೀರಾಮ್ ರೆಡ್ಡಿ : ರಾಜೀನಾಮೆ ಕೊಡುತ್ತೇವೆ ಎಂದರೆ ಮಾನ್ಯ ನಾಣಯ್ಯನವರೇ ಬೇಡ ಎಂದು ಹೇಳುತ್ತಾರೆ. ಆದರೆ ಇವರು ಕೇಳುವುದು ನಾಣಯ್ಯನವರು ರಾಜೀನಾಮೆ ಕೊಡಲಿ ಎಂದು. ಈ ವಿಚಾರಕ್ಕೆ ಮಾನ್ಯ ಸಹಕಾರ ಸಚಿವರೇ ಉತ್ತರ ಕೊಡಬೇಕು.

ಶ್ರೀ ಎಂ.ಸಿ. ನಾಣಯ್ಯ : ಅವರೇ ಬರುತ್ತಾರೆ, ಅವರೇ ಉತ್ತರ ಹೇಳುತ್ತಾರೆ. ಅದರ ಮಧ್ಯದಲ್ಲೇ ಮಾನ್ಯ ವಾಟಾಳ್ ನಾಗರಾಜ್‌ರವರೂ ಕೂಡ ಮಾನ್ಯ ಸಭಾಧ್ಯಕ್ಷರ ಜೊತೆಯಲ್ಲಿ ಬೆಳಿಗ್ಗೆ ನಡೆದಿರತಕ್ಕಂಥ ವಿಚಾರದ ಬಗ್ಗೆ ನಾನು ಐದು ನಿಮಿಷ ಮಾತನಾಡುತ್ತೇನೆ ಎಂದು ಹೇಳಿದಾಗ ನಾನು ಅಲ್ಲೇ ಇದ್ದೆ. ಅವರು ಬಹುಶಃ ಅದರ ವಿಚಾರ ಮಾತನಾಡುತ್ತಾರೆ. ಅದು ಆದ ಮೇಲೆ ಇದು ಬರುತ್ತದೆ ಎಂದು ತಿಳಿದುಕೊಂಡಿದ್ದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ನೀವು ನಿಮ್ಮ ಅನುಕೂಲಕ್ಕೆ ಊಟ ಮಾಡಿ ಬಂದಿಲ್ಲ , ಮಲಗಿದ್ದಾರೆ, ಅವರಿಗೆ ಜ್ವರ ಬಂದಿದೆ ಎಂದು ಹೇಳುವುದಕ್ಕಲ್ಲ ಈ ಸದನ ಇರುವುದು. ಈ ಸದನದಲ್ಲಿ ನಾವು ನೋಟೀಸ್ ಕೊಟ್ಟಿದ್ದು ಮುಂಜಾನೆ. ಇಲ್ಲಿ ಚರ್ಚೆ ನಡೆದಿದೆ. ಈಗಾಗಲೇ ಸುಮಾರು ಐದು ಗಂಟೆ ಚರ್ಚೆ ನಡೆದಿದೆ. ಐದು ಗಂಟೆ ಆದರೂ ಕೂಡ ಮಾನ್ಯ ಮಂತ್ರಿಗಳಿಗೆ ಇಲ್ಲಿ ಬಂದು ಉತ್ತರವನ್ನು ಹೇಳತಕ್ಕಂಥ ಸೌಜನ್ಯ ಇಲ್ಲವೆಂದರೆ ಹೇಗೆ? ಅವರು ಈ ಸದನವನ್ನು ಲಘುವಾಗಿ ತೆಗೆದುಕೊಳ್ಳುತ್ತಾರೆ, ಇಲ್ಲವೆಂದರೆ ಸ್ಪೀಕರ್ ಆಗಲಿ, ಡೆಪ್ಯೂಟಿ ಸ್ಪೀಕರ್ ಆಗಲಿ ಏನು ಮಾಡುತ್ತಾರೆ ಎನ್ನುವ ಭಾವನೆ ಅವರಿಗೆ ಇರಬಹುದು. ಒಂದು ವೇಳೆ ಈ ಸದನಕ್ಕೆ ಮತ್ತು ಅಧ್ಯಕ್ಷ ಪೀಠಕ್ಕೆ ಅವರು ಗೌರವ ಕೊಡಬೇಕೆಂದರೆ ಸಮಯದ ಪ್ರಕಾರ ಅವರು ಇಲ್ಲಿಗೆ ಬರಬೇಕು. ಇಲ್ಲ ಪರ್ಮಿಷನ್ ಕೇಳಬೇಕು. ಇಲ್ಲವೆಂದರೆ ಅಂತಹ ಅನಾಹುತವೇನಾದರೂ ಆಗಿದ್ದರೆ ಈ ರೀತಿಯಾಗಿದೆ ಎಂದು ಪತ್ರವನ್ನಾದರೂ ಬರೆಯಬೇಕು.

ಉಪಾಧ್ಯಕ್ಷರು : ಈಗ ಜಸ್ಟ್ ಅವರು ಕೌನ್ಸಿಲ್‌ನಲ್ಲಿ ಉತ್ತರ ಕೊಟ್ಟು ಈಗ ಫ್ರೀ ಆಗಿದ್ದಾರೆ.

ಶ್ರೀ ಜಿ.ವಿ. ಶ್ರೀರಾಂರೆಡ್ಡಿ : ಮಾನ್ಯ ಸಹಕಾರ ಸಚಿವರು ಬಂದೇ ಉತ್ತರ ಕೊಡಲಿ. ನಮ್ಮದೇನೂ ತೊಂದರೆ ಇಲ್ಲ. ಮಾನ್ಯ ನಾಣಯ್ಯವನರೇ, ಅವರನ್ನು ಕರೆದುಕೊಂಡು ಬರಲಿ. ಆದರೆ ಈ ವಿಚಾರಕ್ಕೆ ಸಹಕಾರ ಸಚಿವರೇ ಉತ್ತರ ಕೊಡಬೇಕು.

ಶ್ರೀ ಎಂ.ಸಿ. ನಾಣಯ್ಯ:- ಉತ್ತರ ಬೇಕೇ ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಮಗೆ ಉತ್ತರ ಬೇಕು. ಆದರೆ ಅದು ಮಾನ್ಯ ಸಹಕಾರ ಸಚಿವರಿಂದ ಉತ್ತರ ಬೇಕು. ಈಗ ಅವರು ಬರಲಿ. ಹೋದಸಲ ಅವರ ಉತ್ತರ ಕೇಳಿ ಕೇಳಿ ಪಾಸಾಯಿತು.

(ಗೊಂದಲ)

ಶ್ರೀ ಜಿ. ವಿ. ಶ್ರೀರಾಂರೆಡ್ಡಿ : ಮಾನ್ಯ ನಾಣಯ್ಯನವರ ಶಕ್ತಿ ಸಾಮರ್ಥ್ಯ ನಮಗೆ ಗೊತ್ತಿದೆ. ಅವರು ಕಾರ್ಗಿಲ್‌ನಿಂದ ಹಿಡಿದು ನೂಕ್ಲಿಯರ್ ಎಲ್ಲಾ ವಿಷಯಗಳ ಬಗ್ಗೆ ಒಂದೇ ಕ್ಷಣದಲ್ಲೆ ಉತ್ತರ ಕೊಡುತ್ತಾರೆ. ಆದರೆ ಇದಕ್ಕೆ ಮಾತ್ರ ಸಂಬಂದಪಟ್ಟ ಸಹಕಾರ ಸಚಿವರೇ ಉತ್ತರ ಕೊಡಬೇಕು.

ಶ್ರೀ ಎಂ.ಸಿ.ನಾಣಯ್ಯ : ಅವರೇ ಬರುತ್ತಿದ್ದಾರೆ. ಉತ್ತರ ಕೊಡುತ್ತಾರೆ. ಅವರು ಬರುವತನಕ ಅಫೀಷಿಯಲ್ ಸಬ್ಜೆಕ್ಟ್ ಏನಾದರೂ ಇದ್ದರೆ ಮಾತನಾಡಲಿ

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆ ರೀತಿ ಮಾಡಿದರೆ ಇರುವ ಮಹತ್ವವೇ ಹೋಗುತ್ತದೆ. ಏಕೆಂದರೆ ನಾವು ಅವರು ಬರುತ್ತಾರೆ ಎಂದು ಅವರಿಗೆ ಕಾಯುವ ಹಾಗೆ ಇಲ್ಲ. ತಾವು ಕಾಯುತ್ತೀರಿ ಎಂದರೆ ಇದು ನಿಜವಾಗಲೂ ಈ ಸದನಕ್ಕೆ ಅವಮಾನ.

It is on insult to the house , ಒಂದು ಬೇಸಿಕ್ ಕರ್ಟಸಿ ಇಲ್ಲ ಅಂದರೆ ನಾವು ಏನು ಹೇಳುವುದು?

ಉಪಾಧ್ಯಕ್ಷರು: ಒಂದು ವೇಳೆ ತಾವು ಹೇಳಿದ ಹಾಗೆ ಅವರ ಇಂಟೆನ್‌ಷನ್ ಆ ರೀತಿ ಇತ್ತು ಎಂದರೆ ನಿಮ್ಮ ಒಮ್ಮತ ಸರಿ ಇದೆ ಎಂದು ಆಗುತ್ತದೆ. ಆದರೆ ಅವರೇ ಬಂದು ಉತ್ತರ ಹೇಳುತ್ತಾರೆ.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್ : ಅವರು ಆ ಮನೆಯಲ್ಲಿ ಉತ್ತರ ಕೊಡುತ್ತಿದ್ದು, ಉತ್ತರ ಆದನಂತರ ನಾನು ಸದನಕ್ಕೆ ಬರುತ್ತೇನೆ ಎಂದು ಹೇಳಿ ಊಟ ಮಾಡುತ್ತಿದ್ದಾರೆ. ಅದನ್ನು ಇಲ್ಲಿ ತಿಳಿಸಿದ್ದೇವೆ. ವಿಧಾನಪರಿಷತ್ತಿನಲ್ಲಿ ಕೆಲಸ ಕಾರ್ಯ ಇಲ್ಲದೇ ಇದ್ದರೆ, ಅವರು ಇಲ್ಲಿಗೆ ಬರದೇ ಹೋಗಿದ್ದರೆ, ತಾವು ಹೇಳಿದಂತೆ ಇದು ಒಂದು ಅನುಚಿತ ವರ್ತನೆ ಎಂದು ಹೇಳಬಹುದಾಗಿತ್ತು. ಆದರೆ ವಿಧಾನ ಪರಿಷತ್ತಿನಲ್ಲಿ ಅವರು ಕಾರ್ಯನಿರ್ವಹಿಸುವಂತಹ ಸಂದರ್ಭದಲ್ಲಿ ಅವರು ಈ ಸದನವನ್ನು ಉದ್ದೇಶಪೂರ್ವಕವಾಗಿ ಅಪಮಾನಗೊಳಿಸಬೇಕು ಎಂದು ಇಲ್ಲ. ಬರುತ್ತೇನೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ದಯವಿಟ್ಟು ಬೇರೆ ಕಲಾಪ ತೆಗೆದುಕೊಳ್ಳಬಹುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರು ಸಮರ್ಥನೆ ಮಾಡಿಕೊಳ್ಳಬಹುದು. ನಾವು ಈ ವಿಷಯವನ್ನು ಮುಂಜಾನೆ ಪ್ರಸ್ತಾಪ ಮಾಡಿದ್ದೇವೆ. ಈಗ ಮಾಡಿರುವ ವಿಚಾರ ಅಲ್ಲ. ಅವರು ಎಲ್ಲೋ ಕೂತಿದ್ದಾರೆ. ಇಲ್ಲ ಆ ಮನೆಯಲ್ಲಿ ಇದ್ದಾರೆಂದು ನೀವು ಹೇಳಬಹುದು. ಇವತ್ತಿನ ದಿವಸ ಮುಂಜಾನೆ ಇಲ್ಲಿ ಚರ್ಚೆ ನಡೆದಿದೆ. ಸುಮಾರು ಎರಡು ಗಂಟೆ ಚರ್ಚೆ ನಡೆದು ಮಾನ್ಯ ಸಚಿವರು ಇಲ್ಲವೆಂದು ಸಭೆಯನ್ನು ಮುಂದೂಡಿ, ಊಟವಾದ ಮೇಲೆ ಎಲ್ಲರೂ ಮಧ್ಯಾಹ್ನದ ಮೇಲೆ ಸೇರೋಣವೆಂದು ಈಗ 3.15 ಕ್ಕೆ ಸೇರಿದ್ದೇವೆ. ಈಗ ಇಲ್ಲಿ ಸೇರಿದ ಮೇಲೆ ಅವರು ಹಾಜರಿರಬೇಕಾದಂತಹ ಕರ್ತವ್ಯ ಇಲ್ಲವೇ ? ಅವರು ಊಟ ಮಾಡುತ್ತಾರೆ, ಮೇಲ್ಮನೆಯಲ್ಲಿ ಇದ್ದಾರೆ ಎಂದರೆ ಹೇಗೆ ? ಇಲ್ಲಿ ನಿಲುವಳಿ ಸೂಚನೆ ಇರುವಾಗ ಅವರು ಇಲ್ಲಿರಬೇಕೋ ಅಲ್ಲಿರಬೇಕೋ? ಆ ಕೆಲಸ ಬೇರೆಯವರಿಗೆ ಒಪ್ಪಿಸಬಹುದಾಗಿತ್ತಲ್ಲಾ ? ಏಕೆಂದರೆ ಇದು ಒಂದು ಕಾನೂನು. ಯಾವ ಒಂದು ಕಾನೂನು ಇಡೀ ರಾಜ್ಯದಲ್ಲಿರುವ ಕೋ-ಆಪರೇಟಿವ್ ಸೊಸೈಟಿಗಳಿಗೆ ಅಫೆಕ್ಟ್ ಆಗುತ್ತದೆನ್ನುವ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇವೆ. ಈ ಸದನಕ್ಕೆ ಮಹತ್ವ ಇಲ್ಲವೇ ? Sir, this house is supreme.

ನಾನು ಆ ಸದನವನ್ನು ಕಡೆಗಾಣಿಸುತ್ತಿದ್ದೇನೆ ಎಂದು ಅಲ್ಲ. ಈ ಸದನಕ್ಕೆ ಏನು ಮಹತ್ವ ಇದೆ. ಆ ಸದನಕ್ಕೂ ಅಷ್ಟೇ ಮಹತ್ವ ಕೊಡಬೇಕು. ಅದಕ್ಕೆ ನೀವು ಆ ಮನೆಯಲ್ಲಿದ್ದಾರೆ ಎಂದು ಅದಕ್ಕೆ ಬೇರೆ ಅರ್ಥ ಕಲ್ಪಿಸಬೇಡಿ ಎಂದರೆ ಹೇಗೆ ? ಪೊಲೀಸ್‌ನವರನ್ನು ಕಳುಹಿಸಿ ಬಿಡಿ ಅವರು ಎಲ್ಲಿದ್ದಾರೆ ಎಂದು ನೋಡುವುದಕ್ಕೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೇ, ಪೂರ್ವಗ್ರಹ ದೃಷ್ಟಿಯಿಂದ ಇಲ್ಲದ ವಿಚಾರಗಳಿಗೆ ಅಪೇಕ್ಷೆ ಪಡುವುದಾಗಿದ್ದರೆ ಅದು ಸರಿಯಲ್ಲ. ಈಗಾಗಲೇ ಮಾನ್ಯ ಕಾನೂನು ಸಚಿವರು ವಿಧಾನಪರಿಷತ್ತಿನಲ್ಲಿ ಅವರಿಗೆ ಕೆಲಸವಿದ್ದುದರಿಂದ ಬೆಳಿಗ್ಗೆ ಅವರಿಗೆ ಇಲ್ಲಿಗೆ ಬಂದು ಉತ್ತರ ಕೊಡುವುದಕ್ಕೆ ಆಗಲಿಲ್ಲವೆಂದು, ಅದಾದಮೇಲೆ ಊಟ ಮಾಡುತ್ತಿದ್ದಾರೆ. ನಂತರ ಇಲ್ಲೆ ಬರುತ್ತಾರೆಂದು ಹೇಳಿದ್ದಾರೆ. ಇದು ನಿಜವಾಗಿಯೂ ಕೂಡ ವಿಳಂಬವಾಗಿದ್ದರೆ ಕ್ಷಮೆ ಕೇಳುತ್ತೇನೆ. ಆದರೆ ಅದನ್ನ ವಿಳಂಬ ಮಾಡಿ ಪ್ರತ್ಯೇಕವಾಗಿ ಒಬ್ಬ ವ್ಯಕ್ತಿಯನ್ನು ಸಿಂಗಲ್ ಔಟ್ ಮಾಡಿ ಅವರು ಈ ಸದನವನ್ನು ಅಪಚಾರಕ್ಕೆ ಗುರಿ ಮಾಡಿದ್ದಾರೆ ಎಂದರೆ ಅದು ಸರಿಯಲ್ಲ ಎಲ್ಲರೂ ನಮ್ಮ ನಡವಳಿಕೆಗಳನ್ನು ಈ ರೀತಿಯಾದಂತಹ ಸ್ಕ್ರೂಟಿನಿಗೆ ಒಪ್ಪಿಸಿದರೆ ಏನು ಆಗಬಹುದು ಎಂಬುದನ್ನು ತಾವು ಯೋಚನೆ ಮಾಡಿ. ಸ್ವಲ್ಪ ವಿಳಂಬವಾಗಿದೆ. ನಾವು ಕ್ಷಮೆ ಕೇಳುತ್ತೇವೆ. ಇದು ಪರಮಾಧಿಕಾರವಾಗಿರತಕ್ಕಂಥ ಸದನ. ಅವರು ಖಂಡಿತವಾಗಿ ಉದ್ದೇಶ ಪೂರ್ವಕವಾಗಿ ಅಪಮಾನಕ್ಕೆ ಗುರಿ ಮಾಡುವುದಿದ್ದರೆ ನಾವು ಶಿಕ್ಷೆಯನ್ನು ಅನುಭವಿಸುವುದಕ್ಕೆ ತಯಾರಾಗಿದ್ದೇವೆ. ನಾವು ಉತ್ತರ ಕೊಡುವುದಕ್ಕೆ ಹಿಂಜರಿಯುವುದಿಲ್ಲ. ಕೊಡುವ ಉತ್ತರ ಸಮಂಜಸವಾಗುತ್ತದೊ ಇಲ್ಲವೋ ಎನ್ನುವ ವಿಚಾರ ಬೇರೆ. ಆದರೆ ತಾತ್ಕಾಲಿಕವಾಗಿ ಇದನ್ನು ಇಲ್ಲಿಗೆ ಕೈಬಿಟ್ಟು, ಅವರನ್ನು ಐದು ನಿಮಿಷದಲ್ಲಿ ಇಲ್ಲಿ ಕರೆಸುತ್ತೇವೆ, ಅಲ್ಲಿಯವರೆಗೆ ಬೇರೆ ವಿಚಾರಗಳನ್ನು ತೆಗೆದುಕೊಂಡರೆ ಒಳ್ಳೆಯದು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಪ್ರಕಾಶ್‌ರವರಿಗೆ ಗೊತ್ತಿದೆ, ಇದು ನಿಲುವಳಿ ಸೂಚನೆ. ಇದು ಇತ್ಯರ್ಥವಾಗದೇ ಬೇರೆ ವಿಷಯ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಈಗ ಬಂದಿರತಕ್ಕಂಥ ಇಕ್ಕಟ್ಟು ಇದು. ಇದು ಸತ್‌ಸಂಪ್ರದಾಯವಾಗುವುದಿಲ್ಲ.

ಶ್ರೀ ಎಂ.ಪಿ.ಪ್ರಕಾಶ್ : ಈ ವಿಚಾರ ಕೂಡ ಗೊತ್ತಿದೆ. ಸರ್ಕಾರದಿಂದ ಉತ್ತರ ನಿರೀಕ್ಷೆ ಮಾಡತಕ್ಕಂಥದ್ದು. ಸಂಬಂಧಪಟ್ಟ ಇಲಾಖೆಯ ಮಂತ್ರಿಗಳು ಉತ್ತರ ಕೊಡಬೇಕೆಂದು ಸಾಧುವಾದರೂ ಕೂಡ ಅನೇಕ ಸಂದರ್ಭದಲ್ಲಿ ಸಂಬಂಧಪಡದೇ ಇರತಕ್ಕಂಥ ಸಚಿವರು ಉತ್ತರ ಕೊಡಬೇಕಾಗುತ್ತದೆ. ತಾವೂ ಸಹ ಕೇಳಿರತಕ್ಕಂಥ ಬೇಡಿಕೆ ಸಾಧುವಾದುದರಿಂದ ನಮ್ಮ ಜಂಟಿ ಜವಾಬ್ದಾರಿ ಇದ್ದಾಗ ಕೂಡ ಅವರೇ ಬಂದು ಉತ್ತರ ಮಾಡುತ್ತಾರೆ ಎಂದು ಹೇಳಿದ್ದೇವೆ. ಅವರು ಇಲ್ಲಿ ಬರಬಾರದು ಎಂದೇನೂ ಇಲ್ಲ. ಕಾನೂನು ಸಚಿವರು ಉತ್ತರ ಕೊಡುತ್ತಾರೆ, ಆದರಿಂದ ಅವರು ತೃಪ್ತರಾಗಬಹುದಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾವು ಮುಂಜಾನೆಯಿಂದ ಇದನ್ನು ಕೇಳಬೇಕಾದರೆ ಅವರು ತಕ್ಷಣ ಡಿಬೇಟ್ ಮುಗಿದಮೇಲೆ ಅವರಿಗೆ ಉತ್ತರ ಕೊಡಿ ಎಂದು ಹೇಳುತ್ತೇವೆ.

ಮಾನ್ಯ ಸಹಕಾರ ಸಚಿವರು ಇದ್ದಾಗಲೇ ನಮಗೆ ಉತ್ತರ ಕೊಡಲಿ ಎಂದು ನಾನು ತಮ್ಮಲ್ಲಿ ರಿಕ್ವೆಸ್ಟ್ ಮಾಡಿಕೊಂಡೆ. ಏಕೆಂದರೆ ಅವರು ಅನೇಕ ಸಲ ಈ ಸದನದಲ್ಲಿ ತಮ್ಮದೇ ಆದಂತಹ ರೀತಿಯಲ್ಲಿ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಈಗ ಮತ್ತೆ ಪುನಃ ಒಂದು ಆರ್ಡಿನೆನ್ಸ್ ಇಷ್ಯೂ ಮಾಡಿದ್ದಾರೆ. ಅದಕ್ಕಾಗಿ ಅವರು ತಮ್ಮ ನಿಲುವು ಏನೆಂಬುದನ್ನು ಸ್ಪಷ್ಟಪಡಿಸಲಿ, ಏಕೆಂದರೆ ಕಾನೂನನ್ನು ಮಾಡುವಾಗ ಅದರಲ್ಲಿ ಏನಾದರೂ ಅಡೆತಡೆಗಳು ಇದ್ದರೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಸಹಾಯ ಮಾಡುವಂಥಾದ್ದು ಇದ್ದರೆ ಮಾಡಲಿ ಅದಕ್ಕೆ ನಾವು ಅಡ್ಡ ಬರುವುದಿಲ್ಲ. ಆದರೆ ಇವತ್ತು ಏನು ಆರ್ಡಿನೆನ್ಸ್ ತಂದಿದ್ದಾರೆ, ಇದು ಯಾವ ಉದ್ದೇಶದಿಂದ ತಂದಿದ್ದಾರೆನ್ನುವಂಥಾದ್ದನ್ನು ಸಹಕಾರ

ಸಚಿವರು ಸ್ಪಷ್ಟಪಡಿಸಬೇಕಾಗುತ್ತದೆ. ಅವರು ಇದನ್ನು ಸ್ಪಷ್ಟ ಪಡಿಸದೇ ಹೋದರೆ ನಮಗೆ ಪುನಃ ಅನೇಕ ಸಂಶಯಗಳು ಬರುತ್ತದೆ. ತಾವು ತಮ್ಮದೇ ಆದಂತಹ ಆರ್ಡಿನೆನ್ಸ್ ಮುಖಾಂತರ ಕೆಲವು ಇನ್‌ಸ್ಟಿಟ್ಯೂಷನ್‌ನನ್ನು ಕೈಗೆ ತೆಗೆದುಕೊಳ್ಳುವಂಥಾದ್ದಕ್ಕೆ ಇದನ್ನು ಬಳಸಿಕೊಂಡಿದ್ದೀರಿ ಎನ್ನುವಂಥ ಸಂಶಯ ಕೂಡ ನಮಗೆ ಬರುತ್ತದೆ. ಆದುದರಿಂದ ನಾವು ನಿಲುವಳಿ ಸೂಚನೆಯನ್ನು ಕೊಡುವ ಮೊದಲೇ ಸಭಾಧ್ಯಕ್ಷರನ್ನು ಭೇಟಿ ಮಾಡಿ ಸಂಬಂಧಪಟ್ಟ ಮಂತ್ರಿಗಳೇ ಉತ್ತರವನ್ನು ಕೊಡಬೇಕೆಂದು ಹೇಳಿದಾಗ ಅವರೂ ಸಹ ಸಹಕಾರ ಮಂತ್ರಿಗಳು ಉತ್ತರವನ್ನು ಕೊಡುತ್ತಾರೆಂದು ಹೇಳಿದರು. ಈಗ ನೀವು ಪುನಃ ಬೇಕಾದರೆ ಅವರೇ ಉತ್ತರ ಕೊಡುತ್ತಾರೆ, ಬೇಡವೆಂದರೆ ಇವರು ಉತ್ತರವನ್ನು ಕೊಡುತ್ತಾರೆನ್ನುವಂಥಾ ಪ್ರಶ್ನೆ ಉದ್ಭವವಾಗುವುದಿಲ್ಲ. ನಾವು ನಿಮ್ಮ ಮಾತಿನಂತೆ ಪುನಃ ಮಧ್ಯಾಹ್ನ 3 ಗಂಟೆಗೆ ಸಭೆ ಸೇರೋಣವೆಂದು ಹೇಳಿದ್ದೀರಿ, ಅದರಂತೆ ನಾವು ಒಪ್ಪಿಕೊಂಡಿದ್ದೆವು. ಈಗ ಸಭೆ ಸೇರಿ ಒಂದೂವರೆ ತಾಸು ಆದರೂ ಕೂಡ ಸಂಬಂಧ ಪಟ್ಟು ಮಂತ್ರಿಗಳು ಬರಲಿಲ್ಲವೆಂದರೆ ಇದಕ್ಕೆ ನಾವು ಏನು ಹೇಳಬೇಕು, ಯಾವ ಭಾಷೆಯಲ್ಲಿ ಹೇಳಬೇಕು.

ಉಪಾಧ್ಯಕ್ಷರು : ಮಾನ್ಯ ವಾಟಾಳ್‌ನಾಗರಾಜ್‌ರವರೇ, ನೀವು ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೆ, ನನಗೆ ಮಾನ್ಯ ಅಧ್ಯಕ್ಷರೆ ಬರಬೇಕು, ಏಕೆಂದರೆ ಅವರೇ ಕೊಟ್ಟಿರುವಂಥ ತೀರ್ಪು, ಆದುದರಿಂದ ನಾನು ಅವರ ಎದುರಿಗೆ ಹೇಳಬೇಕಾಗುತ್ತದೆ. ಆದುದರಿಂದ ತಾವು ಸಭೆಯನ್ನು 10 ನಿಮಿಷಗಳು ಮುಂದೂಡಿದರೆ ಒಳ್ಳೆಯದು. ಈಗ ಇಲ್ಲಿ ಏನೂ ಕಲಾಪ ನಡೆಯುವ ಹಾಗೆ ಇಲ್ಲವಲ್ಲಾ.

ಉಪಾಧ್ಯಕ್ಷರು : ಆಯಿತು, ತಾವು ಅವರು ಬಂದಾಗಲೇ ಮಾತನಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಮಂತ್ರಿಗಳು ಸಭೆಗೆ ಬರಲಿಲ್ಲವೆನ್ನುವುದು ಜನರಿಗೆ ಗೊತ್ತಾಗಲಿ.

ಶ್ರೀ ಎಂ.ಸಿ. ನಾಣಯ್ಯ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಸುಗ್ರೀವಾಜ್ಞೆಯನ್ನು ತಂದಿರುವ ಬಗ್ಗೆ ಹೇಳಿದ್ದಾರೆ. ಈ ಸುಗ್ರೀವಾಜ್ಞೆಯನ್ನು ತರಬೇಕೆಂದರೆ ಆ ವಿಷಯವನ್ನು ಸಚಿವ ಸಂಪುಟದಲ್ಲಿ ಚರ್ಚೆ ಮಾಡಿ ಅದರ ಸಾಧಕ ಬಾಧಕಗಳನ್ನು ವಿಚಾರ ಮಾಡಿ ಕೊನೆಗೆ ಸಚಿವ ಸಂಪುಟದಲ್ಲಿ ತೀರ್ಮಾನ ತೆಗೆದುಕೊಂಡು ರಾಜ್ಯಪಾಲರಿಗೆ ಅದನ್ನು ಕಳುಹಿಸಿ, ನಂತರ ನಾವು ಕಳುಹಿಸಿದ್ದೇವೆ. ಇದನ್ನು ಮಾನ್ಯ ಮಂತ್ರಿಗಳು ಸಚಿವ ಸಂಪುಟಕ್ಕೆ ತರದೇ, ಅದರ ಒಪ್ಪಿಗೆ ಇಲ್ಲದೆ ಸುಗ್ರಿವಾಜ್ಞೆ ಬಂದಿರುವಂಥಾದ್ದು ಅಲ್ಲ. ಈ ವಿಚಾರ ಸಚಿವ ಸಂಪುಟದಲ್ಲಿ ಚರ್ಚೆಯಾಗಿಯೇ ಬಂದಿರುವಂಥಾದ್ದು. ಆದುದರಿಂದ ನಾನು ಹೇಳುವಂಥಾದ್ದು ಏನೆಂದರೆ ಮಾನ್ಯ ಮಂತ್ರಿಯವರು ಮೇಲ್ಮನೆಯಲ್ಲಿದ್ದಾರೆ. ಈ ವಿಷಯ ಸಚಿವ ಸಂಪುಟದಲ್ಲಿ ಚರ್ಚೆಯಾಗಿರುವುದರಿಂದ ಇದನ್ನು ಏಕೆ ತರಬೇಕಾಗಿತ್ತು, ಎಂಬುದಕ್ಕೆ ನಾವೆಲ್ಲರೂ ಭಾಗಸ್ಥರು ಆಗಿದ್ದೇವೆ. ಇದಕ್ಕೆ ನಾನೂ ಕೂಡ ಕಾನೂನು ಸಚಿವನಾಗಿ ಭಾಗಸ್ಥನಾಗಿದ್ದೇನೆ, ಅದಕ್ಕೆ ನಾನು ಉತ್ತರವನ್ನು ಹೇಳುತ್ತೇನೆ. ನೀವು ಈಗ ಉತ್ತರ ಬೇಡ, ಅವರೇ ಬರಬೇಕೆಂದು ಹೇಳುತ್ತಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ತಾವು ಅವರು ಊಟಕ್ಕೆ ಹೋಗಿದ್ದಾರೆಂದು ಹೇಳುತ್ತಿದ್ದೀರಿ, ಅನೇಕ ಸೀನಿಯರ್ ಮಿನಿಸ್ಟರ್‌ಗಳು ಇಲ್ಲೇ ಊಟ ಮಾಡಿ ಉತ್ತರವನ್ನು ಕೊಡುತ್ತಾರೆ.

ಶ್ರೀ ಎಂ.ಸಿ.ನಾಣಯ್ಯ: ಕೆಲವು ಸಂದರ್ಭದಲ್ಲಿ ಕೆಲವರು ಜೊತೆಗೆ ಊಟ ಮಾಡುತ್ತಾರೆ, ಕೆಲವರು ಆ ರೀತಿ ಮಾಡುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಯಾರೂ ಹಾಗೆ ಮಾಡುವುದಿಲ್ಲ. ಅವರಿಗೆ ನಿಮ್ಮದು, ನಮ್ಮದು, ಯಾರದ್ದೂ ಭಯವಿಲ್ಲವೆಂದು ಹೇಳಬೇಕಾಗುತ್ತದೆ.

ಶ್ರೀ ಎಂ.ಸಿ.ನಾಣಯ್ಯ : ಮಾನ್ಯ ಉಪಾಧ್ಯಕ್ಷರೆ ಈ ಸದನವನ್ನು ತಪ್ಪು ದಾರಿಗೆ ಎಳೆಯುವಂಥಾದ್ದು ಅಗೌರವವನ್ನು ತೋರಿಸುವಂಥಾದ್ದು ಯಾರಿಗೂ ಇಲ್ಲ. ಇದು ನಮ್ಮ ಸದನವೆಂಬುದು ಎಲ್ಲರಿಗೂ ಗೊತ್ತಿದೆ. ಆದುದರಿಂದ ನಾನು ಹೇಳುವಂಥಾದ್ದು ಏನೆಂದರೆ ಈಗ ಅಫಿಷಿಯಲ್ ಪ್ರೋಗ್ರಾಂ ಬಿಟ್ಟು ಬೇರೆ ಏನಾದರೂ ವಿಚಾರವನ್ನು ಮಾತನಾಡುವಂಥಾದ್ದರ ಬಗ್ಗೆ ಒಂದು ಸಲ ಮಾನ್ಯ ಸಭಾಧ್ಯಕ್ಷರು ವಿಚಾರ ಮಾಡಿದರು. ಆಗ ನಾನು ಇದ್ದೆ, ಅದಕ್ಕೆ ಸಂಬಂಧಪಟ್ಟ ಹಾಗೆ ಏನಾದರೂ ಪ್ರಸ್ತಾಪ ಮಾಡುವಂಥಾದ್ದು ಇದ್ದರೆ ಮಾಡಲಿ. ಅಷ್ಟರಲ್ಲಿ ಮಾನ್ಯ ಮಂತ್ರಿಯವರು ಸಭೆಗೆ ಬರುತ್ತಾರೆ ಅವರೇ ಉತ್ತರವನ್ನು ಕೊಡುತ್ತಾರೆ. ನಾವು ಸರ್ಕಾರದ ವತಿಯಿಂದ ಉತ್ತರ ಕೊಡಲು ತಯಾರಿರುವಾಗ ಇವರು ಕೇಳುವುದಕ್ಕೆ ತಯಾರಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾವು ಕೇಳುವುದಕ್ಕೆ ತಯಾರಿದ್ದೇವೆ. ನೀವು ಮಾನ್ಯ ಮಂತ್ರಿಯವರನ್ನು ಸಭೆಗೆ ಕರೆಯಿಸಿ. ಮಾನ್ಯ ಉಪಾಧ್ಯಕ್ಷರೆ ತಾವು ಸಭೆಯನ್ನು 15 ನಿಮಿಷಗಳು ಅಥವಾ ಅರ್ಧ ಗಂಟೆ ಕಾಲ ಮುಂದೂಡಿ, ನಾವು ಅವರಿಗೆ ತುತ್ತು ಬಾಯಿಗೆ ಹಾಕಿ ಊಟ ಮಾಡಿಸೋಣ. ಇದು ಜನರಿಗೂ ಗೊತ್ತಾಗಲಿ, ಇಷ್ಟು ಹಣವನ್ನು ಖರ್ಚು ಮಾಡಿ ಸದನವನ್ನು ನಡೆಸುತ್ತಿದ್ದೇವೆ. ಯಾವ ಮಂತ್ರಿಗಳು ಈ ರೀತಿಯಾಗಿ ನಡೆದುಕೊಳ್ಳುತ್ತಾರೆಂಬುದು ಗೊತ್ತಾಗಲಿ.

Sri M.C. NANAIAH : Let us not set a very bad precedent. ಈ ರೀತಿಯಾಗಿ ಬೇರೆ ಬೇರೆ ಸಂಪ್ರದಾಯಗಳನ್ನು ಹುಟ್ಟು ಹಾಕುವಂಥಾದ್ದು ಸರಿಯಲ್ಲ. ಸರ್ಕಾರದ ವತಿಯಿಂದ ಉತ್ತರವನ್ನು ಹೇಳುವುದಕ್ಕೆ ನಾವು ಇರುವಾಗ ಸದನವನ್ನು ಏಕೆ ಮುಂದೂಡಬೇಕು ?

ಶ್ರೀ ಮಲ್ಲಿಕಾರ್ಜುನಖರ್ಗೆ: ನಾವು ನೂರಾರು ಸಲ ತಮಗೆ ಸಹಕಾರ ನೀಡಿದ್ದೇವೆ. ಸದನದಲ್ಲಿ ಹತ್ತಾರು ಮಂತ್ರಿಗಳು ಇರುವುದಿಲ್ಲ. ನೀವು ಹತ್ತಾರು ಸಲ ಉತ್ತರ ಹೇಳಿದ್ದನ್ನು ನಾವು ಕೇಳಿದ್ದೇವೆ.

ಶ್ರೀ ಎಂ.ಸಿ.ನಾಣಯ್ಯ: ನಮಗೆ ನೀವು ಸಹಕಾರ ಕೊಟ್ಟಿದ್ದೀರಿ, ಇನ್ನೂ ನಿಮ್ಮ ಸಹಕಾರ ನಮಗೆ ಬೇಕು. ತಾವು ಸುಮ್ಮನೆ ಏಕೆ ಹೊರಗಡೆ ಹೋಗುತ್ತೀರಿ, ದಯಮಾಡಿ ಕುಳಿತುಕೊಳ್ಳಿ, ಚರ್ಚೆ ಮಾಡೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ತಾವು ಮಾನ್ಯ ಮಂತ್ರಿಗಳನ್ನು ಕರೆಯಿಸಿ.

ಶ್ರೀ ಎಂ.ಸಿ.ನಾಣಯ್ಯ: ಈಗ ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡುತ್ತೇನೆಂದು ಹೇಳಿದ್ದಾರಲ್ಲಾ, ಅವರು ಮಾತನಾಡಲಿ.

ಉಪಾಧ್ಯಕ್ಷರು: ಈಗ ಮಾನ್ಯ ಎಂ.ಸಿ. ನಾಣಯ್ಯನವರು ಏನು ಹೇಳುತ್ತಾರೆಂಬುದನ್ನು ಕೇಳಿ, ನಂತರ ಏನಾದರೂ ಸ್ಪಷ್ಟೀಕರಣ ಬೇಕೆಂದರೆ ಮಾನ್ಯ ಮಂತ್ರಿಯವರು ಕೊಡುತ್ತಾರೆ.

SRI MALLIKARJUNA KHARGE : We are demanding the MInister's resignation. Therefore , he should come and reply. We are not demanding Nanaih's resignation

(ಗೊಂದಲ)

SRI M.C.NANAIAH : Even if he demands our resignation, no one of us will resign.

ನಾವು ಯಾರೂ ರಾಜೀನಾಮೆ ಕೊಡುವುದಿಲ್ಲ. ನಾವ್ಯಾಕೆ ಕೊಡಬೇಕು ? ನೀವು ಕೇಳಿಬಿಟ್ಟರೆ ಕೊಟ್ಟು ಬಿಡಬೇಕಾ...

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರು ಬಹಳ ಸೆನ್ಸೆಟಿವ್ ಮ್ಯಾನ್ ಆದ್ದರಿಂದ ಕೊಡಬಹುದು. ಅವರು ಬಸವಣ್ಣನವರ ಶಿಷ್ಯರು, ನುಡಿದಂತೆ ನಡೆಯುವಂತಹ ವ್ಯಕ್ತಿಯಾಗಿದ್ದಾರೆ. ನಿಮ್ಮನ್ನು ಅವರಿಗೆ ಹೋಲಿಸಿ ಕೊಂಡರೆ ಹೇಗೆ ?

ಶ್ರೀ ಸಿ.ಆರ್. ಸಗೀರ್ ಅಹಮದ್: ಅವರು ಎಂದೂ ಮಾತಿಗೆ ತಪ್ಪುವವರಲ್ಲ.

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ಕೆ.ಎನ್.ನಾಗೇಗೌಡರು ಏನು ಹೇಳುತ್ತಾರೆಂಬುದನ್ನು ಕೇಳಿ.

ಶ್ರೀ ಕೆ.ಎನ್.ನಾಗೇಗೌಡ : ಮಾನ್ಯ ಉಪಾಧ್ಯಕ್ಷರೆ, ಈಗ ಈ ಸಮಸ್ಯೆಗೆ ತಾವು ಉತ್ತರವನ್ನು ಕೊಡುವಂತಹ ಸಂದರ್ಭ ಒದಗಿ ಬಂದಿದೆ. ನಾನು ನನ್ನ ಪಾಯಿಂಟ್ ಆಫ್ ಆರ್ಡರ್ ಏನೆಂಬುದನ್ನು ಹೇಳುತ್ತೇನೆ. The Chair has to take a decision ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಹೇಳಿದ ಹಾಗೆ ಒಂದು ರಾಜಕೀಯ ಪಕ್ಷ ಸರ್ಕಾರವನ್ನು ನಡೆಸುವಂತಹ ಕಾಲದಲ್ಲಿ ಯಾವುದೇ ವಿಷಯವಾಗಿ ಸಚಿವ ಸಂಪುಟದಲ್ಲಿ ತೀರ್ಮಾನವನ್ನು ತೆಗೆದುಕೊಂಡಾಗ ಅದಕ್ಕೆ ಎಲ್ಲಾ ಸಚಿವರು ಜವಾಬ್ದಾರರಾಗಿರುತ್ತಾರೆ. Everybody is responsible, including MInisteres we are politically responsible, constitutionally also responsible.ನಮಗೆ ಕಲೆಕ್ಟೀವ್ ರೆಸ್ಪಾನ್ಸಿಬಿಲಿಟಿ ಇದೆ.

ಸರ್ಕಾರ ಉತ್ತರವನ್ನು ಕೊಡುತ್ತೇವೆಂದು ಹೇಳಿದ ಮೇಲೆ ಯಾವುದೇ ವಿರೋದ ಪಕ್ಷದ ನಾಯಕರು ಇಂತಹ ಮಂತ್ರಿಗಳೇ ಉತ್ತರವನ್ನು ಕೊಡಬೇಕೆಂದರೆ ಹೇಗೆ ? ಸಂಬಂಧಪಟ್ಟಂತಹ ಮಂತ್ರಿಗಳ ಮೇಲೆ ಪರ್ಸನಲ್ ಚಾರ್ಜಸ್ ಇದ್ದು ನೋಟೀಸ್ ಕೊಟ್ಟಿದ್ದರೆ ಅದು ಆ ರೀತಿಯಾಗುತ್ತದೆ. ಆದರೆ ಈಗ ಇಂಥವರೇ ಬರಬೇಕೆಂದು ನೋಟೀಸ್ ಕೊಟ್ಟಿದ್ದರೆ, ತಾವು ಆ ಮಂತ್ರಿಯವರಿಗೆ ಸಮನ್ ಮಾಡಬಹುದು. ಆದರೆ ಈಗ ಆ ಮಂತ್ರಿಯವರಿಗೆ ಸಮನ್ ಮಡುವಂತಹ ಅವಕಾಶವಿಲ್ಲ. ಆದುದರಿಂದ ಮಾನ್ಯ ಉಪಾಧ್ಯಕ್ಷರೆ ತಾವು ಈ ಸಂದರ್ಭದಲ್ಲಿ ರೂಲಿಂಗ್ ಕೊಡಬೇಕಾಗುತ್ತದೆ. ಇದರಲ್ಲಿ ಈಗ ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಇದೆ. ಸರ್ಕಾರ ಉತ್ತರವನ್ನು ಕೊಡುವುದಕ್ಕೆ ರೆಡಿಯಾಗಿ ಇದೆ. ಆದುದರಿಂದ You have to direct the Government to reply. ಬೇರೆ ಯಾರನ್ನು ಕೇಳುವಂಥಾದ್ದು ಇಲ್ಲ. Under the Rules, You have got ample powers, You can direct the Government to give reply .

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ನಾಗೇಗೌಡರು ನೋಟೀಸ್ ಕೊಟ್ಟಿಲ್ಲವೆಂದು ಹೇಳುತ್ತಿದ್ದಾರೆ. ನಾವು ನೋಟೀಸ್ ಸಹಕಾರ ಸಚಿವರ ಹೆಸರಿನಲ್ಲೇ ಕೊಟ್ಟಿದ್ದೇವೆ.

ಶ್ರೀ ಕೆ.ಎನ್. ನಾಗೇಗೌಡ: ತಾವು ರೂಲ್ಸ್ ಪ್ರಕಾರ ಅವರಿಗೆ ನೋಟೀಸ್ ಕೊಡುವುದಕ್ಕೆ ಬರುವುದಿಲ್ಲ. ತಾವು ವಿರೋಧಪಕ್ಷದ ನಾಯಕರು, ಹಿರಿಯರು ಆಗಿದ್ದೀರಿ.

ಶ್ರೀ ವಿ.ಮುನಿಯಪ್ಪ : ಇಲ್ಲಿ ಮಾರಲ್ ರೆಸ್ಪಾನ್ಸಿಬಿಲಿಟಿ ಇದೆ. ಆದ್ದರಿಂದ ಇದಕ್ಕೆ ಇಲಾಖಾ ಮಂತ್ರಿಗಳೆ ಉತ್ತರ ಕೊಡಬೇಕು.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಂ ರೆಡ್ಡಿ: ಇಲ್ಲಿ ಪಾಯಿಂಟ್ ಆಫ್ ಆರ್ಡರ್ ಪ್ರಶ್ನೆಯಿಲ್ಲ.

ಶ್ರೀ ಕೆ.ಎನ್.ನಾಗೇಗೌಡ: ಮಾನ್ಯ ಉಪಾಧ್ಯಕ್ಷರೆ, ಏನು ಮಾಡಬೇಕೆಂಬ ಬಗ್ಗೆ ರೂಲಿಂಗ್ ಕೊಡಿ.

ಶ್ರೀ ಜಿ.ವಿ. ಶ್ರೀರಾಂರೆಡ್ಡಿ : ಈಗ ಪಾಯಿಂಟ್ ಆಫ್ ಆರ್ಡರ್ ಇಲ್ಲ. ಇಲ್ಲಿ ನಿಲುವಳಿ ಸೂಚನೆಯ ಬಗ್ಗೆ ಚರ್ಚೆಯಾಗಿರುವಂಥಾದ್ದು.

ಉಪಾಧ್ಯಕ್ಷರು : ಮಾನ್ಯ ಜಿ.ವಿ.ಶ್ರೀರಾಂರೆಡ್ಡಿಯವರೇ ಅವರ ಪಾಯಿಂಟ್ ಆಫ್ ಆರ್ಡರ್ ಪ್ರಕಾರ ಗೌರ್ನ್‌ಮೆಂಟಿನದು ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಇರುತ್ತದೆ. ಅದಕ್ಕೆ ಮಾನ್ಯ ಎಂ.ಸಿ. ನಾಣಯ್ಯನವರು ಉತ್ತರ ಕೊಡಲಿ, ನಂತರ ಏನಾದರೂ ಕ್ಲಾರಿಫಿಕೇಷನ್ ಇದ್ದರೆ ನೀವು ಸಂಬಂಧಪಟ್ಟ ಮಂತ್ರಿಯವರ ಹತ್ತಿರ ಕೇಳಿ ಎಂದರು.

ಶ್ರೀ ಜಿ.ವಿ.ಶ್ರೀರಾಂರೆಡ್ಡಿ : ಮಾನ್ಯ ಕೆ. ಎನ್. ನಾಗೇಗೌಡರು ಏನು ಹೇಳಿದರೆಂದರೆ ಜಾಯಿಂಟ್ ರೆಸ್ಪಾನ್ಸಿಬಿಲಿಟಿ ಪೊಲಿಟಿಕಲ್ ರೆಸ್ಪಾನ್ಸಿಬಿಲಿಟಿ ಎಂದು ಹೇಳಿದರು We will agree. ಸಭೆಯಲ್ಲಿ ನಿಲುವಳಿ ಸೂಚನೆಯನ್ನು ತಂದಾಗ ಸಂಬಂಧಪಟ್ಟಂತಹ ಮಂತ್ರಿಗಳು ಉತ್ತರ ಕೊಡುವುದಕ್ಕೆ ಇರಬೇಕು. ಇದು ಸಂಪ್ರದಾಯ ಕೂಡ ಆಗಿದೆ. ಇದಕ್ಕೆ ಪಾಯಿಂಟ್ ಆಫ್ ಆರ್ಡರ್ ಏಕೆ ಎತ್ತಬೇಕು , ಇದಕ್ಕೆ ಎಲ್ಲಿ ಪಾಯಿಂಟ್ ಆಫ್ ಆರ್ಡರ್ ಇದೆ?

ಶ್ರೀ ಕೆ.ಎನ್. ನಾಗೇಗೌಡ : ನಿಲುವಳಿ ಸೂಚನೆ ಎಂದರೆ ಎಲ್ಲಾ ಸರ್ಕಾರಿ ಕಲಾಪಗಳನ್ನು ಬದಿಗೊತ್ತಿ ಇದು ಸಾರ್ವಜನಿಕ ಮಹತ್ವವಿರುವುದರಿಂದ ಇದನ್ನು ತೆಗೆದುಕೊಳ್ಳಬೇಕೆನ್ನುವಂಥಾದ್ದು ಇದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಬೇರೆ ವಿಷಯವಿದ್ದರೆ, ಯಾವ ಮಂತ್ರಿಯಾದರೂ ಉತ್ತರವನ್ನು ಕೊಡಲಿ ನಮ್ಮದೇನೂ ಅಭ್ಯಂತರವಿಲ್ಲ ಆದರೆ ಇದು ನಿಲುವಳಿ ಸೂಚನೆ.

ಉಪಾಧ್ಯಕ್ಷರು: ನಿಲುವಳಿ ಸೂಚನೆ ಅಂಗೀಕಾರವೇ ಆಗಿಲ್ಲ,

ಶ್ರೀ. ಜಿ.ವಿ. ಶ್ರೀರಾಮರೆಡ್ಡಿ : ಆರ್ಗ್ಯೂಮೆಂಟ್ ಆಗಿದೆಯಲ್ಲ.

ಶ್ರೀ ಸಿ.ಆರ್.ಸಗೀರ ಅಹಮದ್ : ಇದರ ಮೇಲೆ ಚರ್ಚೆ ಮಾಡಲು ಅಧ್ಯಕ್ಷರು ಅನುಮತಿಯನ್ನು ಕೊಟ್ಟಿದ್ದಾರೆ, ಅನಂತರವೇ ಚರ್ಚೆ ನಡೆದಿದೆ.

ಉಪಾಧ್ಯಕ್ಷರು : ಇದು ಕೇವಲ ಪ್ರಿಲಿಮನರಿ ಸಬ್‌ಮಿಷನ್, ಕೂಡಲೆ ಅವಸರವೇತಕ್ಕೆ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಪ್ರಿಲಿಮಿನರಿ ಸಬ್‌ಮಿಷನ್‌ಗೆ ಅಧ್ಯಕ್ಷರು ಅವಕಾಶ ಕೊಟ್ಟಿದ್ದಾರೆ, ಅದಕ್ಕೆ ಸಂಬಂಧಿಸಿದ ಮಂತ್ರಿಗಳು ಉತ್ತರವನ್ನು ಕೊಡಬೇಕು.

ಉಪಾಧ್ಯಕ್ಷರು : ಸಂಬಂಧಿಸಿದ ಮಂತ್ರಿಗಳ ಪರವಾಗಿ ಸಂಸದೀಯ ವ್ಯವಹಾರಗಳ ಸಚಿವರು ಉತ್ತರವನ್ನು ಕೊಡುವುದಕ್ಕೆ ಸಿದ್ಧರಿದ್ದಾರಲ್ಲಾ, ಅವರು ಉತ್ತರ ಕೊಟ್ಟನಂತರ, ಅದರ ಮೇಲೆ ತಾವು ಸ್ಪಷ್ಟೀಕರಣ ಬೇಕಾದರೆ ಕೇಳಬಹುದು.

ಶ್ರೀ.ಮಲ್ಲಿಕಾರ್ಜುನ ಖರ್ಗೆ: ಇವರಿಂದ ನಾವು ಉತ್ತರ ಪಡೆಯಬೇಕಾಗಿದ್ದರೆ, ಸದನವನ್ನು ಮಧ್ಯಾಹ್ನ 1.45 ಕ್ಕೆ ಮುಂದೂಡುವ ಅವಶ್ಯಕತೆ ಇರಲಿಲ್ಲ. ಆಗಲೇ 10 ನಿಮಿಷದ ಕಾಲಾವಕಾಶ ಕೊಡುತ್ತಿದ್ದರು. ಇದನ್ನು ಮುಗಿಸಬಿಡಬಹುದಾಗಿತ್ತು. ನಾವು ಸದಸ್ಯರೆಲ್ಲಾ ಸದನದಲ್ಲಿ ಸಂಬಂಧಪಟ್ಟಂಥ ವಿಷಯಕ್ಕೆ ಸಂಬಂಧಿಸಿದ ಮಂತ್ರಿಗಳೇ ಉತ್ತರವನ್ನು ಕೊಡಬೇಕು ಎಂದು ಒತ್ತಾಯ ಮಾಡಿದ್ದೆವು. ಕಾರಣವೇನೆಂದರೆ, ಅವರು, ಅನೇಕ ಸಾರಿ, ನಾನು ತಿದ್ದುಪಡಿ ಕಾನೂನನ್ನು ತರುವುದಿಲ್ಲ. ನಮ್ಮ ಮಂತ್ರಿಮಂಡಲದವರು ಅದನ್ನು ತಂದು ನನಗೆ ಒತ್ತಾಯ ಮಾಡಿದರೂ ಕೂಡ, ನಾನು ಒಪ್ಪುವುದಿಲ್ಲ. ನಾನು ರಾಜೀನಾಮೆಯನ್ನು ಕೊಟ್ಟು ಹೊರಗೆ ಬರುತ್ತೇನೆಯೇ ಹೊರತು , ಈ ತಿದ್ದುಪಡಿಯನ್ನು ಒಪ್ಪುವುದಿಲ್ಲವೆನ್ನುವ ಮಾತನ್ನು ಅವರು ಅನೇಕ ಸಾರಿ ಹೇಳಿದ್ದಾರೆ.

ಉಪಾಧ್ಯಕ್ಷರು : ಸಂಬಂಧಪಟ್ಟ ಮಂತ್ರಿಗಳೇ ಬಂದರು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಒಂದು ಗಂಟೆಯ ನಂತರವಾದರೂ ಬಂದುದ್ದಕ್ಕೆ ಅವರಿಗೆ ಧನ್ಯವಾದವನ್ನು ಹೇಳಬೇಕಾಗುತ್ತದೆ.

ಉಪಾಧ್ಯಕ್ಷರು : ಅವರು ಬರುವವರೆಗೆ ಸಮಯವನ್ನು ಹೊಂದಿಸಿಕೊಂಡು ತಾವೇನು ಮಾತನಾಡಿದಿರಿ ಅದಕ್ಕೆ ತಮಗೆ ಧನ್ಯವಾದಗಳನ್ನು ಹೇಳಬೇಕು.

ಶ್ರೀ ಎಂ.ಸಿ.ನಾಣಯ್ಯ : ಅವರು ಊಟ ಮಾಡದೆ ಅರ್ಧದಲ್ಲೇ ಬಂದಿದ್ದಾರೆ, ಅವರು ಊಟ ಮಾಡುವುದಕ್ಕೆ ಕಾಲಾವಕಾಶ ಕೊಡುವ ಸಂಯಮ ತಮ್ಮಲ್ಲಿರಲಿಲ್ಲ, ನಿಮ್ಮ ಬೇಡಿಕೆಯನ್ನು ಕೇಳುತ್ತಾರೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಅವರು ಇಲ್ಲದ ಸಮಯದಲ್ಲಿ ಏನೇನೋ ಹೇಳಿ ಇಲ್ಲದ ಚಪಲವನ್ನು ತೀರಿಸಿಕೊಂಡಿರಿ, ಅವರ ಸದುದ್ದೇಶವನ್ನೇ ತಾವು ಪ್ರಶ್ನೆ ಮಾಡಿದಿರಿ, ಅವರು ಈಗ ಬಂದಿದ್ದಾರೆ, ನೀವು ಬೇರೆ ರೀತಿಯಲ್ಲಿ ಮಾತನಾಡಿದರೆ ಹೇಗೆ ?

ಶ್ರೀ ಜಿ.ವಿ.ಶ್ರೀ ರಾಮರೆಡ್ಡಿ : ನಾವು ಬೇರೇನೂ ತಿಳಿದುಕೊಳ್ಳಲಿಲ್ಲ. ಅವರು ಉತ್ತರವನ್ನು ಕೊಡಲಿ.

ಶ್ರೀ ಎಂ.ಪಿ.ಪ್ರಕಾಶ್ : ಅವರು ಸದನಕ್ಕೆ ಅಪಮಾನ ಮಾಡಿದ್ದಾರೆ. ಅವರು ಬಸವಣ್ಣನವರ ಭಕ್ತರು ನುಡಿದಂತೆ ನಡೆಯುತ್ತಾರೆ. ಇಂತಹ ಲೇವಡಿ ಮಾತುಗಳನ್ನು ಅವರಿಲ್ಲದಾಗ ಹೇಳಿದಿರಿ, ನಾಲ್ಕು ನಿಮಿಷ ತಡೆದುಕೊಳ್ಳುವ ತಾಳ್ಮೆ ನಿಮಗಿರಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಕಾಯುವುದಕ್ಕಾಗುತ್ತದೆಯೇ, ನಾಲ್ಕು ನಿಮಿಷವೆಂದು ಹೇಳುತ್ತಿದ್ದೀರಿ, ಸಮಯವೆಷ್ಟಾಗಿದೆ ನೋಡಿ?

ಶ್ರೀ ಎಂ.ಪಿ.ಪ್ರಕಾಶ್ : ನಾವು ಉತ್ತರ ಕೊಡುವುದಕ್ಕಾಗುವುದಿಲ್ಲವೇ ?

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇದೇನು ವೇಟಿಂಗ್ ರೂಮಾ ?

(ಗೊಂದಲ)

SRI M.P.PRAKASH : Why do you think like that ? why do you want to insult our Minister ? why do you want to insult ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ತಾವು ತಿಳಿದುಕೊಂಡಿದ್ದು ಇನ್ಸಲ್ಟ್, ನೀವು ಯಾವಾಗ ಸದನಕ್ಕೆ ಬರುವುದಿಲ್ಲ it is our right to ask ...

SRI M.P.PRAKASH : No, this is not the way. we are all interested. we are here to conduct the business according to rules and Government has to reply. We are making humble request to the hon.leader of the opposition to coperate.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾವು ನಿಲುವಳಿ ಸೂಚನೆಯನ್ನು ತಂದಿದ್ದೇವೆ. ನೀವು ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಿರಿ, ಇಂತಹ ಸಮಯದಲ್ಲಿ ಇಲ್ಲದೇ ಹೋದರೆ ನಾವು ಏನು ತಿಳಿದುಕೊಳ್ಳಬೇಕು? ಇವರು ಮನಸ್ಸು ಬಂದಾಗ ಬಂದು ಹೋಗುವುದಕ್ಕೆ ಇಲ್ಲಿ ನಾವು ಕಾಯುತ್ತಾ ಕುಳಿತುಕೊಳ್ಳಬೇಕಾ?

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್ : ಅವರು ಈಗ ಬಂದರು ನೋಡಿ ಎಂದು ಮತ್ತೆ ಲೇವಡಿ ಮಾಡುವುದು ಆ ಲೇವಡಿಗೂ ಒಂದು ಮಿತಿ ಇರುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇವರಿಗೆ ಕೆಲಸವಿರುವುದು, ಬೇರೆಯವರೆಲ್ಲಾ ಕೆಲಸವಿಲ್ಲದೆ ಸುಮ್ಮನೆ ಬಂದು ಇಲ್ಲಿ ಕುಳಿತುಕೊಳ್ಳುತ್ತಾರೆ.

ಶ್ರೀ .ಎಂ.ಪಿ.ಪ್ರಕಾಶ್: ಅದಕ್ಕೆ ನಾವು ಕ್ಷಮೆ ಕೇಳಿದ್ದೇವೆ , ಆದರೆ ಲೇವಡಿ ಮಾಡುವುದಕ್ಕೆ ಒಂದು ಮಿತಿ ಬೇಡವೆ.

ಶ್ರೀ ಎಸ್.ಎಸ್.ಪಾಟೀಲ್(ಸಹಕಾರ ಸಚಿವರು) : ಮಾನ್ಯ ಉಪಸಭಾಧ್ಯಕ್ಷರೆ, ಬಹುಶಃ ಮಾನ್ಯವಿರೋದಪಕ್ಷದ ನಾಯಕರು ಮತ್ತು ವಿರೋಧಪಕ್ಷದ ಸದಸ್ಯರಿಗೆಲ್ಲಾ ನೋವಾಗಿದೆ ಎಂದೆನಿಸುತ್ತದೆ. ನಾನು ಉದ್ದೇಶಪೂರ್ವಕವಾಗಿ ಈ ಸದನಕ್ಕೆ ಬಾರದೆ ಉಳಿದಿಲ್ಲ. ಆ ಸದನದಲ್ಲಿ ನಾವು ಉತ್ತರವನ್ನು ಕೊಡ ಬೇಕಾಗಿತ್ತು, ನಾನು 3.15 ನಿಮಿಷಕ್ಕೆ ಬಿಟ್ಟು ಊಟವನ್ನು ಅರ್ಧಕ್ಕೆ ಬಿಟ್ಟು ಬಂದಿದ್ದೇನೆ. ಇದೇ ವಿಷಯ ಅಲ್ಲಿಯೂ ನಡೆಯುತ್ತಿದೆ. ಅವರು ಅಲ್ಲಿ ಹೋಗಬೇಡಿ ಎಂದು ಹೇಳಿದರು, ಇವರು

ಇಲ್ಲೇ ಇರಬೇಕೆಂದು ಹೇಳುತ್ತಿದ್ದಾರೆ, ಈಗ ನೀವೇ ಉತ್ತರ ಕೊಡಬೇಕೆಂದು ಅಲ್ಲಿಯೂ ಕೇಳುತ್ತಿದ್ದಾರೆ. ನಮ್ಮ ಕಾನೂನು ಸಚಿವರಿಗೆ ಹೇಳಿಕಳುಹಿಸಿದೆ, ಅವರು ಉತ್ತರ ಕೊಡುತ್ತಿದ್ದರು, ಇವತ್ತು ನಾವು ತಪ್ಪಿಸಿಕೊಂಡು ಎಲ್ಲಿಯೂ ಹೋಗುವ ಪ್ರಶ್ನೆಯಿಲ್ಲ. ಆ ಕಾರಣದಿಂದ ತಮಗೆ ಹಾಗೂ ಸದನದ ಸದಸ್ಯರಿಗೆ ಇವತ್ತು ಏನಾದರೂ ನೋವಾಗಿದ್ದರೆ ನಾನು ಕ್ಷಮೆ ಕೇಳುತ್ತೇನೆ. ಇವತ್ತು ನಾಮಕರಣ ಮಾಡಿದ ಸದಸ್ಯರಿಗೆ ಮತಹಾಕುವ ಹಕ್ಕನ್ನು ಕೊಟ್ಟ ಬಗ್ಗೆ ಇವತ್ತಿನ ದಿವಸ ಇಲ್ಲಿ ಚರ್ಚೆಯಾಗಿದೆ. ಅದನ್ನು ಸಂಪೂರ್ಣವಾಗಿ ಕೇಳದಿದ್ದರೂ ಕೂಡ ಆ ವಿಚಾರವನ್ನು ನಾನು ತಿಳಿದುಕೊಂಡಿದ್ದೇನೆ. ಬಹುಶಃ ನಾಮಕರಣಕ್ಕೆ ವೈಯಕ್ತಿಕವಾಗಿ ನಾನು ಈಗಲೂ ಕೂಡ ವಿರೋಧವಾಗಿದ್ದೇನೆ. ಇಲ್ಲವೆಂದು ನಾನು ಹೇಳುವುದಿಲ್ಲ. ನಾನು ಹಲವಾರು ಸಂದರ್ಭಗಳಲ್ಲಿ ಹೇಳಿದ್ದೇನೆ. ಈಗಲೂ ಹೇಳುತ್ತಿದ್ದೇನೆ. ಆದರೆ ಇವತ್ತು ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವು ಅಂಟಿಕೊಂಡ ಬಂದ ಮೇಲೆ, ಸರ್ಕಾರ ತೆಗೆದುಕೊಂಡ ತೀರ್ಮಾನಕ್ಕೆ ನಾನು ಬದ್ಧನಾಗಬೇಕಾಗುತ್ತದೆ, ಆ ಒಂದು ಹಿನ್ನಲೆಯಲ್ಲಿ ಸಚಿವಸಂಪುಟದಲ್ಲಿ ತೆಗೆದುಕೊಂಡ ತೀರ್ಮಾನಕ್ಕೆ ನಾನು ಬದ್ಧನಾಗಿದ್ದೇನೆ. ಆ ಒಂದು ದೃಷ್ಟಿಯಿಂದ ಸುಗ್ರೀವಾಜ್ಞೆಯನ್ನು ಹೊರಡಿಸಿ ಅವರಿಗೆ ಮತಹಾಕುವ ಅಧಿಕಾರವನ್ನು ಕೂಡ ಕೊಟ್ಟಿದ್ದೇವೆನ್ನುವುದನ್ನು ತಮ್ಮ ಮುಖಾಂತರ ಸದನಕ್ಕೆ ತಿಳಿಸಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರು ಇದೇ ಉತ್ತರವನ್ನು ಆರ್ಡಿನೆನ್ಸ್‌ಗೆ ಕೊಡಬೇಕಾಗಿದ್ದರೆ, ನೀವು ಬೇಕಾದರೆ ರಾಜಕೀಯವಾಗಿಯೂ ಕೊಡಿ.

ಶ್ರೀ ಕೆ.ಎನ್.ನಾಗೇಗೌಡ (ಭಾರಿ ನೀರಾವರಿ ಸಚಿವರು): ಅಧ್ಯಕ್ಷರೇ, The Government has taken a political decision .ನೀವು ಹೇಗೆ ಮಾಡಿದ್ದೀರೋ ಹಾಗೆಯೇ ನಾವು ಮಾಡಿದ್ದೇವೆ.

ಮಲ್ಲಿಕಾರ್ಜುನ ಖರ್ಗೆ: ಉಪಾಧ್ಯಕ್ಷರೆ, ನನ್ನ ಅಪೀಲ್ ಇಷ್ಟೆ, ಮಾನ್ಯ ಮಂತ್ರಿಗಳು ಈಗಲೂ ಏನು ಹೇಳಿದರೆಂದರೆ, ನನ್ನ ಆತ್ಮಸಾಕ್ಷಿಯ ಪ್ರಕಾರ ಇವತ್ತು ಕೂಡ ನಾಮಕರಣಕ್ಕೆ ಒಪ್ಪುವುದಿಲ್ಲವೆನ್ನುವ ಮಾತನ್ನು ಹೇಳಿದ್ದಾರೆ. ಆದರೆ ನಮ್ಮ ಪಕ್ಷದ ಸರ್ಕಾರದವರು ಇದನ್ನು ಪುನಃ ತರಬೇಕು, ನಾಮಕರಣಹೊಂದಿದ ಸದಸ್ಯರಿಗೆ ಅಧಿಕಾರ ಕೊಡಬೇಕೆನ್ನುವುದನ್ನು ಮಾಡಿದ್ದಾರೆ, ಅದಕ್ಕೆ ನಾವು ಒಪ್ಪಿದ್ದೇವೆ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಅವರು ಇಲ್ಲೇ ವೈಯುಕ್ತಿಕವಾಗಿ ಹೇಳಿದ್ದು , ಎಲ್ಲಿಯವರೆಗೆ ನಾನು ಸಹಕಾರಿ ಸಚಿವ ನಾಗಿರುತ್ತೇನೆ ಅಲ್ಲಿಯವರೆಗೆ ಯಾವುದೇ ಸಂದರ್ಭದಲ್ಲಿ ಈ ನಾಮಕರಣ ಪದ್ಧತಿಯಾಗಲಿ ಅಥವಾ ಈ ನಾಮಕರಣ ಮಾಡಿದವರಿಗೆ ಮತಹಾಕುವ ಹಕ್ಕನ್ನು ಕೊಟ್ಟರೆ ಅಥವಾ ನಾಮಕರಣ ಹೊಂದಿದವರು ಪದಾಧಿಕಾರಿಗಳಾದರೆ ನಾನು ಒಂದು ಕ್ಷಣ ಕೂಡ ಅಧಿಕಾರದಲ್ಲಿರುವುದಿಲ್ಲವೆಂದು ಅವರು ವೈಯಕ್ತಿಕವಾಗಿ ಘೋಷಣೆ ಮಾಡಿದ್ದಾರೆ. ನಾನು ಅಧಿಕಾರವನ್ನು ಬಿಟ್ಟು ಹೋಗುತ್ತೇನೆಯೇ ಹೊರತು ನಾನು ಎಂದೂ ಇದಕ್ಕೆ ಒಪ್ಪುವುದಿಲ್ಲ. ನಾನು ಇರುವವರೆಗೆ ಅದಕ್ಕೆ ಅವಕಾಶ ಮಾಡಿಕೊಡುವುದಿಲ್ಲ ಎನ್ನುವ ಮಾತನ್ನು ಸದನದ ಒಳಗಡೆ ಹೊರಗಡೆ, ಸಭಾಧ್ಯಕ್ಷರ ಕೊಠಡಿಯಲ್ಲಿ ಕೂಡ ಹೇಳಿದ್ದಾರೆ. ಇವತ್ತು ನಾನು ಕೇಳುತ್ತೇನೆ, ನಿಮಗೆ ಆತ್ಮಸಾಕ್ಷಿ ಇದ್ದರೆ, ನೀವು ನಾಮಕರಣಕ್ಕೆ ನಾವು ಒಪ್ಪುವುದಿಲ್ಲವೆಂದು ಯಾವ ಆತ್ಮಸಾಕ್ಷಿಯಿಂದ ಹೇಳುತ್ತಿದ್ದಿರಿ ತಕ್ಷಣ ರಾಜೀನಾಮೆಯನ್ನು ಕೊಟ್ಟು ಹೊರಗೆ ಬನ್ನಿ. ಇಲ್ಲದಿದ್ದರೆ ಅಧಿಕಾರಕ್ಕೆ ಅಂಟಿಕೊಂಡು ನೀವು ಹೇಳುವುದು ಒಂದು, ನಡೆಯುವುದು ಒಂದು ನುಡಿಯತಕ್ಕದ್ದೇ ಒಂದು ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ.

ನೀವು ಸಾರ್ವಜನಿಕರಿಗೆ ಏನಾದರೂ ಹೇಳಬೇಕೆಂದಾಗ ತತ್ವ ನಿಯಮ ಇವೆಲ್ಲವನ್ನೂ ಹೇಳುವುದು, ನಿಮಗೆ ಅನುಕೂಲವಾಗುವಾಗ ನನಗೇನೂ ಬೇಕಿಲ್ಲ. ನನ್ನ ಮಕ್ಕಳಿಗೆ ಬೇಕು. ನನಗೇನೂ ಬೇಕಿಲ್ಲ ನಮ್ಮ ನೆಂಟರಿಗೆ ಬೇಕು ನನಗೇನೂ ಬೇಕಾಗಿಲ್ಲ ನನ್ನ ಸರ್ಕಾರಕ್ಕೆ ಬೇಕು. ಇದೇ ನಿಮ್ಮ ನೀತಿ. ನನ್ನ ಆತ್ಮಸಾಕ್ಷಿ ಪ್ರಕಾರ ಒಪ್ಪುವುದಿಲ್ಲ, ಆದರೆ ನಮ್ಮ ಪಕ್ಷದವರು ಕೇಳಿದ್ದಾರೆ, ಅದಕ್ಕೆ ನಾಮಕರಣ ಮಾಡುವುದಕ್ಕೆ ನನ್ನ ಅಭ್ಯಂತರವಿಲ್ಲ ಎಂದು ಹೇಳುವುದು. ನಾಮಕರಣ ಮಾಡಿದ ಮೇಲೆ ಅದರಲ್ಲಿ ಅಧ್ಯಕ್ಷರನ್ನು ಮಾಡುವುದು, ಅಂದರೆ ಇದರ ದುರ್ಬಳಕೆಯಾಗುತ್ತದೆ ಎನ್ನುವ ಆತ್ಮಸಾಕ್ಷಿ ನಿರ್ಣಯವನ್ನು ನೀವು ಹಿಂದಕ್ಕೆ ತೆಗೆದುಕೊಂಡರೂ ಕೂಡ ಹಿಂದಿನ ತಿದ್ದುಪಡಿಯನ್ನು ಸುಟ್ಟುಹಾಕಿಲ್ಲ. ಏಕೆಂದರೆ ಇದರಲ್ಲಿ ಒಂದು ಅಕ್ಷರವೂ ಬದಲಾವಣೆ ಮಾಡುವ ಹಾಗಿಲ್ಲ ವೆಂದು ನೀವು ಹೇಳಿಲ್ಲ. ಅಂದಾಗ ಈ ತಿದ್ದುಪಡಿಯನ್ನು ನೀವು ತಂದು ಎಂಟು ತಿಂಗಳಾಯಿತು. ಎಂಟು ತಿಂಗಳೊಳಗೆ ತಿದ್ದುಪಡಿ ಮಾಡುವ ಪ್ರಮೇಯ ತಮಗೆ ಬಂತೆಂದರೆ ಇದು ರಾಜಕೀಯ ದುರುದ್ದೇಶ, ರಾಜಕೀಯ ಹಸ್ತಕ್ಷೇಪ ಮತ್ತು ನಿಮ್ಮ ಅಧಿಕಾರ ದುರುಪಯೋಗ ಮಾಡಿ ಇವತ್ತಿನದಿವಸ ಎಲ್ಲಾ ಸಂಘಸಂಸ್ಥೆಗಳಲ್ಲಿ ಕೈಹಾಕುವುದಕ್ಕೆ ಈ ಒಂದು ಸುಗ್ರೀವಾಜ್ಞೆಯನ್ನು ತಂದಿದ್ದೀರಿ ಎನ್ನುವ ಮಾತನ್ನು ನಾನು ಹೇಳಬೇಕಾಗುತ್ತದೆ. ನಮಗಂತೂ ನಾಚಿಕೆಯಾಗುತ್ತಿದೆ, ನಿಮಗೆ ನಾಚಿಕೆಯಾಗುತ್ತಿದೆಯೋ ಏನೋ ಗೊತ್ತಿಲ್ಲ, ಏಕೆಂದರೆ ಎಂಟು ತಿಂಗಳೊಳಗೆ ನಿಮ್ಮ ನಾಲಿಗೆ ಎರಡು ರೀತಿಯಲ್ಲಿ ಮಾತನಾಡುವುದಾದರೆ ಎಷ್ಟರಮಟ್ಟಿಗೆ ನಿಮ್ಮ ಆತ್ಮ ಸಾಕ್ಷಿಯಾಗಿ ಇಲ್ಲಿಯವರೆಗೆ ನಡೆದುಕೊಂಡಿದ್ದೀರಿ ಎನ್ನುವುದು ಇದರಿಂದ ಅರ್ಥವಾಗುತ್ತದೆ. ಎಷ್ಟೋ ಜನ ಮಂತ್ರಿಗಳು ಇದರಲ್ಲಿ ಹೀಗೆ ಬದಲಾವಣೆ ಮಾಡುತ್ತೇನೆಂದು, ಇದರಲ್ಲಿ ಒಂದು ಅಕ್ಷರ ಬದಲಾವಣೆಯದರೂ ಕೂಡ ನಾನು ಅಧಿಕಾರದಲ್ಲಿರುವುದಿಲ್ಲ ಎಂದು ಹೇಳಿ ಉಳಿದವರು ಯಾರೂ ಇಲ್ಲ . ಅವರ ಸರ್ಕಾರ ಮಾಡಿ ದ್ದನ್ನು ಬದಲಾವಣೆ ಮಾಡಿರಬಹುದು. ಆದರೆ ನೀವು ಖಡಾಖಂಡಿತವಾಗಿ ಹೇಳಿ, ಅದರ ಮೇಲೆ ಅನೇಕ ಸಾರಿ ಒತ್ತುಕೊಟ್ಟು ಮತ್ತು ಹಿಂದಿನ ಸರ್ಕಾರಗಳಿಗೆ ಲೇವಡಿ ಮಾಡಿ, ಪ್ರತಿಯೊಂದು ಸಭೆಗಳಲ್ಲಿ, ಯಾವ್ಯಾವ ಜಿಲ್ಲೆಗಳಲ್ಲಿ, ಯಾವ್ಯಾವ ತಾಲ್ಲೂಕುಗಳಲ್ಲಿ ಏನೇನು ಭಾಷಣ ಮಾಡಿದ್ದೀರೆಂಬುದು ಇಡೀ ರಾಜ್ಯದ ಜನತೆಗೆಲ್ಲಾ ಗೊತ್ತಿದೆ. ಅದಕ್ಕೆ ಲೇವಡಿ ಮಾಡಿ ಮಾತನಾಡಿದ್ದು, ಹಾಸ್ಯಾಸ್ಪದ ಮಾಡಿದ್ದನ್ನು ನೋಡಿದರೆ ಇವತ್ತು ನಿಮಗೆ ನಾಚಿಕೆಯಾಗಬೇಕು. ನಾನು ಮೂರು ವರ್ಷ ಮಾತನಾಡಿ ಇವತ್ತು ಪುನಃ ಇದಕ್ಕೆ ನಾನೇ ತಿದ್ದುಪಡಿ ಮಾಡಬೇಕಲ್ಲಾ ಎಂದು ನಿಜವಾಗಲೂ ನೀವು ಆತ್ಮಹತ್ಯೆ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ರಾಜೀನಾಮೆ ಕೊಟ್ಟು ಹೋಗಿ. ನಿಮಗೆ ಕಿಂಚಿತ್ತಾದರೂ ಅಭಿಮಾನವಿದ್ದರೆ , ಸ್ವಾಭಿಮಾನವಿದ್ದರೆ ಹಾಗೆ ಮಾಡಿ. ಏಕೆಂದರೆ ನೀವೇ ಹೇಳಿದ್ದಿರಿ. ನೀವು ಹೇಳಿದ ಹಾಗೆ ನಡೆಯುತ್ತೀರಿ ಎಂದು ಜನ ಎರಡು ಮೂರು ವರ್ಷ ನಂಬಿಕೊಂಡು ಬಂದರು. ಈ ಅಮೆಂಡ್‌ಮೆಂಟ್‌ಗೆ ನಾನು ಅನೇಕ ಸಾರಿ ಅಪೋಸ್ ಮಾಡಿದೆ. ನಾನು ಇಲ್ಲದೇ ಇದ್ದಾಗ ನಾಣಯ್ಯನವರು ಎಲ್ಲರನ್ನೂ ಛೇಂಬರ್‌ನಲ್ಲಿ ಮೀಟಿಂಗ್ ಕರೆದು ಮಾಡಿಕೊಂಡರು. ದಲಿತರು, ಹಿಂದುಳಿದವರು, ಬಡವರಿಗೆ ಸಹಕಾರ ಸಂಘಗಳಲ್ಲಿ ಪ್ರವೇಶವಿಲ್ಲ ಎನ್ನುವ ದೃಷ್ಟಿಯಿಂದ ನಾವು ಹಿಂದೆ ಆ ಕಾನೂನು ಮಾಡಿದ್ದು ಎನ್ನುವ ವಾದವನ್ನು ನಾವು ಮಾಡಿದಾಗ ನೀವೆಲ್ಲರೂ ಸೇರಿ ಕಾನ್‌ಸೆನ್‌ಸೆಸ್ ಮಾಡಿ, ಅದು ಬೇಡ, ಪ್ರಜಾಪ್ರಭುತ್ವದಲ್ಲಿ ಎಲೆಕ್ಟೆಡ್ ಮೆಂಬರ್ಸ್ ಇರಬೇಕು, ನಾಮಿನೇಟೆಡ್ ಮೆಂಬರ್ಸ್‌ಗೆ ಅಧಿಕಾರ ಕೊಟ್ಟರೆ ಅದು ದುರುಪಯೋಗ ವಾಗುತ್ತದೆ. ಪ್ರಜಾಪ್ರಭುತ್ವ ತತ್ವದ ವಿರುದ್ಧವಾಗಿ ನಾವು ನಡೆದುಕೊಂಡ ಹಾಗೆ ಆಗುತ್ತದೆ ಎನ್ನತಕ್ಕಂಥ ತಿಳುವಳಿಕೆ

ಮಾತುಗಳನ್ನು ಕೊಟ್ಟು ಸಮಜಾಯಿಸಿ, ಕಾಂಪ್ರೊಮೈಸ್ ಮಾಡಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸರ್ವಾನುಮತದ ಈ ಒಂದು ಆಕ್ಟ್ ಮಾಡಿದಿರಿ. ಈ ಒಂದು ಯುನಾನಿಮಸ್ ಆಕ್ಟ್‌ಗೆ ಈ ಆರ್ಡಿನೆನ್ಸ್ ತರುವುದಕ್ಕೆ ನಿಮಗೆ ಹೇಗೆ ಧೈರ್ಯ ಬಂತು ? ಇದೇ ನಿಮ್ಮ ನೀತಿಯೇ ? ಸರ್ವಾನುಮತದಿಂದ ಆದಂಥ ಆಕ್ಟ್‌ಗೆ ಅಮೆಂಡ್‌ಮೆಂಟ್ ಆಗಿರುವುದರಿಂದ ಕನಿಷ್ಟ ಸದಸ್ಯರನ್ನು ಕೇಳಿಯಾದರೂ ಮಾಡೋಣ ಎಂದು ನೀವು ಮಾಡಲಿಲ್ಲ. ಏಕೆಂದರೆ ಒಂದು ಒಂದೇ ಪಕ್ಷಕ್ಕೆ ಸೀಮಿತವಾಗಿ ಉಳಿದಿಲ್ಲ. ಇದನ್ನು ಬಿ.ಜೆ.ಪಿಯವರೂ ಒಪ್ಪಿದರು, ಕಾಂಗ್ರೆಸ್‌ನವರೂ ಒಪ್ಪಿದರು. ನೀವು ಎಲ್ಲರನ್ನೂ ಕರೆಸಿ ಒಂದು ಕಾಂಪ್ರೊಮೈಸ್ ಮಾಡಿ ಕೊನೆಗೆ ಒಂದು ಹಂತಕ್ಕೆ ಬಂದು ಒಂದು ತೀರ್ಮಾನವನ್ನು ತೆಗೆದುಕೊಂಡು ಅಮೆಂಡ್‌ಡ್ ಆಕ್ಟ್ ಪಾಸ್ ಆಯಿತು. ಅಮೆಂಡೆಡ್ ಆಕ್ಟ್ ಯುನಾನಿಮಸ್‌ಲಿ ಪಾಸ್ ಮಾಡಿದ ಮೇಲೆ ಪುನಃ ಎಂಟು ತಿಂಗಳೊಳಗೆ ಆರ್ಡಿನೆನ್ಸ್ ಪಾಸ್ ಮಾಡಲು ತಮಗೆ ಏನು ಹಕ್ಕು ಇದೆ ? ಏನೋ ಅನಾಹುತವಾಗಿತ್ತು ಅಥವಾ ಯಾವುದೋ ಇಂಟರ್‌ಪ್ರಿಟೇಷನ್‌ನಲ್ಲಿ ತಪ್ಪಾಗಿದೆ. ಅದನ್ನು ಇಂಪ್ಲಿಮೆಂಟೇಷನ್ ಮಾಡಲು ಸಾಧ್ಯವಿಲ್ಲ. ಇನ್ನೂ ಬಹಳ ದಿವಸ ಬೇಕು ಎನ್ನುವ ಪರಿಸ್ಥಿತಿ ಇರುವಾಗ ಪಬ್ಲಿಕ್ ಇಂಟರೆಸ್ಟ್‌ನಲ್ಲಿ ಬಹಳ ಅವಶ್ಯವಿದೆ ಎಂದರೆ ಮಾಡಿ. ಇದರಲ್ಲಿ ಪಬ್ಲಿಕ್ ಇಂಟರೆಸ್ಟ್ ಇಲ್ಲ. ನಿಮ್ಮ ಇಂಟರೆಸ್ಟ್ ನಿಮ್ಮ ಸೊಸೈಟಿ ಇಂಟರೆಸ್ಟ್, ನಿಮ್ಮ ಜಿಲ್ಲೆಯ ಇಂಟರೆಸ್ಟ್, ನಿಮ್ಮ ಪಾರ್ಟಿ ಇಂಟರೆಸ್ಟ್ ಇದೆ. ಈ ಇಂಟರೆಸ್ಟ್‌ಗಳಿಂದ ಮಾಡಿದಂಥ ಈ ಎರಡು ವಾಕ್ಯಗಳ ಅಮೆಂಡ್‌ಮೆಂಟ್‌ನಿಂದ ಇವತ್ತು ನೂರಾರು ಸೊಸೈಟಿಗಳಲ್ಲಿ ಕೈ ಆಡಿಸಲು ನಿಮಗೆ ಅವಕಾಶ ಇದೆ. ಪುನಃ ನಾನು ಒತ್ತಾಯ ಮಾಡುತ್ತೇನೆ. ಅವರ ಎಕ್ಸ್‌ಪ್ಲೆನೇಷನ್ ನಮಗೆ ಸಮಾಧಾನವಾಗಲಿಲ್ಲ. ಏಕೆಂದರೆ ಹಿಂದೆ ಅವರು ಆಬ್ಜೆಕ್ಷನ್ ಕೂಡ ಕೊಟ್ಟಿದ್ದರು. ವೀರಪ್ಪ ಮೊಯ್ಲಿಯವರು ಇದನ್ನು ಮೆನ್‌ಷನ್ ಮಾಡಿದರು. ಆಗ ನಾಣಯ್ಯನವರು ಇರಲಿಲ್ಲ, ಉಪ ಮುಖ್ಯ ಮಂತ್ರಿಗಳೂ ಇರಲಿಲ್ಲ. ನಿಮ್ಮ ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಟ್ ಅಂಡ್ ರೀಸನ್ಸ್‌ನಲ್ಲಿ ಏನು ಹೇಳಿದ್ದೀರಿ ಎಂದರೆ, to provide for nomination of only three persons in the committee of Registered Societies, review powers of the Government under section 30 A, to do away with the Government nominations of 1/3 of the total strength of the committee, prohibit such nominated members from contesting the election of president and vice-president. ಇದನ್ನು ನಿಮ್ಮ ಏಮ್ಸ್ ಮತ್ತು ಅಬ್ಜಕ್ಟ್‌ನಲ್ಲಿ ಹೇಳಿ ಈಗ ಹೊಲಸು ಮಾಡಿದ್ದೀರಿ. ಹೀಗೆ ಹೇಳಿ ಯುನಾನಿಮಸ್ ಆಕ್ಟ್ ಪಾಸ್ ಮಾಡಿಕೊಳ್ಳುವುದು, ಇನ್ನೊಂದು ಕಡೆ ಇಂಥ ಅಮೆಂಡ್‌ಮೆಂಟ್ ತರುವುದು. ಅದಕ್ಕೇ ನಾವು ಹೇಳಿದ್ದು. ನಾವು ಹೇಳಿದರೆ ಪ್ರಕಾಶ್‌ರವರು ಅಂಥ ಭಾಷೆ ಬಳಸುತ್ತೀರಿ, ಇಂಥ ಭಾಷೆ ಬಳಸುತ್ತೀರಿ ಎಂದು ಹೇಳುತ್ತಾರೆ. ಇಂಥ ಸರ್ಕಾರಕ್ಕೆ ಇಂಥ ಜನರಿಗೆ ಇದೇ ಭಾಷೆಯನ್ನೇ ಬಳಸಬೇಕಾಗುತ್ತದೆ. ಬೇರೆ ಯಾವ ಭಾಷೆ ಇದೆ ಹೇಳಿ. ಇಲ್ಲ, ನೀವು ಅದೇ ಭಾಷೆ ಬಳಸಿ ಎಂದರೆ ಬಳಸುತ್ತೇವೆ. ನಿಮ್ಮ ಪ್ರಕಾರವೇ ಸ್ವಲ್ಪವಾದರೂ ಕಾನ್‌ಷಿಯಸ್ ಇದ್ದರೆ ಹೀಗೆ ಮಾಡುತ್ತಿರಲಿಲ್ಲ. ಏಕೆಂದರೆ ತರಾತುರಿಯಲ್ಲಿ ನಿಮಗೆ ಸೊಸೈಟಿ ಕ್ಯಾಪ್ಚರ್ ಮಾಡಬೇಕಾಗಿತ್ತು. ಆ ದೃಷ್ಟಿಯಲ್ಲಿ ಮಾಡಿದಿರಿ. ಹಿಂದಿನ ಸರ್ಕಾರಗಳನ್ನು ಗೇಲಿ ಮಾಡಿ ನಾವು ನಾಲ್ಕೂವರೆ ವರ್ಷ ಕೆಲಸ ಮಾಡಿದ್ದೇವೆ ಎಂದು ಮಾತನಾಡತಕ್ಕಂಥ ನೈತಿಕ ಹಕ್ಕು ನಿಮಗೆ ಏನು ಇದೆ ? You lost all moral rights, you have no moral right to talk about of your government and yourself,

ಅದಕ್ಕೇ ಅವರು ನೇರವಾಗಿ ರಾಜೀನಾಮೆ ಕೊಟ್ಟು ಮನೆಗೆ ಹೋಗಬೇಕು. ಏಕೆಂದರೆ ಇದು ಒಂದು ಕರಾಳ ಕಾನೂನು. ಏಕೆಂದರೆ ಅವರು ಒಪ್ಪಿಕೊಂಡಿದ್ದಕ್ಕೇ ಮತ್ತೆ ಅವರೇ ತಿದ್ದುಪಡಿ ಮಾಡಿದ್ದಾರೆ. ನಾನು ಪುನಃ ಪುನಃ ಪ್ರೆಸ್ ಮಾಡಿ ಹೇಳುತ್ತೇನೆ. ನೀವು ಇದ್ದಾಗ ನೀವು ಹಿಂದೆ ಏಕೆ ಮಾಡಿದಿರಿ ಎನ್ನುವುದಕ್ಕೆ ನಾನು ಸಮರ್ಥನೆ ಮಾಡಿಕೊಂಡೆ. ನಮಗೆ ಗೇಲಿ ಮಾಡಿದರು. ನಮಗೆ ಶಕ್ತಿ ಇಲ್ಲ ಎನ್ನತಕ್ಕಂಥ ದೃಷ್ಟಿಯಿಂದ ಹೇಳಿದರು. ಶಕ್ತಿ ಇದ್ದವರು, ಯಾರಿಗೆ ಜನ ಬೇಕು ಅವರನ್ನು ಆರಿಸಿದಿರಿ. ನಾನೂ ನೋಡಿದ್ದೇನೆ, ಒಂದು ಕಾಲದಲ್ಲಿ ಸರ್ಕಾರ ಇರಲಿಲ್ಲ ಎಂದರೆ ಅವರು ಎಷ್ಟು ಪವರ್‌ಫುಲ್ ಆಗಿದ್ದರೂ ಕೆಲವು ಸಲ ಆರಿಸಿ ಬರುವು ದಿಲ್ಲ. ಆದರೆ ಸರ್ಕಾರ ಬಂದಾಗ, ಅನುಕೂಲ ವಾತಾವರಣ ಇದ್ದಾಗ ಅವರಿಗೆ ಎಷ್ಟು ಬೇಕೋ ಅಷ್ಟು ತುಂಬಿಕೊಂಡು ಹೋಗುತ್ತಾರೆ. ಎಸ್. ಎಸ್.ಪಾಟೀಲರ ಮಗನೆ ನಾಲ್ಕು ಕಡೆ ಡೈರೆಕ್ಟರ್ ಆಗಿದ್ದಾರೆ ಎಂದು ನಾನು ಕೇಳಿದ್ದೇನೆ. ಇಲ್ಲಿಯವರೆಗೆ ಒಂದು ಕಡೆಯೂ ಡೈರೆಕ್ಟರ್ ಆಗಿರಲಿಲ್ಲ.

ಶ್ರೀ ಹೆಚ್.ಶಿವಪ್ಪ : ಏಕೆ ಆಗಬಾರದು ? ಕೆಪಾಸಿಟಿ ಇದ್ದಾಗ ಆಗುತ್ತಾನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಏಕೆ ಆಗಬಾರದು ಎಂದು ಹೇಳುತ್ತೇನೆ. ನಿಮ್ಮ ಕೆಪಾಸಿಟಿ ಏನೆಂದು ಗೊತ್ತಿದೆ.

ಶ್ರೀ ಹೆಚ್.ಶಿವಪ್ಪ : ಕೆಪ್ಯಾಸಿಟಿ ಇದ್ದಾಗ ಆಗುತ್ತಾರೆ. ಏಕೆ ಈ ಆಪಾದನೆ ?

ಶ್ರೀ ಸಿ.ಎಂ.ಉದಾಸಿ : ನೀವು ಮನಸ್ಸಿಗೆ ಬಂದ ಹಾಗೆ ಮಾತನಾಡುವುದಲ್ಲ. ವೀರಪ್ಪ ಮೊಯ್ಲಿಯವರು ಮುಖ್ಯಮಂತ್ರಿಯಾಗಿದ್ದಾಗ ನೀವು ಸಹಕಾರ ಮಂತ್ರಿಯಾಗಿದ್ದಿರಿ. ಆಗ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಗೆ ತಾವು ಎಲ್ಲರನ್ನೂ ಸೇರಿಸಿರಲಿಲ್ಲವೇ ? ನಾವು ಏಕೆ ಮಾತನಾಡಬಾರದು.?

ಶ್ರೀ ಹೆಚ್.ಶಿವಪ್ಪ : ಆಗುವ ಕೆಪ್ಯಾಸಿಟಿ ಇದ್ದರೆ ಆಗೇ ಆಗುತ್ತಾರೆ .

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಹೇಳಿದ್ದು ಏನೆಂದರೆ ವಾತಾವರಣ ಮುಕ್ತ ಇದ್ದಾಗ, ಅವಕಾಶ ಸಿಕ್ಕಾಗ ಒಂದಲ್ಲ ಹತ್ತು ಜನರು ಸೇರುತ್ತಾರೆ. ಎನ್ನುವುದಕ್ಕೆ ಉದಾಹರಣೆಯಾಗಿ ಅಷ್ಟೇ ನಾನು ಹೇಳಿದೆ. ಎಸ್.ಎಸ್. ಪಾಟೀಲರ ಮಗ ನಾಲ್ಕು ಕಡೆ ಡೈರೆಕ್ಟರ್ ಆಗಿದ್ದಾರೆ ಎಂದು ಹೇಳಿದ್ದು ಕೆಪ್ಯಾಸಿಟಿ ಬಂತು, ಅವಕಾಶ ಬಂತು, ಎಂದರೆ ನಾಲ್ಕು ಕಡೆ ಡೈರೆಕ್ಟರ್ ಆಗುತ್ತಾರೆ. ಒಂದು ಕಾಲದಲ್ಲಿ ಒಬ್ಬ ಮನುಷ್ಯ ಡೈರೆಕ್ಟರ್ ಆಗಬೇಕು ಎಂದು ಎಷ್ಟೇ ಪ್ರಯತ್ನ ಪಟ್ಟರೂ ಆಗುವುದಿಲ್ಲ. ಆದರೆ ವಾತಾವರಣ ಅನುಕೂಲ ಇದ್ದಾಗ ಒಂದಲ್ಲ, ನಾಲ್ಕು ಆಗುತ್ತಾರೆ, ವಾತಾವರಣ ಅನುಕೂಲ ಇರಲಿಲ್ಲ ಎಂದರೆ ಯಾರೂ ಏನೂ ಆಗುವುದಿಲ್ಲ. ಅದಕ್ಕಾಗಿ ನಾನು ಏನು ಹೇಳಿದೆ ಎಂದರೆ, ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡುವಾಗ ಅವಕಾಶ ಇಲ್ಲದೇ ಇರತಕ್ಕಂಥವರಿಗೆ ಅವಕಾಶ ಮಡುವುದಕ್ಕೋಸ್ಕರವೇ ಆ ಕಾನೂನುಗಳನ್ನು ತಂದದ್ದು.

ಶ್ರೀ ಸಿ.ಎಂ. ಉದಾಸಿ: ನಾನು ಏನು ಹೇಳುತ್ತಿದ್ದೇನೆ ಎಂದರೆ, ವೀರಪ್ಪ ಮೊಯ್ಲಿಯವರು ಮುಖ್ಯಮಂತ್ರಿ ಯಾಗಿದ್ದರು, ಇವರು ಸಹಕಾರ ಮಂತ್ರಿಯಾಗಿದ್ದರು. ಆಗ ನಾನು ಎಕ್ಸ್ ಎಂ.ಎಲ್.ಎ ಈಗ ನಾವು ಆರಿಸಿ ಬಂದಿದ್ದೇವೆ . ಕಾನೂನಿನಲ್ಲಿ ಇವರೇ ನಾಮಕರಣವನ್ನು ಮಾಡಿದ್ದು.

ಶ್ರೀ ಕಾಗೋಡು ತಿಮ್ಮಪ್ಪ : ನಾವು ಮಾಡುತ್ತೇವೆ ಎಂದು ಹೇಳಿ ಮಾಡಿದೆವು ಮಾಡುವುದಿಲ್ಲ ಎಂದು ಹೇಳಿ ಮಾಡಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾವು ಮಾಡಿದ ಮೇಲೆ ಅದು ಸರಿ ಇಲ್ಲ ಎಂದು ನೀವು ಹೇಳುತ್ತಿದ್ದಿರಿ ಆದರೆ ಈಗ ನೀವೇ ಅದನ್ನು ಮಾಡಿದ್ದೀರಿ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಸಿ.ಎಂ.ಉದಾಸಿ : ಕಾನೂನಿನಲ್ಲಿ ಅವಕಾಶ ಇದ್ದಾಗ ಮಾಡಲು ಸಾಧ್ಯ ಎಂದು ನೀವು ಹೇಳಲು ಹೊರಟರೆ ನಾವು ಉತ್ತರ ಕೊಡಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾವೂ ಉತ್ತರ ಕೊಡುವುದನ್ನು ಕಲಿತಿದ್ದೇವೆ. ನಿಮಗೂ ಉತ್ತರ ಕೊಡಲು ಗೊತ್ತು. ಟೆಕ್ಸ್‌ಟೈಲ್ ಮಿನಿಸ್ಟರ್‌ರವರ ಕಾನ್‌ಷಿಯನ್ಸೇ ಬೇರೆ, ಅವರ ಕಾನ್‌ಷಿಯನ್ಸೇ ಬೇರೆ. ಏಕೆಂದರೆ ಈಗ ಅವರ ಕಾನ್‌ಷಿಯಸ್ ಪ್ರಕಾರ ಏನು ಹೇಳಿದರು ಎಂದರೆ , ಅವರು ಇನ್ನೂ ಕೂಡ ನಾವು ಒಪ್ಪುವುದಿಲ್ಲ ಎಂದು ಹೇಳಿದರು. ಅದು ಇರಲಿ. ಅದಕ್ಕೆ ದಯವಿಟ್ಟು ಈ ಒಂದು ಕಾನೂನನ್ನು ತರುವಾಗ ಮತ್ತು ಒಮ್ಮತದಿಂದ ಪಾಸ್ ಮಾಡಿಕೊಳ್ಳುವಾಗ ಏನು ಮಾತುಗಳನ್ನು ಕೊಟ್ಟಿದ್ದರು ಆ ಮಾತಿಗೆ ತಕ್ಕಂತೆ ನಡೆದುಕೊಳ್ಳಬೇಕು ಇಲ್ಲದಿದ್ದರೆ ರಾಜೀನಾಮೆ ಕೊಡಬೇಕು ಎನ್ನತಕ್ಕಂಥ ಮಾತನ್ನ ಹೇಳುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಉಪಾಧ್ಯಕ್ಷರೆ ಇಡೀ ರಾಜ್ಯದಲ್ಲಿ ಅಲ್ಲ ಇಡೀ ದೇಶದಲ್ಲಿ ಯಾವುದೇ ಮಂತ್ರಿಮಂಡಲದಲ್ಲಿ ಒಬ್ಬ ಮಂತ್ರಿಯ ಅಭಿಪ್ರಾಯ ಒಂದಾದರೆ ಸರ್ಕಾರದ ಅಭಿಪ್ರಾಯ ಇನ್ನೊಂದು ಎನ್ನುವಂಥ ಉದಾಹರಣೆ ಇರಲಿಕ್ಕಿಲ್ಲ. ಕರ್ನಾಟಕ ರಾಜ್ಯಸರ್ಕಾರದಲ್ಲಿ ಮಾತ್ರ ಇದು ಮೊದಲನೆಯದು ಇರಬಹುದು.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಈಗ ಇಲ್ಲಿ ಮಾನ್ಯ ಸದಸ್ಯರಾದ ಶ್ರೀ ಈಶ್ವರಪ್ಪನವರು ಹೇಳುತ್ತಿರತಕ್ಕಂಥ ಮಾತನ್ನು ಕೇಳಿದಾಗ ನಮ್ಮಲ್ಲಿ ಸಹಕಾರಿ ಸಂಸ್ಥೆಗಳಿಗೆ ನಾಮಕರಣ ಮಾಡುತ್ತಿರತಕ್ಕಂಥ ಪರಿಸ್ಥಿತಿಯಲ್ಲಿ ಉದ್ಭವವಾಗಿರತಕ್ಕಂಥ ಒಂದು ವಿಚಾರದ ಬಗ್ಗೆ ಎತ್ತಿದ್ದು ವೈಯಕ್ತಿಕವಾಗಿ ಬೇಡ ಎಂದು ನಾನು ಹೇಳುತ್ತಿರತಕ್ಕಂಥದ್ದು. ಆದರೆ ನಮ್ಮ ಪಕ್ಷದಲ್ಲಿ ತೀರ್ಮಾನ ಆಗಿ, ಪಕ್ಷದ ಸಭೆಯಲ್ಲಿ ತೀರ್ಮಾನವಾಗಿ, ಸಚಿವಸಂಪುಟಕ್ಕೆ ಬಂದಾಗ ತೀರ್ಮಾನ ಇದೇ ನಾನು ಇದಕ್ಕೆ ಬದ್ಧನಾಗಿದ್ದೇನೆಂದು ಹೇಳಿದರು. ಅದಕ್ಕೆ ಇಲ್ಲಿ ಒಬ್ಬ ಸಚಿವರು ಬೇರೆ, ಇನ್ನು ಸಚಿವಸಂಪುಟ ಬೇರೆ ಎಂದು ಅಲ್ಲ. ಬಿ.ಜೆ.ಪಿ. ಸರ್ಕಾರ ನಡೆಸುತ್ತಿರತಕ್ಕಂಥ ಕೇಂದ್ರ ಸರ್ಕಾರದಲ್ಲಿ ಪ್ರಧಾನಿ ಯವರು ಒಬ್ಬರೇ, ಬಾಕಿ ಇರತಕ್ಕಂಥವರು ಎಲ್ಲಾ ಬೇರೆ ಎಂದು ಹೇಳಿ ಇಡೀ ರಾಷ್ಟ್ರವೇ ಯಾವ ರೀತಿ ಆಗಿದೆಯೆಂದು ನಿಮಗೆ ಗೊತ್ತಿದೆ ಅಲ್ಲವೇ ಈಶ್ವರಪ್ಪನವರೇ ? ನಿಮಗೆ ಗೊತ್ತಿದೆಯಲ್ಲಾ ಏಕೆ ಈ ತರಹ ಹೇಳುತ್ತೀರಿ ?

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಈ ತರಹ ಉದಾಹರಣೆ ಕೊಡುವುದಾದರೆ ನಾಣಯ್ಯನವರನ್ನು ಅವರನ್ನು ನಿಮಾನ್ಸ್‌ಗೆ ಸೇರಿಸಬೇಕೆಂದು ಕಾಣುತ್ತದೆ. ಏಕಂದರೆ ಇಡೀ ದೇಶದ ಎಲ್ಲಾ ಬುದ್ಧಿಜೀವಿಗಳ

---

* ಈ ಪದಗಳನ್ನು ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಜೊತೆಗೆ ನಾಣಯ್ಯನವರೂ ಕೂಡ ಒಬ್ಬರೆಂದು ತಿಳಿದಿದ್ದೆವು. ಇವರ ಅತೀ ಬುದ್ಧಿವಂತಿಕೆಯಿಂದ ಇವರನ್ನು ನಿಮಾನ್ಸ್‌ಗೆ ಸೇರಿಸತಕ್ಕಂಥ ಸ್ಥಿತಿಗೆ ತಂದುಕೊಂಡುಬಿಟ್ಟರು. ಇದನ್ನು ಬಹಳ ನೋವಿನಿಂದ ಹೇಳುತ್ತೇನೆ. ಚರ್ಚೆ ಬೇಡ, ಆದರೆ....

ಶ್ರೀ ಎಂ.ಸಿ.ನಾಣಯ್ಯ: ಏನು ಹೇಳಿದಿರಿ ?

(ಗೊಂದಲ)

ಶ್ರೀ ಎಂ.ಸಿ.ನಾಣಯ್ಯ : ನಿಮ್ಮನ್ನು ಸೇರಿಸಬೇಕಾದುದು, ನನ್ನನ್ನಲ್ಲ.

(ಗೊಂದಲ)

ಶ್ರೀ ಎಂ.ಸಿ.ನಾಣಯ್ಯ : ನೀವು ಇರಬೇಕಾದುದು**. ನಾನಲ್ಲ. ಇಡೀ ದೇಶಕ್ಕೆ ಬೆಂಕಿ ಹಾಕುತ್ತಿರತಕ್ಕಂಥ ಜನ ನೀವು ** ಇರಬೇಕಾಗಿರತಕ್ಕಂಥವರು.

(ಗೊಂದಲ)

ಶ್ರೀ ಎಂ.ಸಿ.ನಾಣಯ್ಯ : ಸಚಿವ ಸಂಪುಟ ಸಭೆಯಲ್ಲಿ ಇರತಕ್ಕಂಥ ನಮ್ಮ ಮಂತ್ರಿಗಳ ಬಗ್ಗೆ ಮಾನ್ಯ ಈಶ್ವರಪ್ಪನವರು ಪ್ರಸ್ತಾಪ ಮಾಡಿದರು. ಒಬ್ಬ ಮಂತ್ರಿ ಒಂದು ತೀರ್ಮಾನ ತೆಗೆದುಕೊಳ್ಳುತ್ತಾರೆ. ಆ ತೀರ್ಮಾನ ಬಹುಶಃ ಅದು ಅವರಿಗೆ ಬೇಕಾಗಬಹುದು. ಆದರೆ ಸಚಿವಸಂಪುಟದಲ್ಲಿ , ಪಕ್ಷದಲ್ಲಿ ಒಂದು ತೀರ್ಮಾನ ತೆಗೆದುಕೊಳ್ಳುತ್ತೇವೆ. ನನ್ನ ವೈಯಕ್ತಿಕ ತೀರ್ಮಾನ ಎಂದು ಅವರು ಹೇಳಿದರು ಅದು ಒಂದು. ಆದರೆ ಪಕ್ಷದಲ್ಲಿ ಮತ್ತು ಸಚಿವಸಂಪುಟ ಸಭೆಯಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡಾಗ ನಾನು ಅದಕ್ಕೆ ಬದ್ಧನಾಗಿದ್ದೇನೆ ಎಂದು ಸಂಬಂಧಪಟ್ಟ ಮಂತ್ರಿಗಳು ಹೇಳಿದರು. ಇದನ್ನು ಮಾನ್ಯ ಸದಸ್ಯರು ವಿಪರ್ಯಾಸದ ಬಗ್ಗೆ ಹೇಳಿದರು ಅಂದರೆ ಸಚಿವರು ಪ್ರತ್ಯೇಕ ಇದ್ದರೆ ಸಚಿವಸಂಪುಟವೇ ಬೇರೆ ಎಂದು ಹೇಳುತ್ತಿರತಕ್ಕಂಥ ಮಾತನ್ನು ಆಡಿದರು. ನಾನು ಅದಕ್ಕೆ ಒಂದು ಉದಾಹರಣೆಯನ್ನು ಕೊಟ್ಟೆ. ಬಾಕಿ ಏನೂ ಹೇಳಲಿಲ್ಲ. ಉದಾಹರಣೆ ಏನು ಕೊಟ್ಟೆ ಎಂದರೆ .....

(ಗೊಂದಲ)

ಶ್ರೀ ಎಂ.ಸಿ.ನಾಣಯ್ಯ : ಮಾನ್ಯ ಈಶ್ವರಪ್ಪನವರು ಹೇಳಿದ್ದಕ್ಕೆ ನಾನು ಉತ್ತರ ಕೊಡುತ್ತೇನೆ. ನಮ್ಮ ಪಕ್ಷದಲ್ಲಿ ಒಂದು ತೀರ್ಮಾನವಾಗಿದೆ. ಆ ತೀರ್ಮಾನಕ್ಕೆ ಅನುಗುಣವಾಗಿ ಸಚಿವಸಂಪುಟ ಒಂದು ತೀರ್ಮಾನ ತೆಗೆದುಕೊಂಡಿದೆ. ಹಾಗೆ ತೆಗೆದುಕೊಂಡ ತೀರ್ಮಾನಕ್ಕೆ ನಾವು ಬಾಧ್ಯಸ್ಥರಾಗಿದ್ದೇವೆಂದು ಹೇಳಿದೆವು. ಇವತ್ತು ಕೆಲವು ವಿಚಾರಗಳನ್ನು ಹೇಳುತ್ತೇನೆ. ಭಾರತೀಯ ಜನತಾ ಪಕ್ಷದಲ್ಲಿ ಕೇಂದ್ರ ಸರ್ಕಾರದಲ್ಲಿ ಒಂದು ತೀರ್ಮಾನ ತೆಗೆದುಕೊಂಡರು, ಆ ಪಕ್ಷದವರೇ ಒಂದು ತೀರ್ಮಾನ ತೆಗೆದುಕೊಂಡಾಗ ಅವರ ಅಂಗಪಕ್ಷದವರು ಇನ್ನೊಂದು ತೀರ್ಮಾನ ತೆಗೆದುಕೊಂಡರು. ಅದು ಮೊನ್ನೆ ಮುಖವಾಡ ಎನ್ನತಕ್ಕಂಥ ಪತ್ರಿಕೆಯಲ್ಲಿ ಬಂದಿದೆ. ಕೇಂದ್ರ ಸರ್ಕಾರ ಒಪ್ಪುವುದಿಲ್ಲವೆಂದು ಹೇಳಿದರು.

ಶ್ರೀ **ಕೆ.ಎಸ್.ಈಶ್ವರಪ್ಪ** : ಮುಖವಾಣಿ ಪತ್ರಿಕೆಯಲ್ಲಿ ಬಂದಿರುವ ವಿಚಾರ ಈಗ ಬೇಡ. ಕ್ಯಾಬಿನೆಟ್‌ನಲ್ಲಿ ಪ್ರಧಾನಿಯವರು ತೆಗೆದುಕೊಂಡಿರತಕ್ಕಂಥ ತೀರ್ಮಾನವನ್ನು ಯಾರಾದರೂ ಒಬ್ಬರು

** ಈ ಪದಗಳನ್ನು ಉಪಾಧ್ಯಕ್ಷರ ಆದೇಶದ ಮೇರೆಗೆ ಕಡಿತದಿಂದ ತೆಗೆದುಹಾಕಲಾಗಿದೆ.

ಸಚಿವರು ಅದಕ್ಕೆ ವಿರೋಧ ಮಾಡಿ ಇನ್ನೂ ಆ ಕ್ಯಾಬಿನೆಟ್‌ನಲ್ಲಿ ಇಲ್ಲಿಯತನಕ ಬದುಕಿದ್ದಾರಾ ? ಹೇಳಿ. ಆ ರೀತಿ ಇದ್ದರೆ ಅದಕ್ಕೆ ಉದಾ ಹರಣೆ ಕೊಡಿ ಅಂಗಪಕ್ಷ ಅಥವಾ ಬೇರೆ ಪಕ್ಷ ಇಲ್ಲಿ ಬೇಡ.

(ಗೊಂದಲ)

ಶ್ರೀ ಎಂ.ಸಿ.ನಾಣಯ್ಯ : ನಿಮ್ಮ ಭಾರತೀಯ ಜನತಾ ಪಕ್ಷ ಇವತ್ತು ಆಡಳಿತವನ್ನು ನಡೆಸುತ್ತಿರತಕ್ಕಂಥ ಪ್ರಮುಖ ಪಕ್ಷ. ಆದರೆ ಆ ಪಕ್ಷ ಆಡಳಿತವನ್ನು ನಡೆಸುತ್ತಿರತಕ್ಕಂಥದ್ದಕ್ಕೆ ಅದಕ್ಕೆ ನೇರವಾಗಿ ಮಾರ್ಗದರ್ಶನ ಕೊಡಲಿಕ್ಕೆ ಇನ್ನೊಂದು ಅಂಗಪಕ್ಷವಿದೆ. ಇಲ್ಲ ಎಂದು ಹೇಳಲಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಕ್ಯಾಬಿನೆಟ್ ಬಗ್ಗೆ ಹೇಳಿರಿ ಎಂದರೆ ಅಂಗಪಕ್ಷದ ಬಗ್ಗೆ ಹೇಳುತ್ತಿದ್ದೀರಲ್ಲಾ ಕ್ಯಾಬಿನೆಟ್ ಬಗ್ಗೆ ಹೇಳಿರಿ. ಅಂಗಪಕ್ಷಗಳು ನೂರಾರು ಇರುತ್ತವೆ. ಅದು ಇಲ್ಲಿ ಬೇಕಿಲ್ಲ.

(ಗೊಂದಲ)

ಶ್ರೀ ಎಂ.ಸಿ.ನಾಣಯ್ಯ : ನೀವು ಮಾತನಾಡುವಾಗ ನಾವು ಕೇಳುತ್ತೇವೆ. ನಾವು ಮಾತನಾಡುವಾಗ ನೀವು ಕೇಳಿ. ನಂತರ ಉತ್ತರ ಹೇಳಬಹುದು. ಏಕೆಂದರೆ ಚರ್ಚೆ ಆರೋಗ್ಯಕರವಾಗಿ ಆಗಲೇಬೇಕು. ನಾನು ಮಾತನಾಡಿ ಆದ ಮೇಲೆ ತಾವು ಮಾತನಾಡಿ. ಒಂದು ಪಕ್ಷದಲ್ಲಿರತಕ್ಕಂಥ ಅವರ ಒಂದು ಪ್ರಮುಖ ಪತ್ರಿಕೆಯಲ್ಲಿ ಪಾಕಿಸ್ಥಾನದ ಮೇಲೆ ಆಟಾಮಿಕ್ ಬಾಂಬ್ ಹಾಕಬೇಕಂದು ಹೇಳಿದರು. ಬಿ.ಜೆ.ಪಿ. ಪ್ರಮುಖ ಪಕ್ಷವಾಗಿರತಕ್ಕಂಥ ಆಡಳಿತ ಪಕ್ಷ. They said " no, that is not the intention of our Government ".

ಕೇಂದ್ರ ಸರ್ಕಾರದಲ್ಲಿ ಟೆಲಿಕಾಮ್ ಡಿಪಾರ್ಟ್‌ಮೆಂಟ್‌ಗೆ ಸೇರಿರತಕ್ಕಂಥ ಒಬ್ಬ ಮಂತ್ರಿಯವರು ಮೊಬೈಲ್ ಫೋನ್ಸ್ ಆಪರೇಟ್ ಮಾಡುತ್ತಿರತಕ್ಕಂಥದ್ದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಂಡರು. ಮೊಬೈಲ್ ಫೋನ್ಸ್‌ನವರು ಸರ್ಕಾರಕ್ಕೆ ನಾಲ್ಕು ಸಾವಿರ ಕೋಟಿ ರೂಪಾಯಿಗಳನ್ನು ಕೊಡಬೇಕಾಗಿತ್ತು.

By way of rent

ಕೊನೆಗೆ ಮೊಬೈಲ್ ಫೋನ್ ಇಟ್ಟುಕೊಂಡು ಇಡೀ ಪ್ರಪಂಚದ ಉದ್ದಗಲಕ್ಕೆ ನೀವು ಏರ್ ಸ್ಪೇಸ್‌ನ್ನು ಉಪಯೋಗಿಸಿಕೊಳ್ಳುವುದು, ಸರ್ಕಾರಕ್ಕೆ ಕೊಡಬೇಕಾಗಿರುವ ಕರ ಕೊಡುವುದಿಲ್ಲ ಸರ್ಕಾರಕ್ಕೆ ಕೊಡಬೇಕಾಗಿರುವ ಕರ ಕೊಡಿ ಇಲ್ಲದಿದ್ದರೆ ಆ ಕಂಪನಿ ಮುಚ್ಚಿ ಎಂದು ದಿಟ್ಟತನದಿಂದ ಆ ಮಂತ್ರಿಯವರು ಹೇಳಿದರು. It was a fine decision that the Minister had taken .

ಕಡೆಗೆ ಏನಾಯಿತು ? ಆ ಮಂತ್ರಿ ತೆಗೆದುಕೊಂಡಿರತಕ್ಕಂಥ ತೀರ್ಮಾನವನ್ನು ನೋಡಿ ಸಚಿವಸಂಪುಟದಲ್ಲಿ ಇರತಕ್ಕಂತ ಇತರ ಮಂತ್ರಿಗಳಿಗೆ ಸರಿಹೋಗಲಿಲ್ಲ. ಇಲ್ಲ, ಈ ತರಹ ಮಾಡಕೂಡದು ತೊಂದರೆ ಆಗುತ್ತದೆ ಎಂದು ಹೇಳಿದರು. ಆವಾಗ ಏನು ಮಾಡಬೇಕು ? ಹಾಗಾಗಿ ಆ ಮಂತ್ರಿಯ ಖಾತೆಯನ್ನು ಬದಲಾವಣೆ ಮಾಡಿ ಇನ್ನೊಬ್ಬ ಮಂತ್ರಿಯನ್ನು ಆ ಖಾತೆಗೆ ನೇಮಕ ಮಾಡಿದರು. ಭಿನ್ನಾಭಿಪ್ರಾಯಗಳು ಬರತಕ್ಕಂಥದ್ದಕ್ಕೆ ನಾನು ಇದನ್ನು ಹೇಳಿದೆ. ನಾಲ್ಕು ಸಾವಿರ ಕೋಟಿ ರೂಪಾಯಿಗಳು ಸರ್ಕಾರಕ್ಕೆ ಬರುತ್ತಿರತಕ್ಕಂಥ ಹಣವನ್ನು ವಸೂಲಾತಿಯ ಮೇಲೆ ಕ್ರಮ ಕೈಗೊಂಡಿರತಕ್ಕಂಥ ಮಂತ್ರಿಯ ಖಾತೆಯನ್ನು ಬದಲಾವಣೆ ಮಾಡಿ ಆಯಿತು. ಒಂದು ತೀರ್ಮಾನವನ್ನು ತೆಗೆದುಕೊಂಡಿರತಕ್ಕಂಥದ್ದು

ಕೇಂದ್ರ ಸರ್ಕಾರ. ಅಂದರೆ ಆಡಳಿತದಲ್ಲಿ ಮಂತ್ರಿಗಳಲ್ಲಿ ಬರುತ್ತಿರತಕ್ಕಂಥ ಈ ತರಹದ ಭಿನ್ನಾಭಿಪ್ರಾಯಗಳು ಸಹಜ. ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಅನುಗುಣವಾಗಿ ಇರತಕ್ಕಂಥ ಸಂದರ್ಭದಲ್ಲಿ ಬೇಡ. ಇದರಲ್ಲಿ ಗೆದ್ದು ಬಂದಿರತಕ್ಕಂಥ ಸದಸ್ಯರ ಮಾತು ಎಂದು ಹೇಳುತ್ತಿರತಕ್ಕಂಥ ಒಂದು ವೈಯಕ್ತಿಕವಾದ ಅಭಿಪ್ರಾಯವನ್ನು ಹೇಳಿದರು. ಆದರೆ ಹತ್ತಾರು ವರ್ಷಗಳಲ್ಲಿ ಬಂದಿರತಕ್ಕಂಥ ಒಂದು ಪದ್ಧತಿಯಲ್ಲಿ ಮಾನ್ಯ ಖರ್ಗೆಯವರು ಹೇಳಿದರು, ನಿಜ, ಬಹಳಷ್ಟು ಜನ ಹಿಂದುಳಿದ ವರ್ಗಕ್ಕೆ ಸೇರಿರ ತಕ್ಕಂಥವರು, ಪರಿಶಿಷ್ಟ ಜಾತಿಯವರು ಮಹಿಳೆಯರು ನೇರವಾಗಿ ಗೆದ್ದು ಬರಲಿಕ್ಕೆ ಅವಕಾಶವಿಲ್ಲ. ಕಳೆದ ಅಧಿವೇಶನದಲ್ಲಿ ಈ ಒಂದು ಮಸೂದೆಗೆ ತಿದ್ದುಪಡಿಯನ್ನು ತರುವಾಗ ಅದು ಕಡೆಯ ದಿನಸವಾಗಿತ್ತು. ಅವತ್ತು ಈ ಮಸೂದೆಯನ್ನು ಅಂಗೀಕಾರ ಮಾಡಬೇಕೇ ಅಥವಾ ಬೇಡವೇ ಎನ್ನತಕ್ಕಂಥದ್ದು ನಿರ್ಮಾಣವಾಯಿತು. ಆ ದಿನ ಶ್ರೀಮಾನ್ ಖರ್ಗೆಯವರು ಇರಲಿಲ್ಲ, ಅವರು ದೆಹಲಿಗೆ ಹೋಗಿದ್ದರು. ಅವರು ಹೋಗಲಿಕ್ಕೆ ಒಂದು ದಿವಸ ಮುಂಚೆ ಶ್ರೀಮಾನ್ ತಿಮ್ಮಪ್ಪನವರ ಜೊತೆ ಮಾತನಾಡಿ ಹೋಗಿದ್ದರು. ಕಡೆಗೆ ನಿಮ್ಮೆಲ್ಲರ ಜೊತೆ ಮಾತನಾಡಿ ಆದಮೇಲೆ ಈ ಒಂದು ಕಾಯಿದೆಯನ್ನು ನಾವು ಅವತ್ತು ಅಂಗೀಕಾರ ಮಾಡಬೇಕು, ಅದರಲ್ಲಿ ಬಹಳ ಒಳ್ಳೆಯ ತಿದ್ದುಪಡಿಯನ್ನು ಕೂಡ ತಂದಿದ್ದೇವೆ. ಆಗ ತಿದ್ದುಪಡಿ ತಂದಿರುವಂಥದ್ದು 53ಎ ಮತ್ತು 29ಸಿ ಆಗಿರುತ್ತದೆ. ಇಡೀ ಆಡಳಿತ ಮಂಡಳಿಯಲ್ಲಿರತಕ್ಕಂಥ ಒಟ್ಟು ಸದಸ್ಯರಲ್ಲಿ ಮೂರನೇ ಒಂದರಷ್ಟು ಸದಸ್ಯರನ್ನು ನಾಮಕರಣ ಮಾಡಬಹುದೆಂದು 53ಎ ಇದರಲ್ಲಿ ಸಲಹೆ ಮಾಡಲಾಗಿತ್ತು. ಅದನ್ನು ಕಿತ್ತು ಹಾಕಿದೆವು. ಆದ್ದರಿಂದ ಆ ಸಂದರ್ಭದಲ್ಲಿ ಚರ್ಚೆ ಆದ ಮೇಲೆ ಬಹಳ ಮಹತ್ತರವಾದ ತಿದ್ದುಪಡಿಯನ್ನು ತಂದಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ನಮಗೆ ಸ್ವಲ್ಪ ತೊಂದರೆ ಆಗಿದೆ. ಚರ್ಚೆಯ ಮಧ್ಯೆ ನಿಮಾನ್ಸ್ ವಿಚಾರ ಬಂದಿದೆ. ನಿಮಾನ್ಸ್ ಇದು ಇಡೀ ಏಷ್ಯಾ ಖಂಡದಲ್ಲಿಯೇ ಅತ್ಯುನ್ನತ ಪ್ರತಿಷ್ಠಿತ ಸಂಸ್ಥೆಯಾಗಿದೆ. ಅದನ್ನು ಈ ಚರ್ಚೆ ಮಧ್ಯೆ ತಂದು ಅದರ ಹೆಸರು ಹಾಳು ಮಾಡುವುದು ಬೇಡ. ಏಕೆಂದರೆ ನಿಮಾನ್ಸ್‌ಗೆ ಬರೀ ಹುಚ್ಚರು ಸೇರುತ್ತಾರೆಂದು ಹೇಳಿ ಶ್ರೀ ಈಶ್ವರಪ್ಪನವರಿಗೆ ಅಥವಾ ಶ್ರೀ ನಾಣಯ್ಯನವರಿಗೆ ಅಭಿಪ್ರಾಯ ಇದ್ದರೆ ಅದು ಸರಿಯಲ್ಲ. ಅಲ್ಲಿ ಆಕ್ಸಿಡೆಂಟ್ ಕೇಸಸ್, ನ್ಯೂರೋ ಕೇಸಸ್‌ನವರೂ ಕೂಡ ಸೇರುತ್ತಾರೆ. ಆದ್ದರಿಂದ ಅದು ಬರೀ ಹುಚ್ಚರ ಆಸ್ಪತ್ರೆ ಎಂದು ಹೇಳುವಂಥ ಧಾಟಿಯಲ್ಲಿ, ಶ್ರೀ ಈಶ್ವರಪ್ಪನವರು ಹೇಳಿಬಿಟ್ಟಿದ್ದಾರೆ. ಇದು ಬಹಳ ಅನಾಹುತ ಆಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಗುಣಮುಖ ಆದಂಥವರನ್ನು ಮಾತ್ರ ಹುಚ್ಚಾಸ್ಪತ್ರೆಗೆ ಸೇರಿಸುತ್ತಾರೆ. ಗುಣಮುಖ ಆಗಲಾರದಂಥವರನ್ನೆಲ್ಲಾ ಹೊರಗಡೆಗೆ ಇಟ್ಟಿದ್ದಾರೆಂದು ಹೇಳಿದ್ದಾರೆ.

4-20 ಪಿ.ಎಂ.

ಶ್ರೀ ವಾಟಾಳ್ ನಾಗರಾಜ್ : ಹುಚ್ಚಾಸ್ಪತ್ರೆಗೆ ಸೇರಬೇಕೆಂದರೆ ಈ ಸದನದಲ್ಲಿ ಹುಚ್ಚರಿರುವುದಕ್ಕೆ ಸಾಧ್ಯವಿಲ್ಲ. ಸದನದ ನಿಯಮಾವಳಿ ಪ್ರಕಾರ, ಹುಚ್ಚರಾದವರು ಚುನಾವಣೆಗೆ ನಿಲ್ಲುವ ಹಾಗೂ ಇಲ್ಲ ಮತ್ತು ಸದನಕ್ಕೆ ಬರುವ ಹಾಗೂ ಇಲ್ಲ. ಹುಚ್ಚರಾದರೆ ಸದಸ್ಯರ ಸದಸ್ಯತ್ವವನ್ನೇ ರದ್ದು ಮಾಡಬಹುದು.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :- ಮಾನ್ಯ ಈಶ್ವರಪ್ಪ ನವರು ಆ ತರಹ ಮಾತನಾಡುವವರಲ್ಲ. ಸಜ್ಜನರು, ಸಂಸದೀಯ ಭಾಷೆ ಬಿಟ್ಟು ಬೇರೆ

ಯಾವ ಭಾಷೆಯನ್ನೂ ಬಳಸುವುದಿಲ್ಲ. ಇವತ್ತು ಏಕೋ ಬಳಸಿದ್ದಾರೆ, ನಾನು ಉತ್ತರ ಕೊಟ್ಟೆ ಅಷ್ಟೆ. ಆ ಎರಡೂ ಉತ್ತರಗಳನ್ನೂ ಕಡತದಿಂದ ತೆಗೆಯಲಿ. ಮಾನ್ಯ ಉಪಾಧ್ಯಕ್ಷರು ತೆಗೆಯಬಹುದು.

ಉಪಾಧ್ಯಕ್ಷರು :- (ಆ ಪದಗಳನ್ನು ತೆಗೆದು ಹಾಕಲಾಗಿದೆ)

ಶ್ರೀ ಸಿ.ಆರ್. ಸಗೀರ್ ಅಹಮದ್ :- ಇವರು ಕಳುಹಿಸುವುದಕ್ಕೂ ರೆಡಿ ಇಲ್ಲ, ಅವರು ಹೋಗುವುದಕ್ಕೂ ರೆಡಿ ಇಲ್ಲ. ಅದೇ ನಮಗೆ ಸಂತೋಷ.

ಶ್ರೀ ಎಂ.ಸಿ. ನಾಣಯ್ಯ:- ಶ್ರೀ ವೀರಪ್ಪ ಮೊಯ್ಲಿಯವರು, ಪ್ರಪಂಚದಲ್ಲೇ ಅದೊಂದು ಪ್ರತಿಷ್ಠಿತ ಸಂಸ್ಥೆ ಎಂದು ಹೇಳಿದರು. ನಾನು, ಈಶ್ವರಪ್ಪನವರು ಆ ಸಂಸ್ಥೆಗೆ ಯಾರು ಹೋಗಬೇಕೆಂದು ಅವರನ್ನು ಕಳುಹಿಸಲು ಇರುವವರು, ಹೋಗಲಿರುವವರಲ್ಲ. ನಾವು ಕಳೆದ ಸಂದರ್ಭದಲ್ಲಿ ಈ ಕಾಯ್ದೆಯನ್ನು ತಂದಾಗ, ಇದರ ಐತಿಹಾಸಿಕ ಘಟನೆಯನ್ನು ಹೇಳುತ್ತಿದ್ದೇನೆ, ಶ್ರೀ ಖರ್ಗೆಯವರು ಅಂದು ಇರಲಿಲ್ಲ, ಶ್ರೀ ಕಾಗೋಡು ತಿಮ್ಮಪ್ಪನವರು ಇದ್ದರು. ನಾಮಕರಣವನ್ನು ನೀವು ಮಾಡುವುದಾದರೆ, ಪರಿಶಿಷ್ಟರಿಗೆ ಮಹಿಳೆಗೆ, ಸಾಮಾನ್ಯ ವರ್ಗಕ್ಕೂ ಕೊಡಬೇಕೆಂಬ ಚರ್ಚೆಯಾಯಿತು. ಅವತ್ತು ಮೂರು ಜನ ನಾಮಕರಣ ಸದಸ್ಯರನ್ನು ಮಾಡಲು ತಿದ್ದುಪಡಿಯನ್ನು ಆಗಿಂದಾಗ್ಗೆ ಸದನದಲ್ಲಿ ತಂದೆವು. ಆ ಸಂದರ್ಭದಲ್ಲಿ ಅವತ್ತು ಯಾವ ಒಂದು ಮೂಲ ಕಾಯ್ದೆಯಲ್ಲಿ ನಾಮಕರಣ ಮಾಡಲು ಅವಕಾಶವಿರಲಿಲ್ಲ, ಅದಕ್ಕೆ ಅವಕಾಶವನ್ನು ಕಲ್ಪಿಸಿದಾಗ ಸೆಕ್ಷನ್, 28 (ಎ)ಗೆ ತಿದ್ದುಪಡಿಯನ್ನು ತಂದೆವು. ಎಲೆಕ್ಟೆಡ್ ಮೆಂಬರ್ಸ್ ಎಂದು ಮಾತ್ರ ಇತ್ತು. ನಾಮಕರಣ ಮಾಡಿರುವ ಮೂರ ಜನ ಸದಸ್ಯರನ್ನು ಮೂಲ ಕಾಯ್ದೆಗೆ ಸೇರಿಸಿಯಾಯಿತು. ನಂತರ ಎಲಿಕ್ಟೆಡ್ ಮೆಂಬರ್ಸ್ ಎಂದು ಹೇಳುತ್ತಿರುವುದಕ್ಕೆ ತಿದ್ದುಪಡಿ ತರಲಿಲ್ಲ. ಈ ಸದನದಲ್ಲಿ ಅದು ಪಾಸ್ ಆಯಿತು. ನಂತರ, ಅದು ಮೇಲ್ಮನೆಗೆ ಹೋದಾಗ, ಅಲ್ಲಿ ತಿದ್ದುಪಡಿ ತರಬೇಕೆಂದು ಹೊರಟಾಗ ಪುನಃ ಕೆಳಗಿನ ಮನೆಗೆ ಬರಬೇಕೆಂದಾಗ, ಈ ಸದನ ಅನಿರ್ದಿಷ್ಟಾವಧಿಗೆ ಮುಂದೂಡಲ್ಪಟ್ಟಿತು. ಈ ಸಂದರ್ಭದಲ್ಲಿ ಆ ಮೂರು ಜನರ ನಾಮಕರಣವಾದ ಸದಸ್ಯರು ನಾಮಕರಣವಾದರು. ಕಮಿಟಿ ಆಫ್ ಮ್ಯಾನೇಜ್‌ಮೆಂಟ್ ಎಂದು ಹೇಳುತ್ತಿರುವುದಕ್ಕೂ, ಎಲೆಕ್ಟೆಡ್ ಮೆಂಬರ್ಸ್ ಎಂದು ಹೇಳುತ್ತಿರುವುದಕ್ಕೂ ವ್ಯತ್ಯಾಸವಾಯಿತು. ಆ ಸಂದರ್ಭದಲ್ಲಿ ಎಲಿಕ್ಟೆಡ್ ಮೆಂಬರ್ಸ್ ಯಾರಿದ್ದಾರೆ, ಆ ಪದವನ್ನು ತೆಗೆದು ನಾಮಕರಣ ಮಾಡಿದ ಪರಿಶಿಷ್ಟ ಜಾತಿಯ ಸದಸ್ಯರ, ಹಿಂದುಳಿದ ವರ್ಗದ ಒಬ್ಬ ಸದಸ್ಯ, ಮಹಿಳಾ ಸದಸ್ಯರಿಗೆ ಮತದಾನದ ಹಕ್ಕು ಕೊಡಬಾರದೇ ? ಸಾಮಾಜಿಕ ನ್ಯಾಯವೆಂದು ಒಪ್ಪಿಯಾದ ಮೇಲೆ, ನಾಮಕರಣ ಮಾಡಿಯಾದ ಮೇಲೆ, ಅವರಿಗೆ ಮತದಾನದ ಹಕ್ಕು ಕೊಟ್ಟರೆ ತಪ್ಪೇ ?

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ :- ಎಷ್ಟು ಜನ ಹರಿಜನ-ಗಿರಿಜನರಿಗೆ ಅಧ್ಯಕ್ಷ ಸ್ಥಾನ ಕೊಟ್ಟಿದ್ದೀರಿ, ಎಷ್ಟು ಜನ ಮಹಿಳೆಯರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ ಎಂಬ ಬಗ್ಗೆ ಅಂಕಿ-ಅಂಶ ಕೊಡಿ.

ಶ್ರೀ ಎಂ.ಸಿ. ನಾಣಯ್ಯ:- ಅವರು ಹೇಳಿರುವುದು ಇನ್ನೊಂದು ಪಾಯಿಂಟ್. ಒಂದು ಭಾಗ ಯಾವುದು ಎಂದರೆ, ನೀವು ನಾಮಕರಣ ಮಾಡಬೇಕು, ಸಾಮಾಜಿಕ ನ್ಯಾಯದ ಪ್ರಕಾರ ಎಂದು ಹೇಳುತ್ತೀರಿ. ಪರಿಶಿಷ್ಟ ಜಾತಿ ಸದಸ್ಯರನ್ನು, ಮಹಿಳೆಯನ್ನು ನಾಮಕರಣ ಮಾಡಿ, ಹಿಂದುಳಿದ ವರ್ಗದ ಸದಸ್ಯರನ್ನು ನಾಮಕರಣ ಮಾಡಿ ನಂತರ, ಅವರನ್ನು ಸುಮ್ಮನೆ ಕೂರಿಸಿ. ಮತದಾನದ ಹಕ್ಕು ಕೊಡಬೇಡಿ.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ :- ಈಗಾಗಲೇ ರಿಸರ್ವೇಷನ್ ಇದೆ. ಮಹಿಳೆ ಮತ್ತು ಪರಿಶಿಷ್ಟ ಜಾತಿ

ವ್ಯಕ್ತಿ ಎಲೆಕ್ಟ್ ಆಗಿದ್ದು, ಅವರಿಗೂ ವೋಟಿಂಗ್ ರೈಟ್ಸ್ ಕೊಟ್ಟಿದ್ದೀರಲ್ಲ.

ಅಧ್ಯಕ್ಷರು :(ಶ್ರೀ ರಮೇಶ್‌ಕುಮಾರ್)ರವರು ಪೀಠವನ್ನಲಂಕರಿಸಿದರು)

ಶ್ರೀ ಎಂ.ಸಿ. ನಾಣಯ್ಯ :- ನೀವು ಬಹಳ ಹಾರಾಡುತ್ತಿದ್ದೀರಿ. ನಾಳೆ ನೀವು ಅಧಿಕಾರಕ್ಕೆ ಬಂದರೆ, ಬರುವುದಿಲ್ಲ, ಹಾಗೊಂದು ವೇಳೆ ಬಂದರೆ ಕಾನೂನು ಹೊರಟುಹೋಗುತ್ತದೆ. ಯಾವುದೂ ಉಳಿಯುವುದಿಲ್ಲ. ನಮ್ಮ ಕಾಲದಲ್ಲಿ ಕಾನೂನಾದರೂ ಉಳಿದುಕೊಂಡಿದೆ.

ಶ್ರೀ ವಿ. ಮುನಿಯಪ್ಪ :- ಚುನಾವಣೆ ನಡೆಸಿ, ಚುನಾವಣೆಯಲ್ಲಿ ನಿಮ್ಮ ಪಕ್ಷಕ್ಕೆ ಬಹುಮತ ಬರಲಿಲ್ಲವೆಂದು ಮನವರಿಕೆಯಾದ ಮೇಲೆ, ನಾಮಿನೇಷನ್ ತಂದಿರುವುದು ಬಹಳ ದುರಾದೃಷ್ಟ. ಅಕ್ರಮವಾಗಿ ಈ ತರಹ ನಾಮಿನೇಷನ್ ಮುಖಾಂತರ ಅಧಿಕಾರ ಪಡೆಯುವುದು, ಸ್ವಾರ್ಥಕ್ಕೋಸ್ಕರ ತಂದಂಥ ನಾಮಿನೇಷನ್ ಇದು. ರಾಜಕೀಯವಾಗಿ ದುರುಪಯೋಗ ಮಾಡಿಕೊಳ್ಳುವಂಥದ್ದು ಇದು. ನೀವು ಹೇಳುವ ಸಾಮಾಜಿಕ ನ್ಯಾಯಕ್ಕೋಸ್ಕರ ತಂದಂಥದ್ದಲ್ಲ ಇದು.

ಶ್ರೀ ಎಂ.ಸಿ. ನಾಣಯ್ಯ :- ನಮ್ಮ ರಾಜ್ಯದಲ್ಲಿ 28 ಸಾವಿರ ಸಹಕಾರ ಸಂಘ-ಸಂಸ್ಥೆಗಳಿದ್ದು, ಅದರಲ್ಲಿ ಕೇವಲ 4 ಸಾವಿರ ಸಂಸ್ಥೆಗಳಲ್ಲಿ ಮಾತ್ರ ಸರ್ಕಾರದ ಪಾಲು ಬಂಡವಾಳವಿದೆ.

ಅಧ್ಯಕ್ಷರು :- ವಿಚಾರವೇನೋ ಗೊತ್ತಾಗಲಿಲ್ಲ.

ಶ್ರೀ ಎಂ.ಸಿ. ನಾಣಯ್ಯ :- ನಾಮಕರಣ ಮಾಡಿದ ಸದಸ್ಯರಿಗೆ ಮತದಾನದ ಹಕ್ಕು ಕೊಟ್ಟ ಬಗ್ಗೆ ಚರ್ಚೆ. ಅವರು ಕೇಳಿರುವ ಪ್ರಶ್ನೆಗಳಿಗೆ ಮತ್ತು ಸಂಶಯಗಳಿಗೆ ಪರಿಹಾರ ಮಾಡಬೇಕಲ್ಲವೇ? ಯಾವುದನ್ನು ಖರ್ಗೆ ಬಯಸಿದ್ದರು, ಯಾವುದನ್ನು ಖರ್ಗೆ ಮಾಡಬೇಕೆಂದು ಹೇಳಿದ್ದರು, ಯಾವುದನ್ನು ನಾನು ಬಯಸಿದ್ದೆನೋ ಅದನ್ನು ಮಾಡಿಯಾಯಿತು. ಅವರಿಗೆ ನಾಮಕರಣ ಮಾಡಿ, ಮತದಾನದ ಹಕ್ಕು ಕೊಟ್ಟಾಯಿತು. ಈಗ ಯಾವುದಕ್ಕೋಸ್ಕರ ಬಳಸಿಕೊಂಡಿದ್ದೀರಿ ಎಂದು ಕೇಳಿದರೆ ಏನು ಹೇಳುವುದು?

ಶ್ರೀ ಕೆ.ಎಸ್. ಈಶ್ವರಪ್ಪ :- ನಾನು ಮಾತನಾಡುತ್ತೇನೆ, ನಂತರ, ತಾವು ಉತ್ತರಿಸಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ :- ಇವರಿಗೆ ಮಾತನಾಡುವ ಅಧಿಕಾರವೇ ಇಲ್ಲ. ಆ ಖಾತೆಯ ಮಂತ್ರಿಗಳಿದ್ದಾರೆ. ಈ ವಿಚಾರದಲ್ಲಿ ಅವರು ತಮ್ಮ ಅಭಿಪ್ರಾಯ ಬೇರೆಯೇ ಇದೆ ಎಂದು ಹೇಳುತ್ತಿರಬೇಕಾದರೆ, ಇವರು ಮಾತನಾಡುವುದಕ್ಕೆ ಇವರಿಗೆ ಯಾರು ಅಧಿಕಾರ ಕೊಟ್ಟಿದ್ದು ?

ಶ್ರೀ ಎಂ.ಸಿ. ನಾಣಯ್ಯ :- ನಾನೂ ಮಂತ್ರಿಯಲ್ಲವೇ?

ಅಧ್ಯಕ್ಷರು :- ತಾವು ಮುಂದೆ ಸಚಿವಸಂಪುಟಕ್ಕೆ ಸೇರಬೇಕಾದವರು. ಅದು ಕಲೆಕ್ಟೀವ್ ರೆಸ್ಪಾನ್ಸಿಬಿಲಿಟಿ. ನಾನು ಸುಮ್ಮನೆ ಚೇಷ್ಟೆ ಮಾಡುವುದಕ್ಕೆ ಹಾಗೆ ಹೇಳಿದೆ ಅಷ್ಟೆ.

ಶ್ರೀ ಕೆ.ಎಸ್. ಈಶ್ವರಪ್ಪ :- ತಾವು ಬ್ರಾಹ್ಮಣರು, ತಮ್ಮ ಬಾಯಿಯ ಹರಕೆಯಂತೆ ನಾನು ಸಚಿವ-ಸಂಪುಟಕ್ಕೆ ಸೇರುವ ಅವಕಾಶವಿದೆ. ನಾನು ಒಪ್ಪುತ್ತೇನೆ.

ಅಧ್ಯಕ್ಷರು:- ನಾವು ಬ್ರಾಹ್ಮಣರಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ :- ನೀವು ಸಜ್ಜನರು. ಅದನ್ನಾದರೂ ಒಪ್ಪುತ್ತೀರಾ?

ಅಧ್ಯಕ್ಷರು :- ಅದನ್ನು ಇಡೀ ಲೋಕ ಒಪ್ಪುತ್ತದೆ.

(ಗೊಂದಲ)

ಅಧ್ಯಕ್ಷರು :- ಸಾಮಾನ್ಯವಾಗಿ ನಾಣಯ್ಯನವರು ಎಲ್ಲಾದರೂ ಎದ್ದು ನಿಂತಾಗ ಅದಕ್ಕೆ ಎರಡು ಉದ್ದೇಶಗಳಿರುತ್ತವೆ. ಒಂದು ಪ್ರಸ್ತಾಪವಾಗುತ್ತಿರುವಂಥ ವಿಚಾರವನ್ನು ಸ್ಪಷ್ಟ ಮತ್ತು ದಿಟ್ಟವಾಗಿ ಹೇಳುವುದು. ಎರಡನೆಯದು, ನೀವು ಹೇಳುವ ವಿಚಾರವೇನಾದರೂ ಸ್ವಲ್ಪ ಅವರಿಗೆ ಮುಜುಗರ ಉಂಟು ಮಾಡುವುದಾದರೆ, ನಿಮ್ಮನ್ನು ದಾರಿ ತಪ್ಪಿಸುವುದು. ಅವರು ದಾರಿ ತಪ್ಪಿಸುವುದಕ್ಕೆ ನಿಂತರೆ, ನೀವು ಅದಕ್ಕೆ ತಕ್ಕಂತೆ ಎಲ್ಲೆಲ್ಲೋ ಹೋಗುತ್ತೀರಲ್ಲಾ. ನಾನು ನಿಮ್ಮ ಸಹಾಯಕ್ಕೆ ಬಂದರೂ ಸಹ...

ಶ್ರೀ ಎಂ. ವೀರಪ್ಪ ಮೊಯ್ಲಿ :- ನಾವು ಇಲ್ಲಿ ಇವರು ಹೇಳಿದ್ದನ್ನು ಒಪ್ಪಬೇಕೋ, ಅವರು ಹೇಳಿದ್ದನ್ನು ಒಪ್ಪಬೇಕೋ ಗೊತ್ತಾಗುತ್ತಿಲ್ಲ. ಕರ್ನಾಟಕದಲ್ಲಿ ನಮಗೆ ಏನು ತಿಳಿದಿತ್ತೆಂದರೆ, ಕುರುಬರು ಹೇಳಿದ್ದು ಸತ್ಯವಾಗುತ್ತದೆ ಎಂದು. ಬ್ರಾಹ್ಮಣರು ಹೇಳಿದ್ದು ಸತ್ಯವಾಗುತ್ತದೆಂದು ನಾನು ತಿಳಿದಿದ್ದು ಇವತ್ತೇ.

ಶ್ರೀ ಎಂ.ಸಿ. ನಾಣಯ್ಯ :- ದೇಶದಲ್ಲಿ ಅವರಿಬ್ಬರೇ ಅಲ್ಲ ಇರುವುದು. ನಾವು ಕೂಡ ಇದ್ದೇವೆ.

ಅಧ್ಯಕ್ಷರು :- ಅವರು ಹೇಳಿದ್ದೂ ಅದನ್ನೇ. ಅವರಿಗೆ ನಾನು ಕುರುಬರ ತರಹ ಕಾಣುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ:- 24 ಸಾವಿರ ಸಂಘ-ಸಂಸ್ಥೆಗಳಲ್ಲಿ ಸರ್ಕಾರದ ಪಾಲು ಬಂಡವಾಳ ಇಲ್ಲ. ಅಲ್ಲಿ ಯಾವುದೇ ನಾಮಕರಣವನ್ನು ಮಾಡುವುದಕ್ಕೆ ಅವಕಾಶವಿಲ್ಲ. ಆದುದರಿಂದ, ಸರ್ಕಾರದ ಪಾಲು ಬಂಡವಾಳ ಎಲ್ಲಿದೆ, ಅಲ್ಲಿ ಮೂರು ಜನರ ನಾಮಕರಣವನ್ನು ತಾವೆಲ್ಲಾ ಒಪ್ಪಿದ ನಂತರ ಮಾಡಿದೆವು. ಅವರಿಗೆ ಮತದಾನದ ಹಕ್ಕು ಕೊಡದಿದ್ದರೆ ಸುಮ್ಮನೆ ಕೂರಿಸಿದ ಹಾಗಾಗುತ್ತದೆ. ಅವರಿಗೂ ಒಂದು ಅಧಿಕಾರ ಇರಬೇಕಲ್ಲವೆ? ಒಬ್ಬ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಲ್ಲಿ ನನ್ನದೂ ಒಂದು ಮತ ಹಾಕಬೇಕೆನ್ನುವುದಕ್ಕೆ ಕಿತ್ತುಹಾಕುತ್ತೀರಾ? ಇದನ್ನು ಮಾಡಿರುವುದು ಹೌದು. ಕಾಂಗ್ರೆಸನವರು ನೀವು ಅಧಿಕಾರದಲ್ಲಿದ್ದಾಗ, ನಾನು ಕಾಂಗ್ರೆಸ್‌ನವರು ಎಂದು ಹೇಳುತ್ತಿಲ್ಲ, ಹತ್ತಾರು ವರ್ಷಗಳಿಂದ ಬಂದಿರುವ ನಡಾವಳಿ ಇದು. ಆ ಕಾಯಿದೆ ಹಲವಾರು ಬಾರಿ ಉಪಯೋಗವಾಗಿದೆ, ದುರುಪಯೋಗವೊ ಆಗಿದೆ, ಇಲ್ಲವೆಂದು ನಾನು ಹೇಳುವುದಕ್ಕೆ ತಯಾರಿಲ್ಲ. ಸರ್ಕಾರ ತೆಗೆದುಕೊಂಡಿರುವ ತೀರ್ಮಾನದಲ್ಲಿ ಮೂರು ಜನರ ನಾಮಕರಣ ಮಾಡಿರುವ ಸದಸ್ಯರು ಯಾರಿದ್ದಾರೆ, ಅವರನ್ನು ನಾಮಕರಣ ಮಾಡಿ, ಮತದಾನದ ಹಕ್ಕು ಕೊಡದೆ ಸುಮ್ಮನೆ ಕೂರಿಸಿದರೆ ಪ್ರಯೋಜನವಾಗುವುದಿಲ್ಲ.

ಸಾಮಾಜಿಕ ನ್ಯಾಯ ಕೊಡಬೇಕು ಎನ್ನುವ ಪರಿಕಲ್ಪನೆಯನ್ನು ಒಪ್ಪಿಕೊಂಡ ಮೇಲೆ ಅವರನ್ನು ಸುಮ್ಮನೆ ಕೂರಿಸುವುದು ಯಾವ ನ್ಯಾಯ? ಬಹುಶಃ ಮಾನ್ಯ ಖರ್ಗೆಯವರು ಇದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಹೀಗಾಗಿ ನಾವು ಅವರ ಚಿಂತನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಇದನ್ನು ತಂದಿದ್ದು.

ಅಧ್ಯಕ್ಷರು: ಮೊದಲು ಈ ವರ್ಗದ ಜನರಿಗೆ ಚುನಾವಣೆಯಲ್ಲಿ ಮೀಸಲಾತಿ ಇರಲಿಲ್ಲ. ನಂತರ ತಾವು ಎಲ್ಲಾ ಪರಿಣಿತರೆಲ್ಲಾ ಸೇರಿ ಹೆಣ್ಣುಮಕ್ಕಳಿಗೆ, ಪರಿಶಿಷ್ಟಜಾತಿ, ಪರಿಶಿಷ್ಟ ವರ್ಗಗಳಿಗೆಲ್ಲಾ ಕಮಿಟಿ

ಮ್ಯಾನೇಜಮೆಂಟಿಗೆ ಎಲೆಕ್ಷನ್ ಮಾಡುವಾಗಲೇ ಅವರಿಗೆಲ್ಲಾ ಅವಕಾಶ ಮಾಡಿಕೊಟ್ಟಿದ್ದೀರಿ. ಇದಾದ ಮೇಲೆ ಈ ವಿಷಯವನ್ನು ಪ್ರಸ್ತಾಪಿಸುವ ಅಗತ್ಯ ಇರಲಿಲ್ಲವೆಂದು ಅವರು ಹೇಳುತ್ತಿರುವುದು.

ಶ್ರೀ ಎಂ.ಸಿ. ನಾಣಯ್ಯ : ಹನ್ನೊಂದು-ರಲ್ಲಿ ಒಂದೊಂದು ಸ್ಥಾನಮಾತ್ರ ಅವರಿಗೆ ಮೀಸಲಿಡಲಾಯಿತು, ಜಾಸ್ತಿ ಏನೂ ಕೊಡಲಿಲ್ಲ. ಆದುದರಿಂದ, ಇದೊಂದು ಇರಲಿ ಎಂದು ಮಾಡಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈಗ ಮಾಡಿದ್ದು ಸಾಮಾಜಿಕ ನ್ಯಾಯ ಅಲ್ಲ ಇದು ರಾಜಕೀಯ ನ್ಯಾಯ. ಅವರಿಗೆ ಬೇಕಾದ ಸೊಸೈಟಿಗಳನ್ನು ಅಧಿಕಾರಕ್ಕೆ ತರುವುದಕ್ಕೋಸ್ಕರ ಈ ರಾಜಕೀಯ ನ್ಯಾಯ ಮಾಡಿಕೊಂಡಿದ್ದಾರೆಯೇ ಹೊರತು ಇದು ಸಾಮಾಜಿಕ ನ್ಯಾಯವಲ್ಲ. ಯಾರಿಗಾದರೂ ಮತ ಕೊಡಿಸಬೇಕು ಎಂದೇನೂ ಮಾಡಿಲ್ಲ. ಅನೇಕ ಕಡೆ ಕೋ-ಅಪರೇಟಿವ್ ಸೊಸೈಟಿಗಳಲ್ಲಿ ಬೆಂಬಲ ಬಾರದಿರುವುದನ್ನು ಅರಿತು ತರಾತುರಿಯಲ್ಲಿ ಸುಗ್ರೀವಾಜ್ಞೆಯನ್ನು ತಂದರು. ಬೇಕಾದರೆ ಅವರು ಆತ್ಮಸಾಕ್ಷಿಯಾಗಿ ಹೇಳಲಿ.

ಅಧ್ಯಕ್ಷರು : ನಾಣಯ್ಯನವರ ಹತ್ತಿರ ಇವು ಎಲ್ಲಾ ನಡೆಯುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾಣಯ್ಯನವರು ಏನು ಮಾಡುತ್ತಾರೆ ಎಂದರೆ ದಿಕ್ಕುತಪ್ಪಿಸುವುದಕ್ಕೆ ಮಧ್ಯದಲ್ಲಿ ನಿಂತರು. ದೊಡ್ಡ ಪುಸ್ತಕ ಹಿಡಿದುಕೊಂಡು ಇದು ಸಾಮಾಜಿಕನ್ಯಾಯ ಕೊಡುತ್ತೇವೆಂದು ಪದೇ ಪದೇ ಒತ್ತಿ ಹೇಳುತ್ತಾರೆ. ಪರಿಶಿಷ್ಟ ಜಾತಿ : ವರ್ಗದವರಿಗೆ, ಮಹಿಳೆಯರಿಗೆ, ಹಿಂದುಳಿದ ವರ್ಗದವರಿಗೆ ಈ ಮಾತನ್ನು ಅನೇಕ ಸಲ ಹೇಳಿ ಹೇಳಿ ಒಂದು ರೀತಿ ಚಾಂಪಿಯನ್ ಆಗಬೇಕು ಎಂದು ಹೇಳುತ್ತಿದ್ದಾರೆ. ನಮ್ಮ ಮಕ್ಕಳಿಗೆ, ನಮ್ಮ ನೆಂಟರಿಗೆ, ನಮಗೆ ಬೇಕಾದವರಿಗೆ, ನಮ್ಮ ಪಾರ್ಟಿ ಮುಖಂಡರಿಗೆ, ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಇದನ್ನು ತಂದಿದ್ದೇವೆಂದು ತಾವು ಬೇಕಾರೆ ಹೇಳಿದರೆ ನಾವು ಸಂತೋಷಪಡುತ್ತೇವೆ. ಇದು ಬಿಟ್ಟು ಪಾಪ ಆ ವರ್ಗದ ಹೆಸರುಗಳನ್ನು ಪದೇ ಪದೇ ಹೇಳಿ ಜನರಿಗೆ ಒಂದು ರೀತಿ ಭ್ರಮನಿರಶನ ಉಂಟಾಗಿದೆ. ಒಂದು ರೀತಿಯಲ್ಲಿ ಜನರಿಗೆ ಆ ವರ್ಗದ ಬಗ್ಗೆ ಸಿಂಪಥಿಯನ್ನು ಕ್ರಿಯೇಟ್ ಮಾಡುವಂತಹ ಸ್ಥಿತಿ ನಿರ್ಮಾಣವಾಗಿದೆ. ಮಾನ್ಯ ಸಹಕಾರ ಸಚಿವರು ಹೇಳಿದ್ದನ್ನು ನಾನು ಒಪ್ಪಿಕೊಂಡೆ, ಅವರು ನನ್ನ ಕಾನ್‌ಶಿಯಸ್ ಪ್ರಕಾರ ನಾನು ಇದಕ್ಕೆ ಒಪ್ಪುವುದಿಲ್ಲವೆಂದರು, ನಮ್ಮ ಪಾರ್ಟಿಯವರು ಎಲ್ಲರೂ ಹೇಳಿಸಿ ಇದನ್ನು ಮಾಡಿದ್ದರಿಂದ ನಾನು ಇದನ್ನು ತಂದಿದ್ದೇನೆ ಎಂದರು. ಇಷ್ಟು ಮಾತನಾಡಿ ಅವರು ಕುಳಿತರು. ಅವರು ಇದಕ್ಕೆ ಮುಂದೆ ವ್ಯಾಖ್ಯಾನವೇ ಮಾಡಿಲಿಲ್ಲ. ಇದಕ್ಕೆ ಮಾನ್ಯ ನಾಣಯ್ಯನವರು ತಿದ್ದುಪಡಿ ಮಾಡಿ ಒಂದು ಹೇಳಿಕೆ ಮಾಡಿ ಇದನ್ನು ಡೈಲೂಟ್ ಮಾಡುವುದಕ್ಕೆ ಏನೇನು ಬೇಕು ಅದನ್ನೆಲ್ಲಾ ಹೇಳಿದರು. right from Kargil to Primary consumer co-operative Society nomination ಗೆ ಬಂದರು.

ಶ್ರೀ ಎಂ.ಸಿ. ನಾಣಯ್ಯ : ಪ್ರಚೋದನೆ ಬಂತು; ಅದಕ್ಕೆ ನಾನು ಉತ್ತರ ಕೊಟ್ಟಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಟೆಲಿ ಕಮ್ಯುನಿಕೇಷನ್ ಬಂತು, ನಾಲ್ಕುಸಾವಿರ ರೂಪಾಯಿ ಸೆಲ್ಯೂಲರ್ ಫೋನ್ ಬಂತು, ಮಾನ್ಯ ಜಾರ್ಜ ಫರ್ನಾಂಡಿಸ್ ವಿಷಯ ಬಂತು, ಈ ಎಲ್ಲಾ ವಿಷಯಗಳನ್ನು ತೆಗೆದುಕೊಂಡು ಸಹಕಾರಿ ಸಂಘಗಳಿಗೆ ಬಂದರು.

ಅಧ್ಯಕ್ಷರು : ಎಲ್ಲಾ ವಿಚಾರವನ್ನು ಸಮಗ್ರವಾಗಿ ಒಬ್ಬ ವ್ಯಕ್ತಿ ಹೇಳತಕ್ಕಂಥವರು ಈ ಸದನದಲ್ಲಿ ಯಾರು ಇದ್ದಾರೆ ನೀವೇ ಹೇಳಿ, ಅವರನ್ನು ಬಿಟ್ಟು ಮತ್ತೊಬ್ಬರು ಇದ್ದಾರೆ ಎಂದು ತಾವು ಹೇಳಿದರೆ

ಅವರ ಕಡೆಯಿಂದ ಮಾತನಾಡಿಸುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ನನ್ನ ಮಿತ್ರರಾದ ಮಾನ್ಯ ಖರ್ಗೆಯವರಲ್ಲಿ ನಾನು ಏನು ಕೇಳಿಕೊಳ್ಳುತ್ತೇನೆಂದರೆ, ಇದರಲ್ಲಿ ಯಾವುದೇ ದುರದ್ದೇಶವಿಲ್ಲವೆಂದು ಹೇಳುತ್ತೇನೆ. ತಂದಿರತಕ್ಕಂಥ ವಿಚಾರವನ್ನು ತಾವು ನೋಡಬೇಕು. ಇದರಲ್ಲಿ ರಾಜಕೀಯ ಲಾಭ ತೆಗೆದುಕೊಳ್ಳುವ ಉದ್ದೇಶವಿಲ್ಲ. ಇದರ ಅನುಕೂಲ ಸರ್ಕಾರದ ಪಾಲು ಬಂಡವಾಳವಿರುವ ಬಹುಶಃ ಎಲ್ಲಾ ಸಂಘಸಂಸ್ಥೆಗಳಿಗೆ ಅನುಕೂಲವಾಗಲಿ ಎನ್ನುವ ಸದುದ್ದೇಶದಿಂದಲೇ ಇದನ್ನು ತಂದಿರುವುದು. ಈ ಅನುಕೂಲ ನಿಮಗೂ ಆಗಬಹುದು, ಅವರಿಗೂ ಆಗಬಹುದು, ಮತ್ತೊಬ್ಬರಿಗೆ ಆಗಬಹುದು. ಮಾನ್ಯ ಮಂತ್ರಿಗಳು ಯಾವುದೋ ಒಂದು ಮಾತನ್ನು ಕೊಡುವಾಗ ಅದಕ್ಕೆ ವಿರುದ್ಧವಾಗಿ ನಡೆದುಕೊಂಡರು ಇದಕ್ಕಾಗಿ ಅವರು ರಾಜೀನಾಮೆ ಕೊಡಬೇಕು ಎಂದು ಹೇಳತಕ್ಕಂಥದ್ದು ಸರಿಯಲ್ಲ. ಈ ಪ್ರಶ್ನೆನೇ ಉದ್ಭವಿಸುವುದಿಲ್ಲ, ಆದರೆ ವೈಯಕ್ತಿಕವಾಗಿ ಅವರ ಚಿಂತನೆಯನ್ನು ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಸಹಕಾರಿ ಸಂಘಗಳಿಗೆ ಚುನಾವಣೆ ಯಾವಾಗ ಆಯಿತು? ಈ ಸುಗ್ರೀವಾಜ್ಞೆಯನ್ನು ಯಾವಾಗ ತೆಗೆದುಕೊಂಡು ಬಂದಿರಿ? ಈ ಎರಡಕ್ಕೆ ತಾವು ಕ್ಲಾರಿಫಿಕೇಷನ್ ಕೊಡಬೇಕು.

ಶ್ರೀ ಎಂ.ಸಿ. ನಾಣಯ್ಯ : ಮಾರ್ಚಿ 31 ರೊಳಗೆ ಚುನಾವಣೆ ಮುಗಿಯಬೇಕಾಗಿತ್ತು. ಕೆಲವೊಂದು ಸಂದರ್ಭ ದಲ್ಲಿ ಎಲ್ಲಾ ಭಾಗದಿಂದಲೂ ಒತ್ತಡ ಬಂದಾಗ ಮಾರ್ಚಿ 31 ರೊಳಗೆ ಚುನಾವಣೆ ನಡೆಸುವುದಕ್ಕಾಗುವುದಿಲ್ಲ ಎಂದಾಗ ಇದೇ ಮೇ 31ರೊಳಗೆ ಚುನಾವಣೆ ನಡೆಸಬೇಕು ಎಂದು ತಂದಿದ್ದು. ಇದರ ಒಳಗಡೆ ಇದು ಬಂದಿರುವುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಚುನಾವಣೆಯಾದ ಮೇಲೆ ಇವರಿಗೆ ಮೇಜಾರಿಟಿ ಇಲ್ಲವೆಂದು ಗೊತ್ತಾದ ಮೇಲೆ ಇದನ್ನು ಕ್ಯಾಬಿನೆಟ್‌ನಲ್ಲಿಟ್ಟು ನಂತರ ಸುಗ್ರೀವಾಜ್ಞೆಯ ಮೂಲಕ ತಂದಿದ್ದು ದುರದ್ದೇಶವಲ್ಲದೇ ಮತ್ತೇನು? ಇದನ್ನು ನೀವು ತಂದಿದ್ದು ಸುದ್ದುದೇಶ ಎಂದು ಹೇಳುತ್ತೀರಾ?

ಶ್ರೀ ಎಂ.ಸಿ. ನಾಣಯ್ಯ : ಮೇ 31ನೇ ತಾರೀಖಿನೊಳಗೆ ಚುನಾವಣೇ ನಡೆಸಬೇಕು ಎಂದಾದ ಮೇಲೆ ಮೊದಲನೇ ವಾರದಲ್ಲಿ ಇದನ್ನು ತಂದಿರುವುದು. ಆ ಸಂದರ್ಭದಲ್ಲಿ ಇನ್ನೂ ಚುನಾವಣೆಗಳು ಮುಗಿದಿರಲಿಲ್ಲ.

ಶ್ರೀ ವಿ. ಮುನಿಯಪ್ಪ : ಎಲ್ಲಾ ಚುನಾವಣೆಗಳು ಮುಗಿದಿದ್ದು ಫಲಿತಾಂಶ ಕೂಡ ಬಂದಿತ್ತು. ಇವರು ಸೋತಿದ್ದರಿಂದ ಇವರನ್ನು ಪುನಃ ಅಧಿಕಾರಕ್ಕೆ ತರಬೇಕು ಎನ್ನುವ ರಾಜಕೀಯ ತಂತ್ರದಿಂದ ಇದನ್ನು ತಂದಿರುವುದು. ಇದರಲ್ಲಿ ಬೇರೆ ಉದ್ದೇಶವೇ ಇಲ್ಲ. ಇದರಲ್ಲಿ ಯಾವ ಸದುದ್ದೇಶವೂ ಇಲ್ಲ. ಕೇವಲ ರಾಜಕೀಯ ತಂತ್ರಕ್ಕಾಗಿಯೇ ಈ ಸುಗ್ರೀವಾಜ್ಞೆಯನ್ನು ತಂದಿದ್ದು. ನೀವು ತಂದಂಥ ಬಿಲ್‌ನ್ನು ಮೊಟಕುಗೊಳಿಸಿ ರಾಜಕೀಯ ತಂತ್ರಕ್ಕಾಗಿ, ರಾಜಕೀಯ ಸ್ವಾರ್ಥಕ್ಕಾಗಿಯೇ ನೀವು ತಂದಿದ್ದು.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಖರ್ಗೆಯವರು ಸಹಕಾರ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಇವರಿಗೆ ನಮಗಿಂತಲೂ ಚೆನ್ನಾಗಿ ಗೊತ್ತಿದೆ, ಯಾವ ರೀತಿಯಲ್ಲಿ ಇದನ್ನು ಉಪಯೋಗಿಸಬೇಕು ಎನ್ನುವುದು ಅವರಿಗೆ ಚೆನ್ನಾಗಿ ಗೊತ್ತಿದೆ. ಈ ಸಂದರ್ಭವನ್ನೇ ನಾವು ಉಪಯೋಗಿಸಿಕೊಂಡಿರುವುದು

ಇದು ಏನೂ ತಪ್ಪಾಗುವುದಿಲ್ಲ. ನಾಳೆ ಒಂದು ಪಕ್ಷ ಅವರೇನಾದರೂ ಅಧಿಕಾರಕ್ಕೆ ಬಂದರೆ ಇದರ ಲಾಭ ಪಡೆದುಕೊಳ್ಳಲಿ, ಅವರಂತೂ ಅಧಿಕಾರಕ್ಕೆ ಬರುವುದಿಲ್ಲ. ಇದನ್ನು ಬೇಡ ಎಂದು ಹೇಳುವುದಾದರೆ ನೀವು ಅಧಿಕಾರದಲ್ಲಿದ್ದಾಗ ಇದನ್ನು ತೆಗೆದು ಹಾಕಿಬಿಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಏನು ಪ್ರಸ್ತಾಪ ಮಾಡಿದೆ ಎಂದರೆ, ಮಾನ್ಯ ಮಂತ್ರಿಗಳು ಬಂದ ಕೂಡಲೆ ಇದರ ಬಗ್ಗೆ ವಿವರಣೆ ಕೊಡುತ್ತಾರೆ, ಇದರ ಬಗ್ಗೆ ಮಾತನಾಡುತ್ತಾರೆಂದು ನಾನು ತಿಳಿದುಕೊಂಡಿದ್ದೆ, ಏಕೆಂದರೆ ಈ ಸುಗ್ರೀವಾಜ್ಞೆ ಏಕೆ ತಂದರು ಅವರ ಉದ್ದೇಶ ಏನಿತ್ತು ಎನ್ನುವುದನ್ನು ಹೇಳುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಹೀಗಿದ್ದಾಗ ಮಾನ್ಯ ಪಾರ್ಲಿಮೆಂಟ್ರಿ ಅಫೇರ್ಸ್ ಮಿನಿಸ್ಟರ್‌ರವರು ನಾವು ಯಾವುದನ್ನು ಒಪ್ಪಿರಲಿಲ್ಲವೋ ಅದನ್ನು ಒಪ್ಪಿಸುವುದಕ್ಕಾಗಿಯೇ ಬ್ಯಾಕ್‌ಗ್ರೌಂಡ್ ಎಲ್ಲಾ ಹೇಳಿಕೊಂಡು ಒಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ನಾವು ಏನು ತತ್ವಗಳನ್ನು ಹೇಳುತ್ತೇವೆಯೋ ಅದನ್ನು ಅವರು ಎಲ್ಲಾ ಕಡೆ ಕಂಡಮ್ ಮಾಡಿ ಹೇಳಿಕೊಂಡು ಬಂದಿದ್ದಾರೆ. ಚುನಾವಣೆಯಾದ ಮೇಲೆ ದುರುಪಯೋಗ ಮಾಡಿಕೊಳ್ಳುವುದಕ್ಕಾಗಿಯೇ ಈ ಸುಗ್ರೀವಾಜ್ಞೆಯನ್ನು ತಂದಿರುವುದು ಎಂದು ನಾವು ಹೇಳುತ್ತೇವೆ. ಮತ್ತೊಂದು ವಿಷಯ ಏನೆಂದರೆ, ಮೊದಲನೇ ಅಮೆಂಡಮೆಂಟಿನಲ್ಲಿರತಕ್ಕಂಥ ಒಂದಕ್ಷರವನ್ನು ತಿದ್ದುಪಡಿ ಮಾಡಿದರೆ ನಾನು ಈ ಅಧಿಕಾರದಲ್ಲಿ ಒಂದು ಕ್ಷಣವೂ ಇರುವುದಿಲ್ಲ ಎಂದು ಅನೇಕ ಸಾರಿ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಬೇಕಾದರೆ ಈ ಮಾತನ್ನು ಅವರು ಹೇಳಿಲ್ಲ ಎಂದು ಹೇಳಲಿ. ಸಭಾಧ್ಯಕ್ಷರ ಕೊಠಡಿಯಲ್ಲಿ ಹಾಗೂ ನಮಗೆ ಭೇಟಿಯಾದಂಥ ಅನೇಕ ಸಂದರ್ಭದಲ್ಲಿ ಇದೇ ಮಾತನ್ನು ಹೇಳಿದ್ದಾರೆ. ಈ ರೀತಿ ಹೇಳಿದ್ದರೂ ಪುನಃ ಈ ಪ್ರಿನ್ಸಿಪಲ್ ಆ್ಯಕ್ಟಗೆ ಅಮೆಂಡೆಮೆಂಟ್ ತಂದು, 98ರ ಅಮೆಂಡಮೆಂಟಿಗೆ ಕೇವಲ ಆರು ತಿಂಗಳಲ್ಲಿ ಪುನಃ ಅಮೆಂಡೆಮೆಂಟ್ ತಂದು, ಇಂಥ ಒಂದು ಕೆಟ್ಟ ಕಾನೂನುನನ್ನು ತಂದಿದ್ದಾರೆ. ನಾನು ಏಕೆ ಈ ಮಾತು ಹೇಳುತ್ತೇನೆಂದರೆ, ಚುನಾವಣೆಯಾದ ಮೇಲೆ ನಂತರ ಇದನ್ನು ತಿಳಿದುಕೊಂಡು ನಾವು ನಾಮಕರಣ ಮಾಡದೇ ಹೋದರೆ ಸೊಸೈಟಿಗಳು ನಮ್ಮ ಕೈಬಿಟ್ಟು ಹೋಗುತ್ತವೆಂದು ಭಾವಿಸಿ ಏನು ಈ ತಿದ್ದುಪಡಿ ತಂದಿದ್ದಾರೆ, ಇದನ್ನು ನಾವು ಖಂಡಿಸುತ್ತೇವೆ. ಇವರ ಉತ್ತರ, ನೀತಿ, ನಮಗೆ ಎಲ್ಲಾ ಗೊತ್ತಾಗಿದೆ. ಇವರು ದುರ್ಬಳಕೆ ಮಾಡುವುದಕ್ಕೆ ಏನೇನು ಕಾನೂನು ಬೇಕು ಅವು ಎಲ್ಲಾ ಮಾಡಿಕೊಳ್ಳುತ್ತಾರೆ ಎನ್ನುವ ಅಂಶ ನಮಗೆ ಇದರ ಮೇಲೆ ಅರ್ಥವಾಗುತ್ತದೆ. ಏಕೆಂದರೆ, ಅವರಿಗೆ ಒಂದು ರೀತಿ-ನೀತಿ-ನಿಯಮವಿಲ್ಲ. ಅವರು ಹೇಳುವುದೇನೆಂದರೆ ನೀವು ಮಾಡಿಲ್ಲವೆ? ನಾವು ಮಾಡುತ್ತೇವೆಂದು ಹೇಳುತ್ತಾರೆ. ಹಿಂದೆ ಕಾನೂನು ಪ್ರಕಾರ ಏನು ಮಾಡಬೇಕಾಗಿತ್ತು ನಾವು ಅದನ್ನು ಮಾಡಿದ್ದಕ್ಕೆ ನಮಗೆ ಶಿಕ್ಷೆ ಕೊಟ್ಟರು. ನಾವು ಮಾಡಿದ್ದನ್ನು ಬಯ್ದುಕೊಂಡು ನೀವು ಬಂದಿರಲ್ಲಾ ಏನು ಮಾಡುವುದಕ್ಕೆ ನೀವು ಬಂದಿರಿ ? ಇದನ್ನೇ ಮಾಡುವುದಕ್ಕೆ ತಾವು ದೊಡ್ಡ ಮನುಷ್ಯರು ಬಂದಿದ್ದೀರಾ ? ನಾನು ಎಷ್ಟು ಸಲ ಕೇಳಿದರೂ ಅವರು ಇನ್ನೂ ಸ್ಪಷ್ಟವಾಗಿ ಹೇಳುತ್ತಿಲ್ಲ, ಮಾನ್ಯ ಈಶ್ವರಪ್ಪನವರು ಮಾತನಾಡಿದ ನಂತರ ಏನಾದರೂ ಬಾಯಿ ಬಿಡುತ್ತಾರೋ ಏನೋ ಕಾದು ನೋಡೋಣ.

ಶ್ರೀ ಕೆ.ಎಸ್. ಈಶ್ವರಪ್ಪ : ಅಧ್ಯಕ್ಷರೆ, ಮಾನ್ಯ ಸಹಕಾರ ಸಚಿವರು ದಯಮಾಡಿ ನನ್ನ ಮಾತನ್ನು ಕೇಳಬೇಕು. ಏಕೆಂದರೆ, ಮಾನ್ಯ ಸಚಿವರು ಹೊಸದಾಗಿ ಶಿವಮೊಗ್ಗಕ್ಕೆ ಸಹಕಾರಿ ಸಂಘದ ಒಂದು ಕಾರ್ಯಕ್ರಮಕ್ಕೆ ಬಂದಿದ್ದರು, ಸಹಕಾರಿ ಸಂಘದ ಒಂದು ಮೌಲ್ಯವನ್ನು ನಾನು ಸಹಕಾರಿ ಸಚಿವನಾಗಿ ಎತ್ತಿ ಹಿಡಿಯುತ್ತೇನೆ, ಸಹಕಾರಿ ಕ್ಷೇತ್ರದಲ್ಲಿ ರಾಜಕೀಯ ಹಸ್ತಕ್ಷೇಪ ಆಗುವಂತಹ ಸಂದರ್ಭ ಬಂದರೆ

ಖಂಡಿತವಾಗಿ ಸಹಕಾರಿ ನಿರ್ನಾಮವಾಗುತ್ತದೆ ಎಂದು ಬಸವೇಶ್ವರರ ವಚನಗಳನ್ನು ಕೋಟ್ ಮಾಡಿ ಬಹಳ ಚೆನ್ನಾಗಿ ಮಾತನಾಡಿದ್ದರು. ಆಗ ನನಗೆ ಅವರ ಬಗ್ಗೆ ತುಂಬಾ ಗೌರವ ಭಾವನೆ ಬಂದಿತು. ಆದರೆ ಇವತ್ತು ಮಾನ್ಯ ಸಚಿವರು ಉತ್ತರ ಕೊಡುವಂತಹ ಸಂದರ್ಭದಲ್ಲಿ, ರಾಜಕೀಯ ಕಾರಣಕ್ಕೋಸ್ಕರವೇ ಇವತ್ತು ನನ್ನ ವೈಯಕ್ತಿಕ ವಿರೋಧ ಇದ್ದರೂ ಕೂಡ ನಾವು ಇದನ್ನು ತರುತ್ತಿದ್ದೇವೆಂದು ಒಂದೇ ಒಂದು ಸಾಲಿನಲ್ಲಿ ಹೇಳಿದರು. ಬಹುಶಃ ನನಗೆ ಅನ್ನಿಸುತ್ತದೆ ವಿಧಾನ ಸೌಧ ಆರಂಭವಾದಿಂದಿನಿಂದ ಇವತ್ತಿನವರೆಗೆ ಯಾವುದೇ ಒಬ್ಬ ಮಂತ್ರಿ ಒಪ್ಪಿರಲಿಕ್ಕಿಲ್ಲ. ಸನ್ಮಾನ್ಯ ಪ್ರಕಾಶರವರು ಮಾತ್ರ ಗ್ರಾಮ ಪಂಚಾಯಿತಿ ವಿಷಯಕ್ಕೆ ಸ್ವಲ್ಪ ತೇಲಿಸಿ ಒದ್ದಾಡಿಕೊಂಡು ಅವರು ಒಪ್ಪಿಕೊಂಡಿದ್ದರು. ಆಗ ಅವರು ನನ್ನ ಮನಸ್ಸಿನಲ್ಲಿ ಬೇರೊಂದು ಭಾವನೆ ಇದೆ. ಅದರೂ ಕೂಡ ಇಡೀ ಮಂತ್ರಿ ಮಂಡಲ ಒಂದು ರೂಪಕ್ಕೆ ಬಂದಿರುವಂತಹ ಸಂದರ್ಭದಲ್ಲಿ ವಿಧಿ ಇಲ್ಲದೇನೇ ನಾನು ಒಪ್ಪುವಂತಕ್ಕಂಥ ಸ್ಥಿತಿ ಬಂತು ಎಂದು ಅವರು ಹೇಳಿದ್ದರು. ಆ ಸಂದರ್ಭದಲ್ಲಿ ಅವರು ಸ್ವಲ್ಪ ನಾಚಿಕೆಯನ್ನು ಇಟ್ಟುಕೊಂಡು ಮಾತನಾಡಿದ್ದರು. ನಾನು ನೇರವಾಗಿ ಹೇಳಬೇಕಾದರೆ ಸನ್ಮಾನ್ಯ ಪ್ರಕಾಶ್‌ರವರು ಸ್ವಲ್ಪ ನಾಚಿಕೆಯನ್ನು ಇಟ್ಟು ಕೊಂಡು ಮಾತನಾಡಿದ್ದರು. ಆದರೆ ಸಹಕಾರಿ ಸಚಿವರು ಸರ್ಕಾರದ ಪರವಾಗಿ ನಾಚಿಕೆಯನ್ನು ಬಿಟ್ಟು ಉತ್ತರ ಕೊಡುತ್ತಾರೆ ಎಂದು ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ನಾನೇಕೆ ಈ ಮಾತು ಹೇಳುತ್ತೇನೆಂದರೆ, ಇನ್ನು ಮುಂದೆ ಇವರು ಯಾವುದೇ ಸಹಕಾರಿ ಸಂಘದ ಕಾರ್ಯಕ್ರಮಗಳಿಗೆ ಹೋದಾಗ ಅದರ ಮೌಲ್ಯದ ಬಗ್ಗೆ ಭಾಷಣ ಮಾಡಬಾರದು. ಏಕೆಂದರೆ ಸಚಿವರೇ ಇಲ್ಲಿ ನೇರವಾಗಿ ಒಪ್ಪಿಕೊಂಡಿದ್ದಾರೆ.

ರಾಜಕಾರಣಕ್ಕೋಸ್ಕರ ನಾವು ಈ ಒಂದು ಬಿಲ್ಲನ್ನು ತಂದಿದ್ದೇವೆ ಎನ್ನುವಂಥ ಮಾತನ್ನು ಒಪ್ಪಿಕೊಂಡು. ಯಾವ ಒಂದು ಮುಖವನ್ನು ಇಟ್ಟುಕೊಂಡು, ಇವರು ಬೇರೆ ಬೇರೆ ಕಡೆ ಹೋಗಿ ಭಾಷಣ ಮಾಡಿ ಹಿತವಚನ ಹೇಳುವುದಕ್ಕೆ ಅಧಿಕಾರ ಇರುತ್ತದೆ ? ಪ್ರತಿಯೊಬ್ಬ ವ್ಯಕ್ತಿ ಸಹಕಾರಿ ಕ್ಷೇತ್ರದಲ್ಲಿ ಏನು ಯೋಚನೆ ಮಾಡುತ್ತಾನೆ. ಸಹಕಾರಿ ಕ್ಷೇತ್ರವನ್ನು ರಾಜಕಾರಣಕ್ಕೋಸ್ಕರ ಎಂದು ತೀರ್ಮಾನ ಮಾಡಿ ನೀವು ಲೈಸನ್ಸ್ ಕೊಟ್ಟು ಬಿಟ್ಟರಿ. ಇನ್ನು ಮುಂದೆ ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡತಕ್ಕಂಥ ವ್ಯಕ್ತಿಗಳು ರಾಜಕಾರಣಕ್ಕೋಸ್ಕರ ಇರುವುದು ಎನ್ನುವ ಮಾತಿನಿಂದ ನೀವು ಸಹಕಾರಿ ಕ್ಷೇತ್ರಕ್ಕೆ ದ್ರೋಹ ಮಾಡಿದಿರಿ. ನೀವು ಸಹಕಾರಿ ಕ್ಷೇತ್ರ ದ ಮಂತ್ರಿಯಾಗಿ ಇಲ್ಲಿ ನೀವು ಕುಳಿತು ನಿಮ್ಮ ಇಲಾಖೆಯ ಪರವಾಗಿ ಇನ್ನೊಬ್ಬ ವ್ಯಕ್ತಿ ನೀವು ಬದುಕಿರುವ ಸಂದರ್ಭದಲ್ಲಿ ಉತ್ತರ ಕೊಡುತ್ತಾರೆಂದರೆ ಇದು ಸರಿಯೇ ಎಂದು ತಾವು ನಿಮ್ಮ ಆತ್ಮ ಸಾಕ್ಷಿಯಾಗಿ ಯೋಚನೆ ಮಾಡಿ. ಇದು ವೈಯಕ್ತಿಕವಾಗಿ ಶ್ರೀ ಎಸ್.ಎಸ್. ಪಾಟೀಲ್‌ರವರ ವಿಚಾರವಾಗಿ ಅಲ್ಲ. ನೀವು ಇರುವಾಗ ರಸ್ತೆ ಮೇಲೆ ಹೋಗುವವರು ಅಥವಾ ಯಾರಿಗಾದರೂ ಆ ಖುರ್ಚಿಯ ಮೇಲೆ ಬಂದು ಕುಳಿತುಕೊಳ್ಳುವ ಅಧಿಕಾರ ಇಲ್ಲ. ಸಹಕಾರಿ ಮಂತ್ರಿಗಳಾಗಿರುವ ಒಂದೇ ಒಂದು ಉದ್ದೇಶಕ್ಕಾಗಿ ವಿಧಾನಸೌಧದಲ್ಲಿ ನೀವು ಅಲ್ಲಿ ಕೂಡುವುದಕ್ಕೆ ಅಧಿಕಾರ ಇದೆ. ಇಂತಹ ಸಂದರ್ಭದಲ್ಲಿ ನಾನು ಕುಳಿತಿರುತ್ತೇನೆ, ನನ್ನ ವಿಚಾರ ಬೇರೆ, ಸರ್ಕಾರದ ವಿಚಾರ ಬೇರೆ ಇದೆ. ಮಾನ್ಯ ನಾಣಯ್ಯನವರು ಮಾತನಾಡಿದ್ದು ಹಾಗೆಯೇ. ಹಣಕಾಸು ವಿಚಾರದಲ್ಲಿ ನಾನು ಅಡ್ಡ ಬರುವುದಿಲ್ಲ. ಸರ್ಕಾರದಲ್ಲಿ ಹಣಕಾಸು ವಿಚಾರದಲ್ಲಿ ಒಬ್ಬೊಬ್ಬರ ಅಭಿಪ್ರಾಯ ಬೇರೆ ಬೇರೆ ಇರುತ್ತದೆ ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಇದು ತತ್ವದ ವಿಚಾರ. ಸಹಕಾರಿ ಕ್ಷೇತ್ರದ ತತ್ವಕ್ಕೆ ಅಪಚಾರ ಮಾಡಿದ ಒಬ್ಬ ಸಹಕಾರಿ ಮಂತ್ರಿ ಇಡೀ ಸರ್ಕಾರ ಆ ರಾಜಕಾರಣದ ವಿಚಾರಕ್ಕೆ

ಒಪ್ಪಿಗೆ ಕೊಟ್ಟಿರತಕ್ಕಂಥ ಸಂದರ್ಭದಲ್ಲಿ, ನನಗೆ ಅದು ಒಪ್ಪಿಗೆ ಇಲ್ಲದಿದ್ದರೂ ಕೂಡ, ನಾನು ಸಹಕಾರಿ ಮಂತ್ರಿಯಾಗಿ ಮುಂದುವರೆಯುತ್ತೇನೆ ಎನ್ನುವ ಪರಿಪಾಠವನ್ನು ಈ ದೇಶದ ಜನಕ್ಕೆ ಹಾಕಿ ಕೊಟ್ಟರೆ, ಇನ್ನು ಮುಂದೆ ಯಾವ ಸಹಕಾರಿ ನಿಮ್ಮನ್ನು ಒಪ್ಪುತ್ತಾನೆ? ನನಗೆ ಅನಿಸುತ್ತದೆ, ಸಹಕಾರಿ ಕ್ಷೇತ್ರಕ್ಕೆ ನೀವು ಬಹಳ ಅಪಚಾರ ಮಾಡುತ್ತಿದ್ದೀರಿ. ಅದರ ಜೊತೆಗೆ ನೀವು ಹೇಳುವುದು ಏನು? ಅವರು ಮಾಡಿದರು, ಕಾಂಗ್ರೆಸ್‌ನವರು ಮಾಡಿದರು, ಅದಕ್ಕಾಗಿ ನಾವು ಮಾಡಿದ್ದೇವೆ. ಕಾಂಗ್ರೆಸ್‌ನವರು ಆ ಬದುಕು ಮಾಡಿದ್ದಕ್ಕೆ ಅವರಿಗೆ ಈ ಸ್ಥಿತಿ ಬಂದಿರುವುದು. ಆ ಬದುಕನ್ನು ಅವರು ಮಾಡದಿದ್ದರೆ, ಅವರು ದಿಟ್ಟತನವನ್ನು ತೋರಿಸಿದ್ದರೆ ಈ ಸ್ಥಿತಿ ಅವರಿಗೆ ಬರುತ್ತಿರಲಿಲ್ಲ. ನಾಳೆ ನಿಮಗೂ ಈ ಸ್ಥಿತಿ ಬರುತ್ತದೆ ಎಂಬ ರಾಜಕಾರಣದ ಬಗ್ಗೆ ನಾನು ಇಲ್ಲಿ ಮಾತನಾಡುವುದಕ್ಕೆ ಇಚ್ಛೆ ಪಡುವುದಿಲ್ಲ. ಇದು ರಾಜಕಾರಣ ಪ್ರಶ್ನೆ ಅಲ್ಲ. ಇವರು ನೇರವಾಗಿ ಒಪ್ಪಿಕೊಂಡು ಬಿಟ್ಟರು. ಅಧ್ಯಕ್ಷರೆ, ತಾವು ಆಗ ಬಂದಿರಲಿಲ್ಲ. ಏತಕ್ಕಾಗಿ ಇಲ್ಲಿ ರಾಜಕಾರಣಕ್ಕೋಸ್ಕರ ತಂದಿರಿ ಎನ್ನುವ ಮಾತಿಗೆ ಉತ್ತರವನ್ನು ಕೊಟ್ಟಿದ್ದಾರೆ, ನಾನು ನಿಮ್ಮನ್ನು ಕೈ ಮುಗಿದು ಕೇಳುತ್ತೇನೆ. ದಯವಿಟ್ಟು ಅದನ್ನು ವಾಪಸ್ಸು ತೆಗೆದುಕೊಂಡು ಬಿಡಿ. ಏನು ಹೇಳಿಕೆಯನ್ನು ಕೊಟ್ಟಿದ್ದೀರಿ, ರಾಜಕಾರಣಕ್ಕೋಸ್ಕರ ಇದನ್ನು ಮಾಡಿದ್ದೇವೆ ಎನ್ನುವ ಮಾತನ್ನು ಹೇಳುತ್ತಿದ್ದೀರಿ, ಅದು ರೆಕಾರ್ಡಿಗೆ ಹೋದರೆ ಇಡೀ ದೇಶದ ಜನ ನೋಡುತ್ತಾರೆ. ಮುಂದೆ ಬರುವಂಥ ಇಡೀ ಪೀಳಿಗೆ ನೋಡುತ್ತದೆ. ಎಸ್.ಎಸ್. ಪಾಟೀಲ್, ಸಹಕಾರಿ ಮಂತ್ರಿಗಳು ಈ ರೀತಿ ಉತ್ತರ ಕೊಟ್ಟರು ಎಂದು ರೆಕಾರ್ಡ್ ಆಗಿ ಉಳಿದು ಬಿಡುತ್ತದೆ. ಬೇರೆ ಎಲ್ಲಿಂದಾದರೂ ತೆಗೆದು ಹಾಕಬಹುದು, ಆದರೆ ಇಲ್ಲಿ ರೆಕಾರ್ಡ್ ಆಗಿರುವುದನ್ನು ತೆಗೆದು ಹಾಕುವುದಕ್ಕೆ ಆಗುವುದಿಲ್ಲ. ನೀವು ರಾಜೀನಾಮೆ ಕೊಡುತ್ತಿರೋ ಬಿಡುತ್ತಿರೋ ಅದು ಬೇರೆ ಪ್ರಶ್ನೆ.

ಅಧ್ಯಕ್ಷರು : ನಿಮ್ಮ ಸಲಹೆ ಏನು ಎಂದರೆ, ರೆಕಾರ್ಡ್‌ಗೆ ಹೋಗುವುದು ಬೇಡ, ನೀವು ಏನು ಮಾಡುವುದು ಇದೆ ಅದನ್ನು ಮಾಡಿ ಎಂದಾ?

ಶ್ರೀ ಕೆ.ಎಸ್. ಈಶ್ವರಪ್ಪ :- ನಿಜ ಒಪ್ಪಿಕೊಂಡು ಬಿಟ್ಟರೆ ಅದು ದೊಡ್ಡ ಗುಣ. ನಾನು ಅದನ್ನು ಹೇಳುವುದಿಲ್ಲ. ಈ ದೊಡ್ಡ ಗುಣವನ್ನು ಇಟ್ಟುಕೊಂಡು ನೀವು ಸಹಕಾರಿ ಮಂತ್ರಿಯಾಗಿ ಮುಂದುವರೆಯುವುದಕ್ಕೆ ಆತ್ಮಸಾಕ್ಷಿಯಾದರೂ ಬೇಡವೇ ಸ್ವಾಮಿ. ಆತ್ಮಸಾಕ್ಷಿ ಸತ್ತು ಹೋಗಿದೆಯಾ ? ಏಕೆಂದರೆ, ರಾಜಕಾರಣ ಮಾಡುವಂಥ ಸಂದರ್ಭದಲ್ಲಿ, ಆತ್ಮಸಾಕ್ಷಿ ಸ್ವಲ್ಪ ಪರ್ಸೆಂಟ್ ಆದರೂ ಇರಬೇಕಾಗುತ್ತದೆ. ನನ್ನ ಆತ್ಮಸಾಕ್ಷಿಗೂ ನನ್ನ ಖುರ್ಚಿಗೂ ಏನು ಸಂಬಂಧ ಇಲ್ಲ, ನಾನು ಖುರ್ಚಿಗೋಸ್ಕರ ಇರುತ್ತೇನೆ. ಇಡೀ ಮಂತ್ರಿಮಂಡಲದಲ್ಲಿ ಇದು ತೀರ್ಮಾನ ಆಗಿರುವುದಕ್ಕೋಸ್ಕರ, ನನ್ನ ವಿಚಾರ ಬೇರೆ, ಅದಕ್ಕೋಸ್ಕರ ನಾನು ಮಂತ್ರಿಯಾಗಿ ಮುಂದುವರೆಯುತ್ತೇನೆಂದರೆ, ಆ ಒಬ್ಬ ಸಹಕಾರಿ ಕ್ಷೇತ್ರದ ಮನುಷ್ಯನಾಗಿ ಮುಂದುವರೆಯುವುದಕ್ಕೆ ಖಂಡಿತವಾಗಿ ಆಗುವುದಿಲ್ಲ. ಹೇಳುವುದು ಏನು, ಸಾಮಾಜಿಕ ನ್ಯಾಯಕ್ಕೋಸ್ಕರ ನಾಮಕರಣ, ಛೇ ಛೇ ಹಿಂದುಳಿದ ವರ್ಗದ ಜನ, ಅಲ್ಪಸಂಖ್ಯಾತರು, ನಿಮ್ಮ ಹೇಳಿಕೆಯಿಂದ ಅವರಿಗೆ ತೃಪ್ತಿಯಾಗಿದೆ ಎಂದು ನೀವು ಅಂದುಕೊಂಡಿದ್ದೀರಾ? ನಾಣಯ್ಯನವರಂಥ ಒಬ್ಬ ಹಿರಿಯ ರಾಜಕಾರಣಿಗಳ ಬಾಯಿಂದ : ಸಾಮಾಜಿಕ ನ್ಯಾಯಕ್ಕೋಸ್ಕರ ಎಂದು ಬಂದಾಗ ಇದು ಎಷ್ಟರ ಮಟ್ಟಿಗೆ ಸರಿ ಎನಿಸುತ್ತದೆ. ಹೊರಗಡೆ ಪ್ಲಾಟಫಾರ್ಮ್‌ನಲ್ಲಿ ರಾಜಕೀಯ ಬೇಕಾದಷ್ಟು ಮಾಡೋಣ. ಆ ಪದಗಳು ಇರುವುದು ಓಟಿಗೋಸ್ಕರವೇ. ಸಾಮಾಜಿಕ ನ್ಯಾಯ ಎಂದರೆ, ಬೆಳಿಗ್ಗೆಯಿಂದ ನಾವು ಚುನಾವಣೆಯ ಸಲುವಾಗಿ ರಾಜಕೀಯ ಪಕ್ಷಗಳು ಹೋದಾಗ ಓಟು ಕೊಡಿ ಎಂದು ಅನೇಕ ವರ್ಷಗಳಿಂದ

ಕೂಗಿಕೊಂಡು ಬಂದಿದ್ದೇವಲ್ಲಾ ಅಲ್ಪಸಂಖ್ಯಾತರ, ಹಿಂದುಳಿದ ವರ್ಗಗಳ ಮತ್ತು ದಲಿತರ ಉದ್ಧಾರಕ್ಕಾಗಿ ಇಂತಹ ಪಕ್ಷಕ್ಕೆ ಓಟು ಕೊಡಿ. ನಾವು ಇದನ್ನು 50 ವರ್ಷದಿಂದ ಮಾಡಿಕೊಂಡು ಬಂದಿದ್ದೇವೆ, ಅದನ್ನು ಮುಂದುವರಿಸೋಣ. ಅವರ ಉದ್ಧಾರ ಎಷ್ಟು ಆಗಿದೆ ಎನ್ನುವುದನ್ನು ಆ ಕೊಳಚೆ ಪ್ರದೇಶದಲ್ಲಿರುವ ಜನ ಹೇಳುತ್ತಾರೆ. ಅದರ ಬಗ್ಗೆ ನಾನು ಹೇಳುವುದಿಲ್ಲ. ಆದರೆ ಆ ಪದವನ್ನು ಬಳಸಿಕೊಂಡು ಆ ವರ್ಗದ ಜನರಿಗೆ ದ್ರೋಹ ಮಾಡುವಂಥ ಒಂದು ವ್ಯವಸ್ಥೆ ನಿಮಗೆ ಸಿಗುತ್ತಿದೆಯಲ್ಲಾ. ಒಂದು ಕಡೆ ಹೇಳುತ್ತೀರಿ, ರಾಜಕಾರಣಕ್ಕೋಸ್ಕರ ತರುತ್ತೇವೆ, ಇನ್ನೊಂದು ಕಡೆ ಹೇಳುತ್ತೀರಿ ಸಾಮಾಜಿಕ ನ್ಯಾಯಕ್ಕೋಸ್ಕರ ಎಂದು. ನೀವು ನಾಮಿನೇಷನ್ ಮಾಡಿದ್ದೀರಲ್ಲಾ, ಪ್ರತಿಯೊಂದು ಸೊಸೈಟಿಗಳಲ್ಲಿ ನಾಮಕರಣ ಮಾಡಿದಂಥ ಸಂದರ್ಭದಲ್ಲಿ ಸುಮಾರು 3ರಿಂದ 10 ಜನರನ್ನು ಮಾಡಿಕೊಂಡು ಹೋಗಿ ನೀವು ಎಷ್ಟು ಸಾಮಾಜಿಕ ನ್ಯಾಯ ಕೊಟ್ಟಿರುತ್ತೀರಿ ನೋಡಿ. ನಿಮಗೆ ತೃಪ್ತಿಯಾಗಿದೆ ಎಂದು ಇವಾಗ ಆದರೂ ಹೇಳಿ, ಉತ್ತರವನ್ನು ಕೊಡುವಂಥ ಸಂದರ್ಭದಲ್ಲಿ ಮತ್ತೆ ನಾಣಯ್ಯನವರ ಕಡೆ ಕೈ ತೋರಿಸಬೇಡಿ. ಸಹಕಾರಿ ಸಚಿವರಾದ ನಿಮಗೆ ನಾನು ಕೈ ಮುಗಿದು ಹೇಳುತ್ತೇನೆ, ಇದು ಸಣ್ಣ ವಿಚಾರ ಅಲ್ಲ. ಇದು ಹಗುರವಾಗಿ ತೆಗೆದು ಕೊಳ್ಳುವಂಥ ವಿಚಾರ ಅಲ್ಲ. ಒಬ್ಬ ಮಂತ್ರಿಯಾದ ಬಿ.ಎಲ್. ಶಂಕರವರು ಪತ್ರಿಕೆಯಲ್ಲಿ ಕೊಟ್ಟಿರುವ ಹೇಳಿಕೆಯನ್ನು ನಾನು ಓದಿದೆ. ಎಸ್.ಎಸ್. ಪಾಟೀಲ್ ಹಾಗೂ ರೇವಣ್ಣರ ಬಗ್ಗೆ ಶಿಸ್ತು ಕ್ರಮ ತೆಗೆದುಕೊಳ್ಳಬೇಕೆಂದು ಮುಖ್ಯ ಮಂತ್ರಿಗಳಿಗೆ ರೆಕ್ಮಂಡ್ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇದು ಸತ್ಯವೇ? ನನಗೆ ಗೊತ್ತಿಲ್ಲ, ಇದು ಸತ್ಯವಾಗಿದ್ದರೆ ತಾವು ಖಂಡಿತವಾಗಿ ರಾಜೀನಾಮೆಯನ್ನು ಕೊಡಬೇಕು. ಒಬ್ಬ ಮಂತ್ರಿಗಳು ನಿಮ್ಮ ಮೇಲೆ ಆಪಾದನೆ ಮಾಡುತ್ತಿದ್ದಾರೆ. ಸಹಕಾರಿ ಕ್ಷೇತ್ರದಲ್ಲಿ ನೀವು ಹಸ್ತಕ್ಷೇಪ ಮಾಡಿದ್ದೀರಿ, ಪಕ್ಷದ ಅಭ್ಯರ್ಥಿಯ ವಿರುದ್ಧವಾಗಿ ನೀವು ದ್ರೋಹ ಮಾಡಿದ್ದೀರಿ. ಅಂದರೆ ನೇರವಾಗಿ, ನೀವು ಅಧಿಕಾರಗಳನ್ನು ದುರ್ಬಳಕೆ ಮಾಡಿಕೊಂಡು ಸಹಕಾರಿ ಕ್ಷೇತ್ರದಲ್ಲಿ ನಿಮ್ಮ ಪಕ್ಷದ ಹಿಡಿತವನ್ನು ಮಾಡುವುದಕ್ಕೆ ಒಪ್ಪಿಕೊಂಡಂತೆ ಆಯಿತು. ಅವರು ಹೇಳಿದ್ದು ಸತ್ಯವಾಗಿದ್ದರೆ. ರಾಜ್ಯದ ಜನ ನಿಮ್ಮನ್ನು ನೋಡುತ್ತಾರೆ ನೀವು ರಾಜೀನಾಮೆಯನ್ನು ಕೊಡಿ. ಆಗದಿದ್ದರೆ ನೀವು ಸಾಬೀತು ಮಾಡಿಸಿ ಅವರ ಕಡೆಯಿಂದ ನೀವು ರಾಜೀನಾಮೆಯನ್ನು ಕೊಡಿಸಿ. ಸಹಕಾರಿ ಕ್ಷೇತ್ರವೆಂದರೆ ಹುಡುಗಾಟಿಕೆಯೇ ? ಇವರು ಸಹಕಾರಿ ಕ್ಷೇತ್ರಗಳಿಗೆ ಹೋದಾಗ ಇವರ ಭಾಷಣವನ್ನು ಕೇಳಿಸಿಕೊಂಡರೆ ಇವರು ಎಂತಹ ದೊಡ್ಡ ಮನುಷ್ಯ ಎಂದು ಅನ್ನಿಸಿಕೊಳ್ಳಬೇಕು. ಇವತ್ತಿನ ನಿಮ್ಮ ಉತ್ತರ ನಿಮಗೆ ತೃಪ್ತಿ ಎನಿಸಿದ್ದರೆ ಮಂತ್ರಿಯಾಗಿ ನೀವು ಮುಂದುವರೆಯಿರಿ ಅದಕ್ಕೆ ನನ್ನ ಅಭ್ಯಂತರ ಏನೂ ಇಲ್ಲ. ಇದಕ್ಕೆ ನನಗೆ ತೃಪ್ತಿಯಾಗಿಲ್ಲವೆನ್ನುವ ಒಂದು ಪದವನ್ನು ನೀವು ಹೇಳಿದಿರಲ್ಲಾ, ಆ ಪದವನ್ನು ಹೇಳಿ, ನೀವು ಮಂತ್ರಿಯಾಗಿ ಮುಂದುವರೆದರೆ ಯಾವುದೇ ಸರ್ಕಾರಿ ಸಮಾರಂಭದಲ್ಲಿ ನೀವು ಹೋದಾಗ, ಹೋಗುವುದಕ್ಕೆ ನಿಮಗೆ ಹಕ್ಕು ಇಲ್ಲ. ಹೋದರೆ, ಸಹಕಾರಿ ಕ್ಷೇತ್ರದ ಬಗ್ಗೆ ನೀವು ಭಾಷಣ ಮಾಡುವಂಥ ನೈತಿಕ ಹಕ್ಕನ್ನು ನೀವು ಕಳೆದುಕೊಂಡಿದ್ದೀರಿ. ಒಂದು ಪದವನ್ನು ನೀವು ಬಳಸಬೇಡಿ. ಬಸವೇಶ್ವರರ ಹೆಸರು ನಿಮ್ಮ ಬಾಯಿಂದ ಬರುತ್ತದೆ, ಏನು ಮಾತನಾಡುತ್ತೀದ್ದೀರಿ. ನೀವು ವಿಧಾನಸಭೆಯಲ್ಲಿ ಸರ್ಕಾರವನ್ನು ಕೈಯಲ್ಲಿ ಇಟ್ಟುಕೊಂಡು ರಾಜಕಾರಣಕ್ಕೋಸ್ಕರ ಸಹಕಾರಿ ಕ್ಷೇತ್ರವನ್ನು ದುರ್ಬಳಕೆ ಮಾಡಿಕೊಂಡು, ರಾಜಕಾರಣ ಕ್ಕೋಸ್ಕರ ಸಹಕಾರಿ ಕ್ಷೇತ್ರಕ್ಕೆ ಲೈಸನ್ಸ್ ಕೊಡುವುದಕ್ಕೆ ಹೋಗುವ ಈ ಸರ್ಕಾರ, ಅಧ್ಯಕ್ಷರೆ, ರಾಜ್ಯದ ಜನತೆ ಇದನ್ನೇ ತೀರ್ಮಾನ ಮಾಡಬೇಕಾ ? ನೀವು ಒಂದು ಕಾನೂನು ಹೊರಡಿಸುತ್ತೀರಿ. ಒಬ್ಬ ಸಹಕಾರಿ ಸಂಘದ ಅಧ್ಯಕ್ಷ ಅದನ್ನು ಪರಿಪಾಲನೆ ಮಾಡಿದಿದ್ದರೆ ನೀವು ಏನು

ಮಾಡುತ್ತೀರಿ; ಅಲ್ಲಿ ಆಡಳಿತಾಧಿಕಾರಿಯನ್ನು ಹಾಕುತ್ತೀರಿ. ಅಲ್ಲಿ ಇರುವ ಅಧ್ಯಕ್ಷನನ್ನು 6 ವರ್ಷಗಳವರೆಗೂ ಚುನಾವಣೆಗೆ ನಿಲ್ಲಬೇಡ ಎಂದು ನೀವು ಅಧಿಕಾರವನ್ನು ಕಸಿದುಕೊಳ್ಳುತ್ತೀರಿ. ಅವನು ಸಹಕಾರಿಕ್ಷೇತ್ರದ ಒಂದೇ ಒಂದು ನಿಯಮವನ್ನು ಪಾಲನೆ ಮಾಡಲಿಲ್ಲವೆಂದು ಹೇಳಿಕೊಂಡು ಅಲ್ಲಿ ಸಹಕಾರಿ ಸಂಘವನ್ನು ತೆಗೆದು, ಚುನಾಯಿತ ಪ್ರತಿನಿಧಿಯನ್ನು ಕಿತ್ತುಹಾಕಿ, ಆಡಳಿತಾಧಿಕಾರಿಯನ್ನು ಹಾಕಿ, ಆ ಚುನಾಯಿತ ಪ್ರತಿ ನಿಧಿಯನ್ನು ನೀವು 6 ವರ್ಷಗಳವರೆಗೆ ಅಮಾನತ್ತು ಮಾಡುತ್ತಿರಲ್ಲಾ, ನಿಮ್ಮ ಸರ್ಕಾರ ತರುತ್ತಿರುವಂಥ ವಿಚಾರವನ್ನು, ನೀವು ಅದನ್ನು ಒಪ್ಪದೇ ಒಬ್ಬ ಮಂತ್ರಿಯಾಗಿ ಹೇಗೆ ಮುಂದುವರೆಯುತ್ತೀರಿ ? ಇನ್ನು ಎರಡೇ ಉಳಿದಿರುವುದು. ಆತ್ಮಸಾಕ್ಷಿ ಇದ್ದರೆ, ಸಹಕಾರಿ ಕ್ಷೇತ್ರಗಳ ತತ್ವವನ್ನು ಎತ್ತಿ ಹಿಡಿದರೆ, ಆ ಸಿದ್ಧಾಂತಕ್ಕೆ ನಿಮ್ಮ ಆಸಕ್ತಿ ಇದ್ದರೆ ಈ ವಿಷಯವನ್ನು ನಿಮ್ಮ ಮಂತ್ರಿಮಂಡಲದಲ್ಲಿ ಚರ್ಚೆಗೆ ತಂದು ಈ ಬಿಲ್ಲು ವಾಪಸ್ಸು ತೆಗೆದುಕೊಳ್ಳುವಂಥ ಪ್ರಯತ್ನವನ್ನು ನಡೆಸಿ. ಇಲ್ಲವಾದರೆ ಇವರು ರಾಜೀನಾಮೆ ಕೊಡಬೇಕು. ಇದನ್ನು ಬಿಟ್ಟರೆ ನಿಮಗೆ ಯಾವುದೇ ಬೇರೆ ದಾರಿ ಇದೆ ಎಂದು ನನಗೆ ಅನ್ನಿಸುವುದಿಲ್ಲ. ಉಪ ಮುಖ್ಯಮಂತ್ರಿಗಳೇ ನಾನು ಎರಡು ವಿಚಾರವನ್ನು ಹೇಳಿದೆ. ಇನ್ನು ಮುಂದೆ ರಾಜಕೀಯ ಕ್ಷೇತ್ರ ಹಾಗೂ ಸಹಕಾರಿ ಕ್ಷೇತ್ರ ಎರಡೂ ಒಂದೇ ಎನ್ನುವ ತೀರ್ಮಾನವನ್ನು ಮಾಡುವುದಕ್ಕೆ ಎಸ್ ಎಸ್ ಪಾಟೀಲ್‌ರವ ರಂಥವರೂ ಕೂಡ ಹೇಳಬೇಕಾದರೆ, ಈ ವಿಧಾನಸಭೆಯಲ್ಲಿ ಅದಕ್ಕೆ ಪೂರ್ಣ ಅವಕಾಶ ಮಾಡಿಕೊಡುವಂಥ ಸಂದರ್ಭವನ್ನು ತಾವು ಮುಂದಿನ ಪೀಳಿಗೆಗೆ ಅವಕಾಶ ಮಾಡಿಕೊಡುವ ತೀರ್ಮಾನ ಮಾಡಿದರೆ ನನ್ನ ಅಭ್ಯಂತರ ಏನೂ ಇಲ್ಲ. ಈ ಎರಡು ವಿಚಾರಗಳನ್ನು ನಾನು ಹೇಳಿದ್ದೇನೆ. ಈ ಬಿಲ್‌ನ್ನು ವಾಪಸ್ಸು ತೆಗೆದುಕೊಂಡು ಮತ್ತೆ ಸಚಿವ ಸಂಪುಟದಲ್ಲಿ ಚರ್ಚೆ ಮಾಡಿಕೊಂಡು ಇದನ್ನು ಒಂದು ರೂಪಕ್ಕೆ ತರುತ್ತೀರಾ; ಇಷ್ಟು ವರ್ಷ ನೀವು ಸಹಕಾರಿ ಕ್ಷೇತ್ರದಲ್ಲಿ ದುಡಿದು ತೀರ್ಮಾನ ಮಾಡಿಕೊಂಡು ಬಂದಿರುತ್ತೀರಿ ಅದಕ್ಕೆ ನೀವು ಬದ್ಧರು. ಇಲ್ಲವಾದರೆ ನೀವು ರಾಜೀನಾಮೆ ಕೊಡಬೇಕು. ಎರಡರಲ್ಲಿ ಯಾವುದಾದರೊಂದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕೆಂಬುದು ನನ್ನ ಆಶೆ. ನೀವು ಅನೇಕ ವರ್ಷಗಳಿಂದ ಸಹಕಾರಿ ಕ್ಷೇತ್ರದಲ್ಲಿ ಒಳ್ಳೆಯ ಕೆಲಸವನ್ನು ಮಾಡಿಕೊಂಡು ಬಂದಿ ರುತ್ತೀರಿ. ಒಬ್ಬ ಒಳ್ಳೆಯ ಆದರ್ಶ ಸಹಕಾರಿ ಮನುಷ್ಯ ಎಂದು ಹೆಸರನ್ನು ಪಡೆದಿರುತ್ತೀರಿ. ಈಗಲೂ ಕೂಡ ನೀವು ತೀರ್ಮಾನವನ್ನು ಮಾಡಿ ನಾನು ಖಂಡಿತವಾಗಿ ಈ ಬಿಲ್‌ನ್ನು ಪಾಸು ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು ಸಹಕಾರಿ ಮಂತ್ರಿಯಾಗಿ ನೀವೇ ಉತ್ತರವನ್ನು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು : ನೀವು ರಿಪ್ಲೈ ಕೊಡಿ. ಇನ್ನು ಯಾರಿಗೂ ಅವಕಾಶ ಕೊಡುವುದಿಲ್ಲ. ಬಹಳಷ್ಟು ಚರ್ಚೆ ಆಯಿತು, ಇಡೀ ದಿವಸ ಅದೇ ಚರ್ಚೆ ಆದರೆ ಬೇಡಿಕೆ ಬಗ್ಗೆ ಏನು ಮಾಡುತ್ತೀರಿ ?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :- ಮಾನ್ಯ ಸಭಾಧ್ಯಕ್ಷರೆ, ಇದು ಒಂದು ವಿವರವಾದ ಚರ್ಚೆ ನಡೆದಿದೆ. ಬಹುಶಃ ನನ್ನ ನೈತಿಕತೆಯ ಬಗ್ಗೆ, ನನ್ನ ಆತ್ಮ ಗೌರವದ ಬಗ್ಗೆ ಇಲ್ಲಿ ಚರ್ಚೆ ನಡೆದಿದೆ. ಬಹುಶಃ ನನಗೆ ಅನ್ನಿಸುತ್ತದೆ, ನಾನು ನನ್ನ ಆತ್ಮ ಗೌರವವನ್ನು ಕಳೆದುಕೊಂಡು ನಾನು ಇಲ್ಲಿ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅವರಿಗೆ ಏನು ಅರ್ಥವಾಗಿದೆಯೋ ನನಗೆ ತಿಳಿದಿಲ್ಲ. ಅವರ ವಿಚಾರದಲ್ಲಿ ಅವರ ಅರ್ಥದಲ್ಲಿ ಅವರು ಮಾತನಾಡುತ್ತಿದ್ದಾರೆ. ಬಹುಶಃ ನನಗೆ ಅನ್ನಿಸುತ್ತದೆ. ಈ ಒಂದು ದೇಶದಲ್ಲಿ, ನಾವು ಒಂದು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಪಕ್ಷದ ವ್ಯವಸ್ಥೆಯಲ್ಲಿ ಬಂದಿದ್ದೇವೆ. ನಾವು ಒಂದು ಪಕ್ಷದ ವ್ಯವಸ್ಥೆಯಲ್ಲಿ ಬಂದಾಗ, ಆ ಪಕ್ಷದ ತೀರ್ಮಾನಕ್ಕೆ

ಬದ್ಧರಾಗಿ ಇರಬೇಕು ಒಂದು, ಇಲ್ಲವೇ ಆ ಪಕ್ಷವನ್ನು ಬಿಟ್ಟು ಹೊರಗೆ ಹೋಗಬೇಕು. ಇದು ನನ್ನ ತತ್ವ. ವೈಯಕ್ತಿಕವಾಗಿ ನಮ್ಮದು ಏನೇ ಇದ್ದರೂ ಕೂಡ ಎಲ್ಲರೂ ಒಂದೇ ತತ್ವದಲ್ಲಿ ಇದ್ದಾರೆಂದು ಅಲ್ಲ. ಎಷ್ಟೋ ಸಲ ಖರ್ಗೆರವರ ಮನಸ್ಸಿಗೆ ಒಪ್ಪದೇ ಇದ್ದರೂ, ಅವರ ಪಕ್ಷದ ತೀರ್ಮಾನಕ್ಕೆ ಒಪ್ಪಿಕೊಳ್ಳಬೇಕಾಗುತ್ತದೆ. ಹಾಗೆಯೇ ಈಶ್ವರಪ್ಪನವರ ವಿರುದ್ಧ ಅವರು ಮಾಡಬಾರದು ಎಂದಿದ್ದರೂ ಆದರೆ ಆ ಪಕ್ಷದ ಜನರು ಮಾಡಿದರೆ, ಅದು ಸರಿ ಎಂಬುದು ನನ್ನ ಭಾವನೆ.

4.50 ಪಿ.ಎಂ.

ಆ ಒಂದು ದೃಷ್ಟಿಯಿಂದ ಈ ಒಂದು ಸುಗ್ರಿವಾಜ್ಞೆ ಮುಖಾಂತರ ಸಂಪೂರ್ಣವಾಗಿ ಆ ಸಹಕಾರಿ ಕ್ಷೇತ್ರವನ್ನೇ ಹಾಳು ಮಾಡಿದೆ ಎನ್ನುವಂತಹ ಮಾತು ಸರಿಯಲ್ಲ. ಬಹಳಷ್ಟು ಬದಲಾವಣೆಗಳನ್ನು ನಾವು ತಂದಿದ್ದೇವೆ. ಯಾರು ಮಾಡಲಿಕ್ಕೆ ಸಾಧ್ಯವಾಗದಂತಹ ಬದಲಾವಣೆಗಳನ್ನು ತಂದಿದ್ದೇವೆ. ತಾವೆಲ್ಲಾ ಅದಕ್ಕೆ ಒಪ್ಪಿಕೊಂಡಿದ್ದೀರಿ.

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಅಧ್ಯಕ್ಷರೆ, ಇದು ಫಂಡಮೆಂಟಲ್ ಚೇಂಜ್. ಏಕೆಂದರೆ, ಆಮೇಲೆ ತಾವು ರಾಜಕೀಯವಾಗಿ: ಆಡಳಿತಾತ್ಮಕವಾಗಿ ಏನಾದರೂ ಹೇಳಿ. ತಾವು ಈಗ ತಮ್ಮ ಭಾಷಣವನ್ನು ಪ್ರಾರಂಭ ಮಾಡಿದ್ದೀರಿ, ಅದು ಸರಿಯಲ್ಲ. ತಾವು ರಾಜ್ಯಪಾಲರ ರಾಜಭವನದಲ್ಲಿ ಮಂತ್ರಿಗಳಾಗಿ ಪ್ರತಿಜ್ಞಾವಿಧಿಯನ್ನು ಸ್ವೀಕಾರ ಮಾಡಿರುತ್ತಿರೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ತಾವು ಜನತಾಪಾರ್ಟಿ ಆಫೀಸಿನಲ್ಲಿ ಪ್ರತಿಜ್ಞಾ ಸ್ವೀಕಾರ ಮಾಡಿದ್ದೋ ಅಥವಾ ರಾಜಭವನದಲ್ಲಿ ಮಾಡಿದ್ದೋ ಎಂಬ ಬಗ್ಗೆ ಸ್ಪಷ್ಟೀಕರಣ ನೀಡಬೇಕು. ಏಕೆಂದರೆ ತಾವು ಮಂತ್ರಿಗಳಾಗಿ ಸಂವಿಧಾನಬದ್ಧವಾಗಿ ಪ್ರಮಾಣವಚನ ಸ್ವೀಕರಿಸಿದ್ದೀರಿ ಅದಕ್ಕೆ ತಾವು ಬದ್ಧರಾಗಿರಬೇಕಾಗುತ್ತದೆ. ಈಗ ತಾವು ಬಹಳ ಕೆಟ್ಟ ಹೆಜ್ಜೆಯನ್ನು ಇಡುತ್ತಿದ್ದೀರಿ. That means you are not loyal to the Constitution and the oath you have taken.

ಅವರು ಮಾತನಾಡಿದ್ದರಲ್ಲಿ ದ್ವಂದ್ವ ಇದೆ. ದಯಮಾಡಿ ತಾವು ಆಲೋಚನೆ ಮಾಡಿ.

That is the meaning which he has conveyed.

ನಾನು ಪಕ್ಷಕ್ಕೆ ನಿಷ್ಟನಾಗಿರಬೇಕಾಗಿದೆ. ಅದಕ್ಕೆ ನಾನು ಒಪ್ಪದಿದ್ದರೂ ಕೂಡ ಇದನ್ನು ಒಪ್ಪುತ್ತೇನೆಂದು ಹೇಳಿದರು.

ಅಧ್ಯಕ್ಷರು :- ಅವರು ಏನು ಹೇಳಿದರೆಂದರೆ, ಆತ್ಮಸಾಕ್ಷಿ ಅತ್ಮಗೌರವದ ಬಗ್ಗೆ ಎಲ್ಲಾ ಹೇಳಿದ್ದಾರೆ. ವೈಯಕ್ತಿಕವಾಗಿ ಇಚ್ಚೆಪಟ್ಟಿದ್ದು ಆಗದೇ ಇದ್ದರೂ ನಾವು ಒಂದು ಪಕ್ಷದ ವ್ಯವಸ್ಥೆಯಲ್ಲಿದ್ದಾಗ ಪಕ್ಷದ ತೀರ್ಮಾನವನ್ನು ನಮ್ಮ ವೈಯುಕ್ತಿಕ ಅಭಿಪ್ರಾಯಕ್ಕೆ ವಿರುದ್ಧವಾಗಿದ್ದರೂ ಕೂಡ ನಾವು ಒಪ್ಪಬೇಕಾಗುತ್ತದೆ ಎಂಬ ಮಾತನ್ನು ಅವರು ಹೇಳಿದರು. ಅದು ನಿಮಗೂ ಆಗಿರುತ್ತದೆ, ಈಶ್ವರಪ್ಪನವರಿಗೂ ಆಗಿರುತ್ತದೆ ಎಂದು ನಾನು ಉದಾಹರಣೆಯನ್ನು ಕೊಟ್ಟು ಹೇಳಿದೆ.

ಶ್ರೀ ಎಂ. ವೀರಪ್ಪಮೊಯಿಲಿ : ಅಧ್ಯಕ್ಷರೆ, ನಾವು ಇವತ್ತು ವಿಧಾನಸೌಧದಲ್ಲಿ ಕುಳಿತುಕೊಂಡು ಏನು ಮಾಡುತ್ತಿದ್ದೇವೆಂದು ಹೇಳಿದರೆ, ನಾವು ಸರ್ಕಾರದ ಅಭಿಪ್ರಾಯ ಏನೆಂದು ಕೇಳುತ್ತಿದ್ದೇವೆ. ತಾವು ಮಂತ್ರಿಯಾಗಿ ಈ ಮಸೂದೆಯನ್ನು ಈ ಕಾರಣಕ್ಕಾಗಿ ತಂದಿದ್ದೇವೆಂದು ಹೇಳಿ, ಅದು ಬಿಟ್ಟು ಪಕ್ಷ ಇಚ್ಚೆಪಟ್ಟಿದೆ. ಅದಕ್ಕಾಗಿ ಒಪ್ಪಿಕೊಳ್ಳಬೇಕಾಗಿದೆ ಎಂದು ಹೇಳಿದರೆ ಸರಿಯಲ್ಲ. ನಾವು ಸಂವಿಧಾನದಲ್ಲಿ ನಿಷ್ಠೆಯಾಗಿರುವುದನ್ನು ಮಾತ್ರ ಒಪ್ಪಿಕೊಳ್ಳಬೇಕಾಗುತ್ತದೆ. ಪಕ್ಷದ ನಿಷ್ಠೆಯನ್ನು

ಪ್ರತಿಪಾದಿಸತಕ್ಕಂತಹ ವೇದಿಕೆ ಇದಲ್ಲ. ಅದನ್ನು ಪಕ್ಷದ ವೇದಿಕೆಯಲ್ಲಿ ಮಾಡಲಿ. As a minister what is your view ? He has to speak as a responsible Minister. He has taken the oath not as a person who is loyal to the party.

ತಮ್ಮ ಸಂವಿಧಾನದ ನಿಷ್ಠೆ ಏನು ಇದೆ. ನಿಮ್ಮ ಮಂತ್ರಿಮಂಡಲದ ನಿಷ್ಠೆ ಏನು ಇದೆ. ಇದನ್ನು ಹೇಳಿ Whether he defends this move or not ? He is responsible to this House and through this House he is responsible to the people. As a minister he defends this or not?-

ನಮಗೆ ಅಷ್ಟೇ ಬೇಕು. ನಿಮ್ಮ ವೈಯುಕ್ತಿಕ ಅಭಿಪ್ರಾಯ ಬೇಕಾಗಿಲ್ಲ.

ಶ್ರೀ ಎಸ್. ಎಸ್. ಪಾಟೀಲ್(ಸಹಕಾರಿ ಸಚಿವರು) :- ಸಂವಿಧಾನ ಬದ್ಧವಾಗಿ ಇದಕ್ಕೆ ಜನತಾದಳ ಸರ್ಕಾರ ಎಂದು ಹೇಳುತ್ತಾರೆ. ಇದರ ಪ್ರಶ್ನೆ ಏತಕ್ಕೆ? ಮಂತ್ರಿಮಂಡಲದ ನಿರ್ಣಯಕ್ಕೆ ಬದ್ದನಾಗಿದ್ದೇನೆಂದು ನಾನು ಮೊದಲೇ ಹೇಳಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ :- ಸಹಕಾರಿ ಕ್ಷೇತ್ರದ ಮೌಲ್ಯವನ್ನು ಎತ್ತಿ ಹಿಡಿಯುತ್ತೇನೆ. ಇಲ್ಲವೆಂದರೆ ರಾಜೀನಾಮೆ ಕೊಡುತ್ತೇನೆಂದು ತಾವು ಹೇಳಿದ್ದಿರೋ ಇಲ್ಲವೋ ; ಸಹಕಾರಿ ಕ್ಷೇತ್ರದ ಮೌಲ್ಯವನ್ನು ಎತ್ತಿ ಹಿಡಿಯುತ್ತೇನೆ. ನನ್ನ ಮನಸ್ಸಿಗೆ ಸಮಾಧಾನವಾಗಿಲಿಲ್ಲವೆಂದರೆ ರಾಜೀನಾಮೆ ಕೊಡುತ್ತೇನೆಂದು ಹೇಳಿದ್ದಿರೋ ಇಲ್ಲವೋ?

ಶ್ರೀ ಎಸ್.ಎಸ್ ಪಾಟೀಲ್ :- ನಾನು ಆ ಮಾತನ್ನು ಹೇಳಿಲ್ಲ. ಸುಮ್ಮನೆ ಏಕೆ ಹೇಳುತ್ತಿದ್ದೀರಿ.

ಶ್ರೀ ಕೆ.ಎಸ್. ಈಶ್ವರಪ್ಪ :- ಅಧ್ಯಕ್ಷರೆ, ಅವರು ಹೇಳಿಲಿಲ್ಲವೆಂದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಅವರು ಹೇಳಿರುವುದು ಸರಿಯೋ, ತಪ್ಪೋ ಎಂಬುದನ್ನು ಜನರೇ ತೀರ್ಮಾನ ಮಾಡಲಿ, ಪತ್ರಿಕೆಯವರೇ ತೀರ್ಮಾನ ಮಾಡಲಿ.

ಶ್ರೀ ಎಸ್.ಎಸ್. ಪಾಟೀಲ್ : ಆರ್ಡಿನನ್ಸ್ ಮೇಲೆ ಚರ್ಚೆಯಾಗಿದೆ. ಚರ್ಚೆಯಾದಾಗ ಅಧ್ಯಕ್ಷರು, ಇವತ್ತು ಹೇಗೆ ನನ್ನ ರಕ್ಷಣೆಗೆ ಬಂದರೋ ಹಾಗೆಯೇ ಅವತ್ತು ಬಂದರು. ಇವತ್ತು ಒಂದು ಸುಗ್ರೀವಾಜ್ಞೆಯನ್ನು ಹೊರಡಿಸುವುದರ ಮುಖಾಂತರ ಎಸ್.ಎಸ್. ಪಾಟೀಲರು ಸಹಕಾರಿ ಕ್ಷೇತ್ರವನ್ನು ಹಾಳುಮಾಡಿದರು ಎನ್ನುವ ಮಾತು ಸರಿಯಲ್ಲ.

Sri M. VEERAPPA MOILY :- Ultimately the entire Manthrimandala (Cabinet) they are a a gang of Villains and he is the only hero among the Manthrimandala (Cabinet). This is the ultimate result of this discussion.

ಶ್ರೀ ಎಸ್.ಎಸ್. ಪಾಟೀಲ್ :- ಹಾಗೆ ಅರ್ಥಮಾಡಿಕೊಂಡರೆ ಹೇಗೆ? ಅದನ್ನು ಹೇಗೆ ಮಾಡುವುದಕ್ಕಾಗುತ್ತದೆ ? ಈಗ ಎರಡು ಕಾಯಿದೆಗಳನ್ನು ತಂದಿದ್ದೇನೆ.

ಅಧ್ಯಕ್ಷರು :- ಅವರು ಕ್ಯಾಷುಯಲ್ ಆಗಿ ಹೇಳಿದರು. Do you want it to remain on record? Because nobody has objected I would allow it to remain. It is not in good taste.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ಸಚಿವರು) :- ಮಾನ್ಯ ಅಧ್ಯಕ್ಷರೆ ಮೊಯಿಲಿಯವರು ಬಳಸಿದಂತಹ ಪದದ ಬಗ್ಗೆ ನಾನು ಹೇಳಿದೆ. ಈಗ ತಾವು ಎರಡು ವರ್ಷ ಮುಖ್ಯಮಂತ್ರಿಗಳಾಗಿದ್ದೀರಿ, ನಿಮ್ಮ ಅಭಿಪ್ರಾಯವನ್ನು ಬಹುತೇಕ ಸಚಿವಸಂಪುಟದ ಸದಸ್ಯರು

ಒಪ್ಪಿರಲಿಲ್ಲ. ಆಗ ನೀವು ಒಬ್ಬರು ವಿಲನ್ ಎಂದು ಆಯಿತಾ? It should not come from the mouth of the Ex-Chief Minister. It should not go on record. How can you characterise a Minister? It should not go on record.

ಶ್ರೀ ಎಂ. ವೀರಪ್ಪಮೊಯ್ಲಿ : ಅನಪಾರ್ಲಿಮೆಂಟರಿಯಾಗಿ ಹೇಳಿರುವುದೇನು?

(INTERRUPTIONS)

SRI M.C. NANAIAH : How can you characterise the cabinet and how can you characterise the minister? To that extent, it should not go on record. If it is not unparliamentary ತಾವು ಮುಖ್ಯಮಂತ್ರಿಯಾಗಿದ್ದಾಗ ತಾವು ತೆಗೆದುಕೊಂಡ ತೀರ್ಮಾನಗಳ ಬಗ್ಗೆ...

You became a villain, all others became wise people, is it? Can we say like that?

ಶ್ರೀ ಎಂ. ವೀರಪ್ಪಮೊಯ್ಲಿ :- ಇಷ್ಟೆಲ್ಲಾ ಹೇಳುವಾಗ ಮಂತ್ರಿಮಂಡಲದ ಸದಸ್ಯರು ಮೂಕಪ್ರೇಕ್ಷಕರಾಗಿ ಕುಳಿತುಕೊಂಡಾಗ ಜನರು ಏನು ತಿಳಿದುಕೊಳ್ಳಬೇಕು ?

One minister standing up and saying he stands on principle, but others put pressure on me ಎಂದು ಹೇಳಿದರೆ ಏನು ಅರ್ಥ ? ಈ ಮಾತನ್ನು ವಿಧಾನಸೌಧದ ಹೊರಗಡೆ ಹೇಳಿದರೆ ನನಗೆ ಅರ್ಥವಾಗುತ್ತದೆ.

ಮಾನ್ಯ ಸದಸ್ಯರು :- ಅವರು ವೈಯುಕ್ತಿಕವಾಗಿ ಹೇಳಿದ್ದಾರೆ.

SRI M. VEERAPPA MOILY :- ಅವರು ವೈಯುಕ್ತಿಕ ಅಭಿಪ್ರಾಯವೆಂದು ಹೇಳಲಿ. ಆದರೆ ಇದು ಒಂದು ಮಂತ್ರಿಮಂಡಲದ ವಿಚಾರ. ಮಂತ್ರಿಗಳು ಹೇಳುವುದು ಜಂಟಿ ಜವಾಬ್ದಾರಿಗೆ ಘಾತುಕವಾದಂತಹ ಮಾತು.

I don't think one minister can stand up and say, all other ministers put pressure on me, so I agreed, otherwise I was not willing. what does it mean ? I have not heard this kind of a principle of joint responsibility. I have also functioned as a Minister for twenty years. ಅವರು ಈ ಮಾತನ್ನು ವಿಧಾನಸೌಧದ ಒಳಗಡೆ ಹೇಳುವಂತದ್ದಲ್ಲ. ಅವರು ಬೇಕಾದರೆ ಹೊರಗಡೆ ಹೇಳಿಕೊಳ್ಳಲಿ it is an assault on the joint responsibility of the entire ministry. This is what I feel personally. All of them may not agree. This is the limited knowledge of constitution and functioning of the ministry.

ಶ್ರೀ ಎಂ. ಸಿ. ನಾಣಯ್ಯ :- ಮಾನ್ಯ ಪಾಟೀಲರು ಹೇಳಿರತಕ್ಕಂತಹ ವಿಚಾರದ ಬಗ್ಗೆ...

'It is an assault on democracy, it is an assault on constitution' ಎಂದು ಹೇಳಿದ್ದೀರಿ. Probably, I feel now, Mr. Moily, with all his rich experience of more than about 25 years and being the chief Minister of Karnataka for more than two years, I don't know whether he has understood the concept of joint responsibility. I feel so now.

ಶ್ರೀ ಎಂ. ವೀರಪ್ಪಮೊಯ್ಲಿ :- ತಾವು ಅಡ್ಡದಾರಿಗೆ ಎಳೆಯಬೇಡಿ.

(Interruptions)

ಶ್ರೀ ಎಂ.ಸಿ. ನಾಣಯ್ಯ : ನಾನು ಅಡ್ಡದಾರಿಗೆ ಹೋಗುವುದಿಲ್ಲ. ಆದರೆ ನೀವು ಅಡ್ಡದಾರಿಗೆ ಹೋದಷ್ಟು ಇಡೀ ಕರ್ನಾಟಕ ರಾಜ್ಯದಲ್ಲಿ ಯಾರೂ ಹೋಗಿಲ್ಲ. ಆದರಿಂದ ಎಷ್ಟು ಅನುಭವಿಸಿದ್ದೇವೆ

ಎನ್ನುವುದು ತಮಗೆ ಗೊತ್ತಿದೆ.

Probably, records of this House will show as Chief Minister what has happened. Well, I think, that is history now. It has gone into the records of legislature now.

ಶ್ರೀ ಹೆಚ್ ಶಿವಪ್ಪ :- ಲಿಮಿಟೆಡ್ ನಾಲೆಡ್ಜ್ ಎನ್ನುವುದನ್ನು ಕಡತದಿಂದ ತೆಗೆಯಬೇಕು. ಲಿಮಿಟೆಡ್ ನಾಲೆಡ್ಜ್ ಎಂದು ಹೇಳಿದರೆ ನಾವು ದಡ್ಡರೆಂದು ಅರ್ಥವೇ?

SRI M.C. NANAIAH : No body can claim to have full knowledge of everything.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಈ ರೀತಿ ಪ್ರೋಲಾಂಗ್ ಮಾಡುವುದಕ್ಕಿಂತ ಚರ್ಚೆಗೆ ಅವಕಾಶ ಮಾಡಿಕೊಟ್ಟರೆ ಒಳ್ಳೆಯದು. ನಿಜಾಂಶ ಹೊರಬರುತ್ತದೆ.

ಶ್ರೀ ಎಂ.ಸಿ. ನಾಣಯ್ಯ:- ಈ ವಿಷಯವನ್ನು ಎತ್ತಿದ್ದು ನೀವಲ್ಲವೋ?

ಅಧ್ಯಕ್ಷರು :- ನಾನು ಡಿಸ್‌ಪ್ಯಾಷನೇಟ್ ಆಗಿ ಇರಬೇಕಲ್ಲವೇ?

ಶ್ರೀ ಎಂ.ಸಿ. ನಾಣಯ್ಯ :- ಸನ್ಮಾನ್ಯ ಹಿರಿಯ ಸದಸ್ಯರಾದ ಮೊಯಿಲಿಯವರು ಮಂತ್ರಿಗಳ ಬಗ್ಗೆ ಆಡಿರುವ ಆ ಪದ ಏನಿದೆ It may not be unparlimentary. But let me tell it is not relevant to the situation. I request you Sir, it should go off the record.

ಶ್ರೀ ಎಂ. ವೀರಪ್ಪಮೊಯಿಲಿ : ದಯಮಾಡಿ ರೆಕಾರ್ಡ್ ತೆಗೆಸಿ ನೋಡಬೇಕು. ನಾನು ಏನು ಹೇಳಿದ್ದೇನೆ? ಮಾನ್ಯಮಂತ್ರಿಗಳು ಹೇಳತಕ್ಕ ಮಾತುಗಳಿಂದ ಏನು ಭಾವನೆಯಾಗುತ್ತದೆಂದು ಹೇಳಿದ್ದೇನೆ. ನಾನು ಅವರಿಗೆ ಹೇಳಲಿಲ್ಲ. ಒಬ್ಬ ಮಿನಿಸ್ಟರ್ he is the hero, rest of them are villains-- ಎನ್ನುವ ಭಾವನೆ ಬರುತ್ತದೆಂದು ಹೇಳಿದೆ. I never called them as (a gang of villains.) If it is so, I withdraw. It is not so. ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಜವಾಬ್ದಾರಿಯುತವಾಗಿ ಹೇಳಿದ್ದೇನೆ. ಈ ಭಾವನೆ ಬರುತ್ತಾ ಇದೆಯೆಂಬುದಾಗಿ ಹೇಳಿದ್ದೇನೆಯೇ ಹೊರತು I have not said that they are gang of Villains, he is hero)

MR. SPEAKER :- I Know that. I am hearing you.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಹಾಗೆ ಅವರು ಹೇಳಲಿಲ್ಲ.

SRI M.C. NANAIAH :- Let me tell you Sir, that particular observation made by Mr. Moily should go off the record. It shall not be. It is not in good taste.

ಏಕೆಂದರೆ ಆ ಭಾವನೆ ಬರುವಹಾಗೆ ನಾನು ಹೇಳಲಿಲ್ಲವೆಂದರೆ, ಅನಪಾರ್ಲಿಮೆಂಟರಿ ಪದಗಳನ್ನು ಬಳಸುತ್ತಿರತಕ್ಕ ಸಂದರ್ಭದಲ್ಲಿ....

ಅಧ್ಯಕ್ಷರು : ನಾನು ಮಾನ್ಯ ಮೊಯಿಲಿಯವರು ಹೇಳಿದ ಪದಗಳನ್ನು ಕೇಳಿದ್ದೇನೆ.

ಶ್ರೀ ಕಾಗೋಡುತಿಮ್ಮಪ್ಪ : ನೀವು ಎಲ್ಲಾ ಒತ್ತಾಯ ತಂದಿದ್ದೀರಿ.

ಶ್ರೀ ಎಂ.ಸಿ. ನಾಣಯ್ಯ : ನಾವು ಏಕೆ ಒತ್ತಾಯ ತರಬೇಕು?

ಅಧ್ಯಕ್ಷರು : ಸನ್ಮಾನ್ಯ ಹಿರಿಯ ಸದಸ್ಯರಾದ ಮೊಯಿಲಿಯವರು ಹೇಳಿದ ಮಾತುಗಳನ್ನು ನಾನು ಬಹಳ ಜಾಗರೂಕತೆಯಿಂದ ಕೇಳಿದ್ದೇನೆ. ಅವರು ಎರಡನೆಯ ಸಲ ಸ್ಪಷ್ಟೀಕರಣ ಕೊಡುವಾಗ ಏನು ಹೇಳಿದರು ಅದೇ ಅರ್ಥದಲ್ಲಿ ಅವರು ಹೇಳಿದ್ದಾರೆ. ಅವರು ಏನೂ ಚಾರ್ಜ್ ಮಾಡಿಲ್ಲ. ಆದರೂ ತಮ್ಮಲ್ಲಿ ನಾನೇನು ವಿನಂತಿ ಮಾಡಿಕೊಳ್ಳುತ್ತೇನೆಂದರೆ, ಆ ಪದಗಳು ನಾಳೆ ಪ್ರಚಾರಕ್ಕೆ ಬರುವಾಗ it

may not be in good taste. ನಮ್ಮ ಸದನದ ಪರಂಪರೆಯಲ್ಲಿ ಅವರು ಎಂದೂ ಆ ತರಹ ಮಾತನಾಡುವವರಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ : ಹಾಗಾದರೆ ಬಹಳಷ್ಟು ಶಬ್ದಗಳನ್ನು ತೆಗೆಯಬೇಕಾಗುತ್ತದೆ. ಏಕೆಂದರೆ, innuendo-ಇರಲೇಬಾರದಾ? ಭಾವನೆ ಒಬ್ಬ ಸದಸ್ಯನಲ್ಲಿ ಸದ್ಭಾವನೆ ಬಂತು ಅಂದರೆ ಆ ಭಾವನೆ ಸರಿಯಲ್ಲವೆಂದು ಕ್ಲಾರಿಫಿಕೇಷನ್‌ನ ಅವರು ಕೊಡಬಹುದು. ಬೆಳಿಗ್ಗೆಯಿಂದ ತಾವು ಕೆಲವು ಸಮಯ ಸಭೆಯಲ್ಲಿ ಇರಲಿಲ್ಲ. ಬೆಳಿಗ್ಗೆಯಿಂದ ನಾನು ಇಲ್ಲಿ ಚರ್ಚೆಗಳನ್ನು I was observing. ಇದರಲ್ಲಿ ಏನು ಕಾಣುತ್ತಿತ್ತು? ನಮ್ಮ ಸನ್ಮಾನ್ಯ ಎಸ್.ಎಸ್. ಪಾಟೀಲರೇ ತಪ್ಪಿತಸ್ಥರೆಂದು ಎಲ್ಲರೂ ಆಪಾದನೆ ಮಾಡುತ್ತಿದ್ದರು. ಈಗ ನಮಗೆ ಅರ್ಥವಾಗಿದ್ದು ಏನು ? ಅವರು ತಪ್ಪಿತಸ್ಥರಲ್ಲ, ಉಳಿದ ಮಂತ್ರಿಮಂಡಲದ ಸದಸ್ಯರು ತಪ್ಪಿತಸ್ಥರು ಎಂದು ಒಂದು ಇಡೀ ಸದನ ಚರ್ಚೆಯಿಂದ ನಮಗೆ ಬರುತ್ತದೆ ಎಂದು ಹೇಳುವುದರಲ್ಲಿ ಒಂದು ತೀರ್ಮಾನಕ್ಕೆ ಬಂದ ಮೇಲೆ ಈ ಅಬ್ಸರ್ವೇಷಶನ್, ಈ ಭಾವನೆಗಳು ಏನು ತಪ್ಪು?

ಶ್ರೀ ವಿ. ಮುನಿಯಪ್ಪ: ಸಹಕಾರ ತತ್ವಕ್ಕೆ ಈ ಬಿಲ್ ವಿರೋಧವೆಂದು ಕಾಣುತ್ತಿದೆ.

ಶ್ರೀ ಎಂ.ಸಿ. ನಾಣಯ್ಯ : ಆಯಿತು, ತಾವು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ) :- ಮಾನ್ಯ ಅಧ್ಯಕ್ಷರೆ ಈ ಸಭೆಯಲ್ಲಿ ಹಿಂದಿನ ವಿಧಾನಸಭೆಗಳಲ್ಲಿ ಆಲಿಬಾಬ ಮತ್ತು ನಲವತ್ತು ಮಂದಿ ಕಳ್ಳರು ಎಂದೂ ಉಪಯೋಗಿಸಿದ್ದಾರೆ. ಅದು ರೆಕಾರ್ಡ್‌ನಲ್ಲಿದೆ. ಅದು ಯಾವುದೂ ರೆಕಾರ್ಡ್‌ನಿಂದ ಹೋಗಿಲ್ಲ. ಈಗ ಕಠೋರವಾಗಿ ಕಠಿಣವಾಗಿ ಸರ್ಕಾರಕ್ಕೆ ಚಿತ್ರಣ ಕೊಡಬೇಕಾದರೆ ಕಠೋರವಾದ ಪದಗಳನ್ನು ನಾವು ಬಳಸಬೇಕಾಗುತ್ತದೆ. ಗಾದೆಗಳು ಅದಕ್ಕೆ ಉಳಿದುಕೊಂಡು ಬಂದಿವೆ. ಅದು ಕಠೋರವಾಗಿದೆ. ಒಂದು ಗಂಟೆ ಹೇಳುವ ವಿಚಾರವನ್ನು ಒಂದು ಮಾತಿನಲ್ಲಿ ಹೇಳಬೇಕಾದರೆ ಕಠೋರವಾಗಿ ಹೇಳಬೇಕಾಗುತ್ತದೆ. ಕಠೋರವಾದ ಪದಗಳೇ ಬರುತ್ತವೆ. ಅದನ್ನು ಲೈಟ್ ಸ್ಪಿರಿಟಿನಲ್ಲಿ ನೀವು ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ. ಅದು ನಮ್ಮ ವಿವೇಚನೆಗೆ ಬಿಟ್ಟಿದ್ದು. ಅದು ಅನಪಾರ್ಲಿಮೆಂಟರಿ ಅಂದರೆ ನೀವು ತೆಗೆದುಹಾಕಿ. ಅದು ಮಾತನಾಡುವವರ ವಿವೇಚನೆಗೆ ಬಿಟ್ಟಿದ್ದು.

ಅಧ್ಯಕ್ಷರು : ಇಲ್ಲ. ಮಾನ್ಯ ಮೊಯಿಲಿಯವರು ಚಾರ್ಜ್ ಮಾಡಿಲ್ಲ ಅನ್‌ಪಾರ್ಲಿಮೆಂಟರಿ ಲಾಂಗವೇಜ್ ಯೂಸ್ ಮಾಡಿಲ್ಲ. He made use of his parliamentary skills and he has made a reference. What I said, it is not in good taste.

ಶ್ರೀ ಎಂ.ಪಿ. ಪ್ರಕಾಶ್ : ಇಂತಹ ವಿಚಾರಗಳು ಅನೇಕಸಾರಿ ಚರ್ಚೆಗಳಾಗಿವೆ. ಅವರು ಹೇಳಿದಹಾಗೆ ಸಂಸದೀಯ ವಿಚಾರದಲ್ಲಿ ಕೊಡು ಕೊಳ್ಳುವುದು ಇದ್ದಾಗ ಮಾತ್ರ ಚರ್ಚೆಗಳು ಲವಲವಿಕೆಯಿಂದ ಇರುತ್ತದೆ. ಹಿಂದೆ ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನಮಂತ್ರಿಗಳಾಗಿದ್ದಾಗ "she was the only he in the cabinet" ಎಂದು ಹೇಳಿದರು. It does not mean casting aspersions on other persons ಎಂದು ಹೇಳಿದರು. ಆ ತರಹದಲ್ಲಿ ನಾವು ಅಂದುಕೊಳ್ಳುತ್ತೇವೆ ಅಷ್ಟೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದು ನಿಮಗೆ ಅಪ್ಲಿಕಬಲ್ ಆದರೆ ನಿಮಗೂ ಅದನ್ನು ಮಾಡಿಕೊಳ್ಳಿ. ಏಕೆಂದರೆ ಬಹಳ ಜನ ಕಾಂಗ್ರೆಸ್‌ನವರು ಇದ್ದರು; ಈಗ ಪ್ರಶ್ನೆ ಅದು ಬಂದಿಲ್ಲ. ಇಲ್ಲಿ ಪ್ರಶ್ನೆ

ಏನೆಂದರೆ, ಅವರು ಮಾತನಾಡುವಾಗ ತಾವು ಲೇಟ್ ಮಾಡಿ ಬಂದಿರಿ, ಮಾನ್ಯ ಉಪಾಧ್ಯಕ್ಷರು ಪೀಠದಲ್ಲಿದ್ದರು. ಆಗ ಅವರು ಏನು ಹೇಳಿದ್ದಾರೆಂದರೆ, ಇವತ್ತಿಗೂ ಕೂಡ ನನ್ನ ಆತ್ಮಸಾಕ್ಷಿಯಾಗಿ ಆ ನಾಮಿನೇಷನ್‌ಗೆ ನಾಮಿನೇಟೆಡ್ ಮೆಂಬರ್ಸ್ ಮತ ಕೊಡುವುದಕ್ಕೆ ನಾನು ಒಪ್ಪುವುದಿಲ್ಲ ಇದು ನನ್ನ ವೈಯಕ್ತಿಕವಾದ ಅಭಿಪ್ರಾಯ. ಆದರೆ ನಮ್ಮ ಕ್ಯಾಬಿನೆಟ್‌ನಲ್ಲಿ ಒಮ್ಮತದ ತೀರ್ಮಾನವನ್ನು ಅವರು ತೆಗೆದುಕೊಂಡ ಮೇಲೆ ಅದಕ್ಕೆ ನಾನು ಬದ್ಧನಾಗಿದ್ದೇನೆಯೇ ಹೊರತಾಗಿ ನಾನು ನನ್ನ ವೈಯಕ್ತಿಕ ಅಭಿಪ್ರಾಯಕ್ಕೆ ಇವತ್ತು ನಾನು ಸ್ಟಿಕ್ ಆನ್ ಆಗಿದ್ದೇನೆ ಎನ್ನುವ ಮಾತನ್ನು ಹೇಳಿದ್ದಾರೆ. ಹಾಗೆ ಅಂದಾಗ ಈ ಪ್ರಶ್ನೆ ಅದಕ್ಕೆ ಬಂತು. ಅಂದರೆ ಅವರು ವಿರೋಧ ಮಾಡಿದರೂ ಸಹ ಅವರ ಕ್ಯಾಬಿನೆಟನಲ್ಲಿರ ತಕ್ಕ ಮಂತ್ರಿಮಂಡಲದ ಸದಸ್ಯರು ಒತ್ತಾಯ ಮಾಡಿದ ಮೇಲೆ ಅವರು ಒಪ್ಪಿದ್ದಾರೆ ; So still he has kept his unity, sanctvity...

ಅಧ್ಯಕ್ಷರು : ಸನ್ಮಾನ್ಯ ಹಿರಿಯ ಸದಸ್ಯರಾದ ಮೊಯಿಲಿಯವರು ಆಡಿರತಕ್ಕ ಮಾತುಗಳು ಟೆಕ್ನಿಕಲಿ ಏನೂ ತಪ್ಪಿಲ್ಲ. I simply appealed to him to see whether it is in good taste. ಅನಪಾರ್ಲಿಮೆಂಟರಿ ಮಾತುಗಳನ್ನು ಹೇಳಿದ್ದಾರೆ, ಚಾರ್ಜ್ ಮಾಡಿದ್ದಾರೆ ಎಂದು ನಾನು ಹೇಳಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದು ನಿಮಗೆ ಬಿಟ್ಟಿದ್ದು. ಮಾನ್ಯ ಪ್ರಕಾಶ್‌ರವರು ಏನು ಹೇಳಿದರು ಅದೇ ಮಾತನ್ನು ಈಗ ಹೇಳಬೇಕಾಗಿದೆ. ಆ ಜಾಗದಲ್ಲಿ ಇವರು ಇದ್ದಾರೆಂದು.

ಅಧ್ಯಕ್ಷರು : ಮಾನ್ಯ ಸಹಕಾರ ಮಂತ್ರಿಗಳು ತಾವು ಬೇಗ ಮುಗಿಸಿ; ಡಿಮಾಂಡ್ಸ್ ತೆಗೆದುಕೊಳ್ಳೋಣ.

ಶ್ರೀ ಎಸ್. ಎಸ್.ಪಾಟೀಲ್ (ಸಹಕಾರ ಸಚಿವರು) : ನಾನು ಎರಡು ಕಾಯಿದೆಗಳನ್ನು ತಂದಿದ್ದೇನೆ. ಒಂದು ಸೌಹಾರ್ದ ಕಾಯಿದೆ, ಇನ್ನೊಂದು ಹಿಂದಿನ ಕಾಯಿದೆಗಳಿಗೆ ತಿದ್ದುಪಡಿಗಳನ್ನು ತಂದಿದ್ದೇನೆ. ಸೌಹಾರ್ದ ಕಾಯಿದೆಯಲ್ಲಿ ಸಂಪೂರ್ಣವಾಗಿ ಅಲ್ಲಿ ಸ್ವತಂತ್ರವಾಗಿ ನಡೆಯತಕ್ಕದ್ದು ಇದೆ. ಆ ಕಾಯಿದೆಯಲ್ಲಿ ಒಂದು ಹೇಳಿದ್ದೇವೆ, ಇಲ್ಲಿ ಯಾರಿಗೆ ಬೇಡವಾಗುತ್ತದೆ, ಸರ್ಕಾರದ ಷೇರ್ ಹಣವನ್ನು ತುಂಬಿದರೆ ಆವೊಂದು ಕಾಯಿದೆ ಅಡಿಯಲ್ಲಿ ಹೋಗಲಿಕ್ಕೆ ಅವಕಾಶ ಮಾಡಿದ್ದೇವೆ. ಈ ದೃಷ್ಟಿಯಿಂದ ಇರುವುದರಿಂದ, ಈಗಾಗಲೇ ಆ ರೀತಿಯಲ್ಲಿ ಯಾರು ನಮ್ಮ ಸರ್ಕಾರದ ಅಸಿಸ್ಟೆನ್ಸ್ ತುಂಬುತ್ತಾರೆ ಅದು ತುಂಬಿ ಅವರು ನೇರವಾಗಿ ಅಲ್ಲಿಗೆ ಹೋಗಬಹುದು. ಅದಕ್ಕೂ ಕೂಡ ಅವಕಾಶವನ್ನು ನಾವು ಅಲ್ಲಿ ಕೊಟ್ಟಿದ್ದೇನೆ. ಸ್ವತಂತ್ರವಾಗಿ ನಡೆಯತಕ್ಕ ಒಂದು ವ್ಯವಸ್ಥೆ. ಸರ್ಕಾರದ ಷೇರು ಕೇಳುವ ಹಾಗೆ ಇಲ್ಲ, ಸರ್ಕಾರದ ಯಾವುದೇ ಲೋನ್ ಕೇಳುವ ಹಾಗೆ ಇಲ್ಲ. ಹೀಗೆ ನಾವು ಬಹಳ ಬದಲಾವಣೆಗಳನ್ನು ಮಾಡಿದ್ದೇವೆ. ಇಲ್ಲವೆಂದು ಇಲ್ಲ. ಇದರಿಂದ ಸಂಪೂರ್ಣವಾಗಿ ನೀವು ಸಹಕಾರಿ ಕ್ಷೇತ್ರವನ್ನೇ ಹಾಳು ಮಾಡಿಬಿಟ್ಟಿರಿ ಸಂಪೂರ್ಣವಾಗಿ ನಾಶವಾಗಿಬಿಟ್ಟಿದೆ ಆ ತತ್ವವನ್ನು ಮುರಿದುಬಿಟ್ಟಿರಿ ಎಂದು ಹೇಳುವ ಭಾವನೆ ಸರಿಯಲ್ಲ. ಆ ಕಾರಣಕ್ಕಾಗಿ ಮಾನ್ಯಸದಸ್ಯರು ನನ್ನ ರಾಜೀನಾಮೆಯನ್ನೂ ಕೂಡ ಕೇಳಿದ್ದಾರೆ. ಬಹುಶಃ ನನಗನ್ನಿಸುತ್ತದೆ, ನನ್ನನ್ನು ಆರಿಸಿ ಕಳುಹಿಸಿದಂತಹ ಜನ ಅದನ್ನು ತೀರ್ಮಾನ ಮಾಡುತ್ತಾರೆ. ಅದನ್ನು ಬಿಟ್ಟು ಬೇರೆ ಏನೂ ಮಾಡುವುದಕ್ಕಾಗುವುದಿಲ್ಲ. ನಾನು ಖಂಡಿತವಾಗಿಯೂ ಒಂದು ತತ್ವದ ಅಡಿಯಲ್ಲಿ ಬಂದಿದ್ದೇನೆ. ಆ ಸಿದ್ಧಾಂತದ ಅಡಿಯಲ್ಲಿ ಬಂದಿದ್ದೇನೆ. ನಾನು ಒಂದು ಪಕ್ಷದ ಚಿಹ್ನೆಯ ಅಡಿಯಲ್ಲಿ ಆರಿಸಿ ಬಂದಿದ್ದೇನೆ. ಇದು ಇರುವುದರಿಂದ ಇವೆಲ್ಲವನ್ನು ನಾನು ಕೇಳಿ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ನನಗನಿಸುತ್ತದೆ ನನ್ನ ಆತ್ಮಸಾಕ್ಷಿಯಾಗಿ ಹೇಳುತ್ತೇನೆ, ಅಂತದ್ದೇನೂ ಸಹಕಾರಿ ಕ್ಷೇತ್ರಕ್ಕೆ ದ್ರೋಹ ಬಗೆದಿದ್ದೇನೆಂದು ನನಗೆ ಅನ್ನಿಸುವುದಿಲ್ಲ. ಅಷ್ಟೊಂದು ದ್ರೋಹ ಬಗೆದಿದ್ದರೆ

ಖಂಡಿತವಾಗಿಯೂ ಅವರು ಹೇಳಿದ್ದಕ್ಕೆ ನಾನು ಒಪ್ಪಿಕೊಳ್ಳಬೇಕಾಗಿತ್ತು. ಖಂಡಿತವಾಗಿ ಅಂತಹ ದ್ರೋಹ ಆಗಿಲ್ಲ. ಅದೂ ಕೂಡ ನನ್ನ ಅಭಿಮತವೆಂದು ತಮ್ಮ ಮುಖಾಂತರ ಮಾನ್ಯಸದಸ್ಯರಿಗೆ ಹೇಳಿ ಮತ್ತೊಮ್ಮೆ ನಾನು ಹೇಳುತ್ತೇನೆ ಮಂತ್ರಿ ಮಂಡಲದ ತೀರ್ಮಾನಕ್ಕೆ ಬದ್ಧನಾಗಿದ್ದೇನೆ ಎನ್ನುವ ಮಾತನ್ನು ಕೂಡ ಹೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಚರ್ಚೆಯನ್ನು ಮುಂದುವರಿಸುವುದಿಲ್ಲ. ಏಕೆಂದರೆ, ಮಾರ್ಯಾದೆ ಇದ್ದರೆ ಅವರು ರಾಜೀನಾಮೆಯನ್ನು ಕೊಡಬೇಕಾಗುತ್ತದೆ. ಇಲ್ಲವೆಂದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ನಮಗೆ ನಾಚಿಕೆ ಬರುತ್ತದೆ. ನಾನು ಮೊದಲೇ ಹೇಳಿದ ಹಾಗೆ, ಅವರಿಗೆ ಬರಲಿಕ್ಕೆ ಅದು ಇಲ್ಲವಲ್ಲಾ. ಅವರು ಹೇಳಿದ್ದು ನಾಮಿನೇಟೆಡ್ ಮೆಂಬರ್ಸ್.

ಶ್ರೀ ಎಸ್.ಎಸ್. ಪಾಟೀಲ್ : ಅನ್‌ಪಾರ್ಲಿಮೆಂಟರಿ ಆಗುವುದಿಲ್ಲವೆಂದು ಹೇಳಿ ನಾಚಿಕೆ ಎನ್ನುವ ಶಬ್ದ ಅನ್‌ಪಾರ್ಲಿಮೆಂಟರಿ ಆಗಿಬಿಟ್ಟಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ನನಗೆ ಹೇಳಿದೆ, I feel ashamed ಅಂತ . Whether you feel or not, I don't know.

ಶ್ರೀ ಎಸ್.ಎಸ್.ಪಾಟೀಲ್ : ನನಗೆ ಹೇಳುವುದು ನೇರವಾಗಿ, ನಿಮಗೆ ನಾಚಿಕೆಯಿದ್ದರೆ ರಾಜೀನಾಮೆ ಕೊಡಬೇಕೆಂದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಕೇಳಿ, ನಾನು ಹಾಗೆ ಹೇಳಲಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಹೇಳಿದ್ದೇನೆ. ಮತ್ತೂ ಹೇಳುತ್ತೇನೆ. ನಿಮಗೆ ನಾಚಿಕೆ ಇದ್ದರೆ ರಾಜೀನಾಮೆ ಕೊಡಬೇಕು. ಸರ್ಕಾರದ ಧೋರಣೆಯನ್ನು ನಾನು ಪ್ರತಿಭಟನೆ ಮಾಡುತ್ತೇನೆ. ಸಭಾತ್ಯಾಗ ಮಾಡಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಓಟಿನ ಅಧಿಕಾರ ಕೊಟ್ಟು ಆಫೀಸ್ ಬೇರರ್ ಮಾಡತಕ್ಕದ್ದು ಇವೆಲ್ಲವನ್ನೂ ಕೂಡ ಅವರ ಮನಸ್ಸಿನ ವಿರುದ್ಧ ಅವರು ಮಾಡಿದ್ದಾರೆ. ಮತ್ತು ಈ ಸದನದ ಯುನಾನಿಮಸ್‌ಲಿ ಡಿಸಿಷನ್ ತೆಗೆದುಕೊಂಡು ನಾವು ಅಮೆಂಡ್‌ಮೆಂಟ್ ಮಾಡಿರುವುದಕ್ಕೆ ಇಡೀ ಜನರಿಗೆ ದ್ರೋಹ ಮಾಡಿದಹಾಗೆ. ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ಒಂದು ವೇಳೆ ಅವರು ಅಮೆಂಡ್‌ಮೆಂಟ್ ಮಾಡಬೇಕಾಗಿದ್ದರೂ ಕೂಡ ಈ ಸದನದಲ್ಲಿ ತಂದು ಹೇಳಬೇಕಾಗಿತ್ತು. ಇದು ಯುನಾಮಸ್‌ಲಿ ಪಾಸ್ ಆಗಿರತಕ್ಕದ್ದು ಇದೆ, ಈ ಸಾರಿ ಕೂಡ ಜನರ ದೃಷ್ಟಿಯಿಂದ ಮತ್ತು ಸಾಮಾಜಿಕ ನ್ಯಾಯದ ದೃಷ್ಟಿಯಿಂದ ನಾವು ಇದನ್ನು ಮಾಡುತ್ತಿದ್ದೇವೆ ಎನ್ನತಕ್ಕ ಮಾತನ್ನು ಅವರು ಹೇಳಬೇಕಾಗಿತ್ತು. ಅದನ್ನು ಇವರು ಹೇಳಲಿಲ್ಲ. ಇದನ್ನು ರಾಜಕೀಯವಾಗಿ ದುರುಪಯೋಗ ಮಾಡುವುದಕ್ಕೋಸ್ಕರ ಆರ್ಡಿನೆನ್ಸ್ ತಂದಿದ್ದಾರೆ, ತಮ್ಮ ಸಂಸ್ಥೆಗಳನ್ನು ತಮ್ಮ ಕೈಯಲ್ಲಿ ಉಳಿಸಿಕೊಳ್ಳುವುದಕ್ಕೋಸ್ಕರ ತಂದಿದ್ದಾರೆ. ತಮಗೆ ಬೇಕಾದವರನ್ನು ನಾಮಿನೇಟ್ ಮಾಡಿ ಅವರಿಗೆ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಆಫೀಸ್ ಬೇರರ್ಸ್ ಮಾಡುವುದಕ್ಕೆ ತಂದಿದ್ದಾರೆ ಎನ್ನತಕ್ಕ ಮಾತು ಇದರಲ್ಲಿ ಸ್ಪಷ್ಟವಾಗುತ್ತಿದೆ. ನೀವು ರಾಜೀನಾಮೆ ಕೊಡಬೇಕೆಂದು ಒತ್ತಾಯ ಮಾಡಿದರೂ ಕೂಡ, ನೀವು ಕೊಡುವುದಿಲ್ಲವೆಂದು ಹೇಳುತ್ತೀರಿ. ಅವರ ಮತಕ್ಷೇತ್ರಕ್ಕೆ ಹೋಗಿ, ಮತದಾರರ ಅಭಿಪ್ರಾಯ ಕೇಳಿ, ಕೊಡುತ್ತೇನೆ ಎಂದು ಹೇಳುತ್ತಾರೆ. ತಪ್ಪು ಮಾಡಿದ್ದು ಇಲ್ಲಿ, ಮತಕ್ಷೇತ್ರಕ್ಕೆ ಹೋದಾಗ ಹೇಗೆ ಕೊಡುತ್ತಾರೆ? ನಿಮ್ಮ ರಾಜೀನಾಮೆಯನ್ನು ಇನ್ನು ಒಂದೂವರೆ ತಿಂಗಳಲ್ಲಿ ಕೇಳುತ್ತಾರೆ.

ಆದರೆ, ನೀವು ಇಲ್ಲಿ ಏನು ಹೇಳಿದಿರಿ, ಆತ್ಮಸಾಕ್ಷಿಯಾಗಿ ನಾನು ಒಂದು ಅಕ್ಷರವನ್ನೂ ಬದಲಾವಣೆ ಮಾಡುವುದಿಲ್ಲವೆಂದು ಏನು ಹೇಳಿದಿರಿ, ಅದರ ಪ್ರಕಾರ ನೀವು ಇವತ್ತು ಕೊಡಬೇಕಾಗಿತ್ತು. ಮಾನ್ಯ ಎಂ.ವೈ.ಘೋರ್ಪಡೆ ಯವರು ಇದೇ ಪಂಚಾಯತ್ ಆಕ್ಟ್‌ನ್ನು ನಾವು ಒಪ್ಪಲಿಲ್ಲವೆಂದು ತಿಳಿದುಕೊಂಡು, ಸಚಿವ ಸಂಪುಟದ ವಿರುದ್ಧ ಡಿಸೆಂಟ್ ನೋಟ್ ಕೊಟ್ಟು, ಕೊನೆಗೆ ನಾನು ರಾಜೀನಾಮೆ ಕೊಡುತ್ತೇನೆಯೇ ಹೊರತಾಗಿ ಇದಕ್ಕೆ ನಾನು ಒಪ್ಪುವುದಿಲ್ಲವೆಂದು ಹೇಳಿ ಮನೆಗೆ ಹೋದರು. ಅಷ್ಟಾದರೂ ನಿಮ್ಮಲ್ಲಿ ಕಿಂಚಿತ್ ಸ್ವಾಭಿಮಾನ ಇದ್ದರೆ, ರಾಜೀನಾಮೆ ಕೊಡಿ ಎಂದು ನಾನು ಹೇಳಿದೆ. ಅಧ್ಯಕ್ಷರೆ, ಇವರಿಗೆ ಸ್ವಾಭಿಮಾನವೂ ಇಲ್ಲ. ಆಮೇಲೆ ಕಾನೂನನ್ನು ಸರಿಯಾಗಿ ಜಾರಿಯಲ್ಲಿ ತರಬೇಕೆಂದೂ ಇಲ್ಲ. ಸಾಮಾಜಿಕ ನ್ಯಾಯವನ್ನು ಒದಗಿಸಿಕೊಡಬೇಕೆಂಬ ದೃಷ್ಟಿಯಿಂದ ಬಂದಿದ್ದರೆ, ಜಿಲ್ಲಾ ಅಧ್ಯಕ್ಷರು ಎಷ್ಟಾಗಿದ್ದಾರೆ, ಅಪೆಕ್ಸ್ ಬೋರ್ಡ್‌ನಲ್ಲಿ ಎಷ್ಟು ಜನ ಅಧ್ಯಕ್ಷರನ್ನು ಮಾಡಿದ್ದೀರಿ. ಎಷ್ಟು ಜನ ಡೈರೆಕ್ಟರನ್ನು ಮಾಡಿದ್ದೀರಿ. ಇದೆಲ್ಲಾ ಇವತ್ತು ಹೊರಕ್ಕೆ ಬರಲಿ. ಅದಕ್ಕೆ ಇದು ಯಾವುದೂ ಕೂಡ ಇಲ್ಲ. ರಾಜಕೀಯ ದುರುದ್ದೇಶದಿಂದ ಕೂಡಿದಂಥ ಈ ಒಂದು ಕಾನೂನು ಇದೆ. ಇಂತಹ ಕರಾಳ ಕಾನೂನಿಗೆ ನಾವೆಲ್ಲರೂ ಕೂಡ ಪ್ರತಿಭಟಿಸುತ್ತೇವೆ. ನಾವು ಎಷ್ಟೇ ಮನವರಿಕೆ ಮಾಡಿಕೊಟ್ಟರೂ ಕೂಡ ಅವರು ಒಪ್ಪುತ್ತಾ ಇಲ್ಲ. ಅದಕ್ಕಾಗಿ ನಾವು ಪ್ರತಿಭಟನೆಯನ್ನು ತೋರಿಸಿ ಸಭಾತ್ಯಾಗ ಮಾಡುತ್ತೇವೆ.

(ಈ ಸಂದರ್ಭದಲ್ಲಿ ಕಾಂಗ್ರೆಸ್, ಬಿ.ಜೆ.ಪಿ.ರೈತಸಂಘದ ಸದಸ್ಯರು ಹಾಗೂ ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು.)

ಅಧ್ಯಕ್ಷರು : ನಿಲುವಳಿ ಸೂಚನೆಗೆ ಅನುಮತಿ ತಡೆಹಿಡಿಯಲಾಗಿದೆ. ಶೂನ್ಯವೇಳೆಯ ವಿಷಯಗಳನ್ನು ನಾಳೆ ತೆಗೆದುಕೊಳ್ಳೋಣ. ಈಗ ಬೇಡಿಕೆಗಳ ಬಗ್ಗೆ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಭೈರೇಗೌಡರು ಶೂನ್ಯವೇಳೆಗೋಸ್ಕರ ಕಾದು ಕುಳುತುಕೊಂಡಿದ್ದಾರೆ. ಆದರೆ ತಮ್ಮ ಸಲಹೆ ಪ್ರಕಾರ, ಶೂನ್ಯವೇಳೆ ವಿಚಾರಗಳನ್ನು ತೆಗೆದುಕೊಳ್ಳುವುದಕ್ಕಿಂತ, ಬೇಡಿಕೆಗಳ ಬಗ್ಗೆ ಚರ್ಚೆಗೆ ತೆಗೆದುಕೊಳ್ಳುವುದೇ ಬಹಳ ಒಳ್ಳೆಯದು.

8. ವಿತ್ತೀಯ ಕಾರ್ಯಕಲಾಪಗಳು

1999-2000 ನೇ ಸಾಲಿನ ಈ ಕೆಳಕಂಡ ಅನುದಾನ ಬೇಡಿಕೆಗಳ ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು.

ಬೇಡಿಕೆ ಸಂಖ್ಯೆ :	**ಬೇಡಿಕೆ ಹೆಸರು :**
28	ವೈದ್ಯಕೀಯ ಶಿಕ್ಷಣ
29	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
52	ಸಹಕಾರ
53	ಕ್ರಮಪಡಿಸಿದ ಮಾರುಕಟ್ಟೆಗಳು
54	ಗ್ರಾಮಾಂತರ ನೀರು ಸರಬರಾಜು ಮತ್ತು ನೈರ್ಮಲ್ಯ
55	ಗ್ರಾಮೀಣಾಭಿವೃದ್ಧಿ
26	ವಾರ್ತಾ ಮತ್ತು ಪ್ರಚಾರ
01	ವ್ಯವಸಾಯ
02	ತೋಟಗಾರಿಕೆ